# ಶಿಕ್ಷಣ ವಿಚಾರಗಳು

**ಸಂಪುಟ 1**

## ಶಿಕ್ಷಕರು ಮತ್ತು ಶಿಕ್ಷಕರ ಶಿಕ್ಷಣ

**2021 ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ**

ಈ ಲೇಖನಗಳು ಅಜೀಂ ಪ್ರೇಮ್ ಜಿ ಫೌಂಡೇಷನ್ನು ಭಾರತದಲ್ಲಿ ಶಾಲಾ ಶಿಕ್ಷಣ ವ್ಯವಸ್ಥೆಯ ಮೌಲ್ಯವನ್ನು ಮತ್ತು ಸಮತೆಯನ್ನು ಸುಧಾರಿಸಲು ನಡೆಸಿದ ಪ್ರಯತ್ನದ ಕ್ಷೇತ್ರಕಾರ್ಯದ ಫಲಿತಾಂಶವಾಗಿವೆ. ನಮ್ಮ ಗುರಿಯು, ಶಿಕ್ಷಣ ತಜ್ಞರು ಗಮನಿಸಿದ, ಶಾಲಾ ಶಿಕ್ಷಣವು ಎದುರಿಸುತ್ತಿರುವ ಕೆಲವು ಪ್ರಮುಖ ಸಮಸ್ಯೆಗಳನ್ನು, ಶಾಲೆಗಳನ್ನು ನಡೆಸುವವರಿಗೆ, ಶಿಕ್ಷಣತಜ್ಞರಿಗೆ ಹಾಗೂ ನೀತಿನಿಯಾಮಕರ ಮುಂದೆ ಪ್ರಸ್ತುತ ಪಡಿಸುವುದಾಗಿದೆ. ಈ ಲೇಖನಗಳಲ್ಲಿ ಕಂಡುಬರುವ ವಿಚಾರಗಳು ಲೇಖಕರು/ಸಂಶೋಧನಾ ತಂಡದ ಸ್ವಂತ ವಿಚಾರಗಳಾಗಿದ್ದು ಅವು ಅಜೀಂ ಪ್ರೇಮ್ ಜಿ ಫೌಂಡೇಷನ್ನಿನ ಅಥವಾ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಅಭಿಪ್ರಾಯಗಳಲ್ಲ.

ಈ ಲೇಖನದ ವಿಚಾರಗಳನ್ನು ಶೈಕ್ಷಣಿಕ ಬೋಧನೆಗೆ ಹಾಗೂ ಲಾಭಾಕಾಂಕ್ಷೆಯಿಲ್ಲದ ಉದ್ದೇಶಗಳಿಗೆ ಯಾವುದೇ ಶುಲ್ಕ ನೀಡದೆ ಬಳಸಿಕೊಳ್ಳಬಹುದಾಗಿದೆ. ಆದರೆ ಯಾವುದೇ ವಾಣಿಜ್ಯಿಕ ಉದ್ದೇಶಕ್ಕೆ ಬಳಸಬಾರದು. ಸೃಜನಶೀಲತೆಯ ಸಾಮಾನ್ಯ ಪರವಾನಿಗೆ ಕಾನೂನಿನಡಿಯಲ್ಲಿ ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಯಾವುದೇ ರೀತಿಯ ಮರುಬಳಕೆಯೂ ಕೂಡ ಇದೇ ಕಾನೂನಿನಡಿಯಲ್ಲಿ ರಕ್ಷಿತವಾಗಿದೆ. ಸೃಜನಶೀಲತೆಯ ಸಾಮಾನ್ಯ ಪರವಾನಗಿ: ಉಪಾಧಿ+ವಾಣಿಜ್ಯೇತರ+ಉಲ್ಲೇಖಗಳೂ ಇದೇ ಪರವಾನಿಗೆಯಡಿ ರಕ್ಷಿತಗೊಂಡಿವೆ. ಯಾವುದೇ ಸಂದರ್ಭದಲ್ಲಿ ಇದನ್ನು ಮರುಬಳಸಲು, ಅಥವಾ ಅನುವಾದಿಸಲು, ಅಥವಾ ಮಾರ್ಪಡಿಸಲು ಪ್ರಕಾಶಕರ ಲಿಖಿತ ಅನುಮತಿ ಪಡೆಯುವುದು ಕಡ್ಡಾಯ.

**ಶಿಕ್ಷಣ ವಿಚಾರಗಳು | ಸಂಪುಟ 1**

**ಶಿಕ್ಷಕರು ಮತ್ತು ಶಿಕ್ಷಕರ ಶಿಕ್ಷಣ**

**ಸಂಶೋಧನಾ ತಂಡ | ಅಜೀಂ ಪ್ರೇಮ್ ಜಿ ಫೌಂಡೇಷನ್**

ಸಂಪರ್ಕಿಸಿ: field.research@azimpremjifoundation.org Download from:

ಡೌನ್ ಲೋಡ್: https://azimpremjiuniversity.edu.in/SitePages/research-projects.aspx

# Contents

**ಮುನ್ನುಡಿ** 4

**ಪ್ರಬಂಧ 1** 8

**ಭಾರತದಲ್ಲಿರುವ ಶಿಕ್ಷಕರ ತರಬೇತಿ ಸಂಸ್ಥೆಗಳ ಕ್ಷೇತ್ರ ಸಮೀಕ್ಷೆ (ವೈಶಿಷ್ಟ್ಯ/ರೂಪರೇಷೆ)** 8

**ಪ್ರಬಂಧ 2: ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಭ್ರಷ್ಟಾಚಾರ** 19

**ಪ್ರಮುಖ ಸಾರಾಂಶ ........ 20**

**1.ಪೀಠಿಕೆ........ 21**

**2. ಸಂಶೋಧನಾ ವಿಧಾನ ........ 25**

**3. ಫಲಿತಗಳು: ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿರುವ ಭ್ರಷ್ಟಾಚಾರದ ರೂಪಗಳು ........ 27**

3.1 ಪ್ರಶಿಕ್ಷಕರಿಗೆ ಸಂಬಂಧಿಸಿದ್ದು ........ 27

3.3 ಮೂಲ ಬೋಧನಾ ಸೌಲಭ್ಯಗಳ ಅನುಪಸ್ಥಿತಿ ........ 34

3.4 ಆಳವಾಗಿ ಬೇರೂರಿರುವ ಈ ಭ್ರಷ್ಟಾಚಾರವು ಸುಸ್ಥಿರವಾಗಿರುವುದು ಹೇಗೆ? ........ 37

**ಉಪಸಂಹಾರ** ........ 38

**ಪರಾಮರ್ಶನೆಗಳು........ 39**

ಪ್ರಬಂಧ 3: ಶಿಕ್ಷಕರಿಗೆ ಬೆಂಬಲವನ್ನು ನಿರ್ಲಕ್ಷಿಸುವುದು: ನಮ್ಮ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಶಾಪ 39

**ಪ್ರಮುಖ ಸಾರಾಂಶ ....................................................................................................................40**

**1. ಪೀಠಿಕೆ.......................................................................................................................................42**

**1. ಸಂಶೋಧನಾ ವಿಧಾನ .................................................................................................................44**

**2. ಫಲಿತಗಳು ..................................................................................................................................45**

3.1 ಶಿಕ್ಷಕರ ಕೊರತೆ.........................................................................................................................45

3.2 ಬೋಧಕೇತರ ಚಟುವಟಿಕೆಗಳು ........................................................................................................48

3.3 ನಿರಂತರ ವೃತ್ತಿಕೌಶಲಾಭಿವೃದ್ಧಿಯೆಡೆಗೆ ಗಮನ ಹರಿಸಿರದಿರುವುದು (Inattention to continuous professional development )...........................................................................................................51

3.4 ಶಾಲಾ ಆಧರಿತ ನೆರವು ಮತ್ತು ಮಾರ್ಗದರ್ಶನ ಸಾಲದಿರುವುದು ..........................................................53

3.5 ಬೋಧನೆ-ಕಲಿಕೆ ಸಾಮಗ್ರಿಗಳ ಪೂರೈಕೆಗೆ ಸಂಬಂಧಿಸಿದ ಸವಾಲುಗಳು.....................................................54

**4. ಉಪಸಂಹಾರ.................................................................................................................................57**

ಪ್ರಬಂಧ 4: 58

ಭಾರತದಲ್ಲಿ ಗುತ್ತಿಗೆ/ಹಂಗಾಮಿ ಶಿಕ್ಷಕರು- ಪ್ರಸ್ತುತ ಸ್ಥಿತಿಗತಿ, ಸಮಸ್ಯೆಗಳು ಮತ್ತುಸವಾಲುಗಳು 58

**ಪ್ರಂಮುಖ ಸಾರಾಂಶ ..................................................................................................................58**

1. ಗುತ್ತಿಗೆ ಆಧಾರಿತ ಶಿಕ್ಷಕರ ಉಗಮ ...............................................................................................60

1. ಗುತ್ತಿಗೆ ಆಧಾರಿತ ಶಿಕ್ಷಕರು : ಕಾಲಾನಂತರದ ಪ್ರವೃತ್ತಿ 2014-15 ರಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು ಅತಿ ಹೆಚ್ಚು ಅಂದರೆ 663,074 ಕ್ಕೇರಿತು (ಚಿತ್ರ 1& 2). ಅಲ್ಲಿಂದೀಚೆಗೆ ಇಳಿಮುಖವಾಗುತ್ತಿದ್ದರೂ ಅವರ ಸಂಖ್ಯೆಯು 2017-18 ರವರೆಗೂ 6 ಲಕ್ಷಕ್ಕೂ ಮಿಗಿಲಾಗೇ ಇದೆ ಹಾಗೂ ಒಟ್ಟು ಶಿಕ್ಷಕರ ಸಂಖ್ಯೆಯ ಶೇ.12.7 ರಷ್ಟು ಶಿಕ್ಷಕರು ಗುತ್ತಿಗೆ ಆಧಾರಿತರಾಗಿದ್ದಾರೆ (ಚಿತ್ರ 1& 2). ..65

2. ಲಿಂಗಾಧಾರಿತ ವ್ಯತ್ಯಾಸಗಳು.........................................................................................................73

3. 5. ಗುತ್ತಿಗೆ ಆಧಾರಿತ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುವ ಶಾಲೆಗಳು ..................................................75

4. ಗುತ್ತಿಗೆ ಆಧಾರಿತ ಶಿಕ್ಷಕರು ಖಾಯಂ ಶಿಕ್ಷಕರಂತೆ ಅರ್ಹತೆ ಹೊಂದಿದ್ದಾರೆಯೇ?.............................................82

# ಮುನ್ನುಡಿ

1. **ಶಿಕ್ಷಣದ ಬಗ್ಗೆ ಸರಣಿ ಸಂಚಿಕೆಗಳೇಕೆ?**

ಶಿಕ್ಷಣವು ಎಲ್ಲಾ ಸಮಾಜಗಳಿಗೆ ಮೂಲಭೂತವಾದುದು. ಇದು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಅತ್ಯಂತ ಸಂಘಟಿತ ಪ್ರಕ್ರಿಯೆಯಾಗಿದೆ. ಅದಲ್ಲದೆ ಭಾರತದಂಥ ದೇಶದಲ್ಲಿ ಸಮಾಜವನ್ನು ಏಳಿಗೆಯತ್ತ ಕೊಂಡೊಯ್ಯಲು ಮತ್ತು ನಮ್ಮ ಸಂವಿಧಾನದ ಮೌಲ್ಯಗಳನ್ನು, ದೂರದೃಷ್ಟಿಯನ್ನು ವಾಸ್ತವದಲ್ಲಿ ಕಾಣಲು ಇರುವ ವ್ಯವಸ್ಥಿತ ಪದ್ಧತಿಯಾಗಿದೆ. ಪ್ರಜಾಪ್ರಭುತ್ವ ಸಮಾಜಕ್ಕೆ ಪ್ರಬಲ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯೇ ತಳಹದಿ.

ಭಾರತದ ಶಿಕ್ಷಣ ವ್ಯವಸ್ಥೆಯನ್ನು ಉತ್ತಮಗೊಳಿಸಲು ಪ್ರಮುಖವಾದ ಶೈಕ್ಷಣಿಕ ವಿಚಾರಗಳನ್ನು ಮುಖ್ಯ ಭೂಮಿಕೆಗೆ ತರುವುದೇ ಈ ಶಿಕ್ಷಣದ ಮೇಲಿನ ಸರಣಿಗಳ ಗುರಿಯಾಗಿದೆ. ಇವೆಲ್ಲವು ಮೂಲಭೂತ ವಿಚಾರಗಳಾಗಿದ್ದು ಅತ್ಯಗತ್ಯವಾಗಿ ಪರಿಶೀಲಿಸಬೇಕಾಗಿವೆ. ಈ ಸರಣಿಗಳು ಬಹುತೇಕ ಸಂದರ್ಭದಲ್ಲಿ ಸಂಕೀರ್ಣವಾದ ಶಿಕ್ಷಣ ವ್ಯವಸ್ಥೆಯ ವಾಸ್ತವತೆಯನ್ನು ಕಟ್ಟಿಕೊಡುವುದರೊಂದಿಗೆ ಯಾವುದೇ ರೀತಿಯ ಸ್ಪಷ್ಟ ವಿವರಣೆ ಮತ್ತು ಖಚಿತ ನಿಲುವನ್ನು ನಿರಾಕರಿಸುತ್ತವೆ.

ನಾವು ನಿರಂತರ ಸಂಪರ್ಕ ಹೊಂದಿರುವ 50 ಜಿಲ್ಲೆಗಳ ಹಾಗೂ ಭಾರತ ಸರ್ಕಾರದ ಜೊತೆಗೂಡಿ 15 ರಾಜ್ಯಗಳ ಶಾಲಾ ವ್ಯವಸ್ಥೆಯೊಂದಿಗಿನ ಕಾರ್ಯನಿರ್ವಹಣೆ ಮತ್ತು ನಮ್ಮ 19 ವರ್ಷಗಳ ಅನುಭವವು ಈ ಸರಣಿಗಳಲ್ಲಿ ಹುದುಗಿದೆ. ನಮ್ಮ ಅಜೀಂ ಪ್ರೇಮ್ ಜಿ ಫೌಂಡೇಷನ್ನಿನಲ್ಲಿ ನೇರವಾಗಿ ಹಾಗೂ ಪರೋಕ್ಷವಾಗಿ ಜೊತೆಗೂಡಿರುವ ಲಕ್ಷಾಂತರ ಸಾರ್ವಜನಿಕ ಶಾಲೆಗಳು, ಶಿಕ್ಷಕರು ಮತ್ತು ಶಿಕ್ಷಣ ತಜ್ಞರು ಈ ಸರಣಿಗಳಿಗೆ ಕೊಡುಗೆ ನೀಡಿದ್ದಾರೆ.

ಈ ಸರಣಿಯ ಮೊದಲ ಸಂಪುಟ ಶಿಕ್ಷಕರು ಮತ್ತು ಶಿಕ್ಷಕರ ತರಬೇತಿ.

## 2. ಈ ಸಂಪುಟದ ಬಗ್ಗೆ

ಭಾರತದಲ್ಲಿ 1.5 ದಶಲಕ್ಷ ಶಾಲೆಗಳಲ್ಲಿ ಸುಮಾರು 9 ದಶಲಕ್ಷ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ನೀತಿಯ ಬಗ್ಗೆ ಇರುವ ಎಲ್ಲಾ ಬಗೆಯ ವ್ಯಾಖ್ಯೆ, ವಿವರಣೆಗಳೂ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಿಗಿರುವ ಮಹತ್ವವನ್ನು ಸಾರಿ ಹೇಳುತ್ತವೆ. ಇದೇನೂ ಆಶ್ಚರ್ಯಕರವಲ್ಲ, ಏಕೆಂದರೆ, ಶಿಕ್ಷಣದ ತಿರುಳೇ ಶಿಕ್ಷಕರು ಮತ್ತು ಮಗುವಿನ ಮಧ್ಯೆ ನಡೆಯುವ ಪ್ರಕ್ರಿಯೆ. ಶಿಕ್ಷಣದಲ್ಲಿ ಅಭಿವೃದ್ಧಿಯಾಗಬೇಕಾದರೆ ಬೋಧನೆಯಲ್ಲಿ ಪ್ರಗತಿಯಾಗಬೇಕು, ಬೇರೆ ದಾರಿಯೇ ಇಲ್ಲ.

2019ರ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಕಸ್ತೂರಿ ರಂಗನ್ ಸಮಿತಿಯ ವರದಿಯು, '*ನಮ್ಮ ಸಮಾಜದ ಬಹು ಮುಖ್ಯ ಸದಸ್ಯರೆಂದರೆ ಶಿಕ್ಷಕರು, ಅವರೇ ಬದಲಾವಣೆಯ ದಾರಿದೀಪಗಳು*' ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ. ಈ ಕರಡು ನೀತಿಯು ಉತ್ತಮ ಶಿಕ್ಷಣದ ಹೃದಯವೇ ಶಿಕ್ಷಕರು ಎನ್ನುತ್ತದೆ ಮತ್ತು ಅಂತಹ ಶಿಕ್ಷಕರನ್ನು ತಯಾರು ಮಾಡಲು ಬೇಕಾದ ಕೆಲವು ಕಾರ್ಯಾಚರಣೆಗಳನ್ನು ಸಂಗ್ರಹಿಸಿಕೊಡುತ್ತದೆ. ಅವುಗಳನ್ನು ವಿವರಿಸುವುದಾದರೆ;

- ಶಿಕ್ಷಕರನ್ನು ವೃತ್ತಿಗಾಗಿ ಸಿದ್ಧಗೊಳಿಸಲು ನಾಲ್ಕು ವರ್ಷದ ವರ್ಗವಾರು, ವಿಷಯವಾರು, ಬಹುಶಿಸ್ತೀಯ ಸಂಸ್ಥೆಗಳಿರಬೇಕು
- ಗುಣಮಟ್ಟವಿಲ್ಲದ ಮತ್ತು ಸರಿಯಾಗಿ ಕಾರ್ಯನಿರ್ವಹಿಸದ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಬೇಕು
- ಉತ್ತಮ ಶಿಕ್ಷಕರನ್ನು ನೇಮಕಾತಿ ಮಾಡಲು ವ್ಯಾಪಕತೆಯುಳ್ಳ ಪ್ರಬಲ ನೇಮಕಾತಿ ಯೋಜನೆ ಪ್ರಕ್ರಿಯೆಯನ್ನು ಜಾರಿಗೊಳಿಸಬೇಕು
- 2022 ರ ಹೊತ್ತಿಗೆ '*ಅರೆಕಾಲಿಕ/ಹಂಗಾಮಿ ಶಿಕ್ಷಕರು*' (ಅರ್ಹತೆಯಿಲ್ಲದ, ಗುತ್ತಿಗೆ ಶಿಕ್ಷಕರು) ಎಂಬ ಆಚರಣೆಯನ್ನು ನಿಲ್ಲಿಸಬೇಕು
- ಸಾಕಷ್ಟು ಮೂಲಭೂತ ಸೌಕರ್ಯಗಳು, ಅನುಕೂಲಗಳು ಮತ್ತು ಶಿಕ್ಷಕರ ಕಾರ್ಯವನ್ನು ಸುಗಮವಾಗಿಸಲು ಅಪೇಕ್ಷಿಸುವಂತಹ ವಿದ್ಯಾರ್ಥಿ-ಶಿಕ್ಷಕರ ಅನುಪಾತದೊಂದಿಗೆ ಕಲಿಕಾ ಸಂಪನ್ಮೂಲಗಳನ್ನು ಹೊಂದಿರಬೇಕು
- ಶಾಲಾ ಅವಧಿಯಲ್ಲಿ ಶಿಕ್ಷಕರನ್ನು ಬೋಧನೇತರ ಕಾರ್ಯಗಳಿಗೆ ನಿಯೋಜಿಸಬಾರದು-ಬದಲು ಶಿಕ್ಷಕರು ಯಾವುದೇ ಕಾರಣವಿಲ್ಲದೆ ಗೈರುಹಾಜರಾಗುವುದನ್ನು ತಡೆಯಬೇಕು
- ಶಿಕ್ಷಕ ವೃತ್ತಿಯನ್ನು ಉತ್ತಮಗೊಳಿಸಿಕೊಳ್ಳಲು ನಿರಂತರ ಅನುಕೂಲಕರ ಅನುಸಂಧಾನಗಳಿರಬೇಕು- ಏನನ್ನು ಹೇಗೆ ಕಲಿಯಬೇಕು ಎಂಬುದನ್ನು ಶಿಕ್ಷಕರೇ ಆಯ್ಕೆ ಮಾಡಿಕೊಳ್ಳುವಂತಿರಬೇಕು- ಕೇಂದ್ರೀಕೃತ ಪಠ್ಯಕ್ರಮವಿರಬಾರದು, ಕೃತಕ ಮಾದರಿಯ ತರಬೇತಿಗಳು ಮತ್ತು ಬಲವಂತದ ನಿಯಮಗಳು ಇರಬಾರದು
- ಶಾಲೆಗಳೊಳಗೆ ಪ್ರಬಲ ಅಭಿವೃದ್ಧಿ ಪ್ರಕ್ರಿಯೆಗಳನ್ನು, ಸೂಕ್ತ ಶಾಲಾ ಸಂಸ್ಕೃತಿಯನ್ನು ನಿರ್ಮಿಸುವುದು ಪ್ರತಿಶಾಲೆಯ ಮುಖ್ಯೋಪಾಧ್ಯಾಯರ ಅಥವಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಬೇಕು
- ಭಾರತೀಯ ಭಾಷೆಗಳಲ್ಲಿ ಶಿಕ್ಷಕರಿಗಾಗಿ ಅತ್ಯುತ್ತಮ ಸಂಪನ್ಮೂಲ ಮತ್ತು ಸಾಮಗ್ರಿಗಳಿರಬೇಕು
- ಶೈಕ್ಷಣಿಕ ಬೆಂಬಲ ಸಂಸ್ಥೆಗಳನ್ನು ಶಾಲೆಗಳಿಗಾಗಿ, ಶಿಕ್ಷಕರಿಗಾಗಿ ಪುನಶ್ಚೇತನಗೊಳಿಸುವುದು ಆದ್ಯತೆಯಾಗಬೇಕು
- ಎಲ್ಲಾ ವರ್ಗಗಳ, ಎಲ್ಲಾ ಶಿಕ್ಷಕರಿಗೂ ವೃತ್ತಿಯಲ್ಲಿ ಶಕ್ತವಾದ ಬೆಳವಣಿಗೆ ಕಾಣಲು ಸಮಾನ ಸೇವಾ ಅವಕಾಶಗಳಿರಬೇಕು

2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಆದ್ಯತೆಯನ್ನು ಪುನರ್ಬಲನಗೊಳಿಸುತ್ತದೆ, ಶಿಕ್ಷಕರಿಗೆ ಬೆಲೆ ಕೊಡಬೇಕು ಮತ್ತು ಅವರನ್ನು ಸಶಕ್ತಗೊಳಿಸಬೇಕು ಎಂದು ಒತ್ತಿಹೇಳುತ್ತದೆ. ಇದು ಉತ್ತಮ ಶಿಕ್ಷಕರನ್ನು ಸಿದ್ಧಗೊಳಿಸಲು ಪ್ರಬಲ ಬಹುಶಿಸ್ತೀಯ ಸಂಸ್ಥೆಗಳು, ಅರ್ಥಪೂರ್ಣ ಶಿಕ್ಷಕ ವೃತ್ತಿ ತರಬೇತಿ ಅಭಿವೃದ್ಧಿಗೆ ಅವಕಾಶಗಳು ಅದರೊಂದಿಗೆ ಧನಾತ್ಮಕ ಶಾಲಾ ವಾತಾವರಣ ಮತ್ತು ಎಲ್ಲಾ ಶಿಕ್ಷಕರನ್ನೂ ಸಶಕ್ತಗೊಳಿಸುವ ಸೇವಾ ನಿಯಮಗಳಿರಬೇಕು ಎನ್ನುತ್ತದೆ.

**ಈ ಸಂಪುಟದ ಅಧ್ಯಯನಗಳು**

ಆದ್ದರಿಂದ, ಅಜೀಂ ಪ್ರೇಮ್ ಜಿ ಫೌಂಡೇಷನ್ನಿನ ಈ ಶಿಕ್ಷಣ ಸರಣಿಯಲ್ಲಿ ಶಿಕ್ಷಕರಿಗೆ ಪ್ರಾಮುಖ್ಯ ನೀಡಲಾಗಿದೆ. ಶಿಕ್ಷಕ ವೃತ್ತಿಯ ಸ್ಫೂರ್ತಿ, ಸಾಮರ್ಥ್ಯಕ್ಕೆ ಕೊಡುಗೆ ನೀಡುವ ಮೂರು ಮುಖ್ಯ ಅಂಶಗಳೆಂದರೆ:

- ವೃತ್ತಿಗೆ ಕಾಲಿಡುವ ಮೊದಲು ನಡೆಯುವ ಪೂರ್ವ ಸಿದ್ಧತಾ ಪ್ರಕ್ರಿಯೆ
- ಜೀವನ ಭಾಗವಾದ ವೃತ್ತಿ ಬೆಳವಣಿಗೆಯಲ್ಲಿ ನಿರಂತರ ವೃತ್ತಿ ಕೌಶಲಾಭಿವೃದ್ಧಿ ಪ್ರಕ್ರಿಯೆ
- ಶಿಕ್ಷಕರು ಕಾರ್ಯ ನಿರ್ವಹಿಸುವ ಶಾಲಾ ವಾತಾವರಣ ಮತ್ತು ಅವರು ಪಡೆಯುವ ವೃತ್ತಿ ಬೆಂಬಲ

ಈ ಸಂಪುಟದಲ್ಲಿ ನಾವು, ಶಿಕ್ಷಕ ತರಬೇತಿ ಸಂಸ್ಥೆಗಳ ಕಾರ್ಯ ವೈಖರಿಯನ್ನು ಗಮನಿಸಿದ್ದೇವೆ; ಸಾರ್ವಜನಿಕ ಶಾಲೆಗಳಲ್ಲಿ ಶಿಕ್ಷಕರು ಪಡೆಯುವ ಬೆಂಬಲವನ್ನು ಪರಿಶೀಲಿಸಿದ್ದೇವೆ ಹಾಗೂ ಅವರ ಶಾಲೆಯ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದೇವೆ.

ಈ ಸಂಪುಟದ ಮೊದಲ ಲೇಖನವು ಭಾರತದಾದ್ಯಂತ ಶಿಕ್ಷಕರ ಶಿಕ್ಷಣ ಕುರಿತ ಚಿತ್ರಣ ಕೊಡುವುದರೊಂದಿಗೆ ಪ್ರಾರಂಭವಾಗುತ್ತದೆ. ಇದು 17,503 ಶಿಕ್ಷಕರ ಶಿಕ್ಷಣ ಸಂಸ್ಥೆಗಳನ್ನು ಪರಿಚಯಿಸುತ್ತದೆ. ಅವುಗಳಲ್ಲಿ ಶೇ. 90ಕ್ಕಿಂತ ಹೆಚ್ಚು ವಿದ್ಯಾಸಂಸ್ಥೆಗಳು ಒಂಟಿ ವಿದ್ಯಾಸಂಸ್ಥೆಗಳು, ಕೇವಲ ಒಂದು ಕೋರ್ಸನ್ನು ನಡೆಸುವ ಖಾಸಗಿ ಒಡೆತನದಲ್ಲಿರುವ ನಿಗದಿತ ಪ್ರದೇಶಕ್ಕೆ ಸೇರಿದ ಸಂಸ್ಥೆಗಳಾಗಿವೆ. ಇದು ನಮ್ಮ ವ್ಯವಸ್ಥೆಯ ಅಸಾಮರ್ಥ್ಯವನ್ನು ಬಿಂಬಿಸುತ್ತದೆ. ಪ್ರಬಲ ಬಹುಶಿಸ್ತೀಯ ಸಂಸ್ಥೆಗಳಲ್ಲಿ ದೀರ್ಘಾವಧಿಯ ಕಾರ್ಯಕ್ರಮಗಳ ಮೂಲಕ ಮಾತ್ರ ಉತ್ತಮ ಶಿಕ್ಷಕರನ್ನು ಸಿದ್ಧಗೊಳಿಸಲು ಸಾಧ್ಯ. ಆಳವಾದ ಸೈದ್ಧಾಂತಿಕ ಗ್ರಹಿಕೆಯನ್ನು, ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು, ಶೈಕ್ಷಣಿಕ ದೃಷ್ಟಿಕೋನಗಳನ್ನು, ವಿಷಯ ಬೋಧನೆಯನ್ನು ಹಾಗೂ ಸೈದ್ಧಾಂತಿಕ ಆಚರಣೆಗೆ ಸಂಬಂಧ ಕಲ್ಪಿಸುವುದನ್ನು ಶಿಕ್ಷಕರ ಶಿಕ್ಷಣವು ಒದಗಿಸಬೇಕು. ಇದು ವಿವಿಧ ಶೈಕ್ಷಣಿಕ ವಿಷಯಗಳ ಸಿಬ್ಬಂದಿಯನ್ನು, ಕಲಿಕಾ ಸಂಪನ್ಮೂಲಗಳನ್ನು ಬೇಡುತ್ತದೆ. ಇದರೊಂದಿಗೆ ಇನ್ನಿತರ ಶಿಸ್ತುಗಳನ್ನು ಹೊಂದಿರಬೇಕಾದುದು ಅಗತ್ಯವಾಗಿದ್ದರೂ ಅನೇಕ ಖಾಸಗಿ ವಿದ್ಯಾಸಂಸ್ಥೆಗಳಿಗೆ, ಅದರಲ್ಲೂ ಒಂದೇ ಒಂದು ಕೋರ್ಸನ್ನು ನಡೆಸುವ ಕಾಲೇಜುಗಳಿಗೆ ಇವುಗಳನ್ನು ಒದಗಿಸಲು ಆಗುತ್ತಿಲ್ಲ.

ಎರಡನೇ ಲೇಖನವು, ಭಾರತದ ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಪ್ರಾಯೋಗಿಕ ಅಧ್ಯಯನವಾಗಿದೆ. ಇದು ಬಹು ಸಂಖ್ಯೆಯಲ್ಲಿ ಕಳಪೆ ದರ್ಜೆಯ, ಅಸಾಮರ್ಥ್ಯದಿಂದ ಕೂಡಿದ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಪ್ರಮಾಣ ಪತ್ರ ಮಾರಾಟದ ಕೇಂದ್ರಗಳಾಗಿರುವುದನ್ನು ತೆರೆದು ತೋರಿಸುತ್ತದೆ. ಅಂಥ ಸಂಸ್ಥೆಗಳಲ್ಲಿ, ತೋರಿಕೆಗಾದರೂ ಪ್ರಾಮಾಣಿಕ ಪ್ರಯತ್ನವಿಲ್ಲದಿರುವುದು ಮತ್ತು ಕೊನೇಪಕ್ಷ ಒಂದಿಷ್ಟು ಪಠ್ಯಕ್ರಮ ಅಗತ್ಯಗಳೂ ಇಲ್ಲದಿರುವುದು ಕಂಡುಬರುತ್ತದೆ. ಮೂಲ ಮಾದರಿಗಳೂ ಇಲ್ಲದ, ಗುಣಮಟ್ಟವೂ ಕಾಣದ ಈ ರೀತಿಯ ಸ್ಥಿತಿಗೆ ಅಂಟಿಕೊಂಡಿರುವುದೇ ನಮ್ಮ ಶಿಕ್ಷಕರು ಕಳಪೆ ದರ್ಜೆಯವರಾಗಿರುವುದಕ್ಕೆ ಕಾರಣವಾಗಿದೆ. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ಅಂಥ ಶಿಕ್ಷಣ ಸಂಸ್ಥೆಗಳನ್ನು ಈ ಕೂಡಲೇ ಮುಚ್ಚಬೇಕೆಂದು ಮತ್ತೆಮತ್ತೆ ಹೇಳುತ್ತಿದೆ. ಹಾಗೆ ಮಾಡಲು ನಾವು ರಾಜಕೀಯ ಇಚ್ಛಾಶಕ್ತಿಯನ್ನು, ಆಡಳಿತ ಸಂಕಲ್ಪವನ್ನು ತೋರಬೇಕಾಗಿದೆ. ಶಿಕ್ಷಕರ ಶಿಕ್ಷಣವನ್ನು ಸುಧಾರಿಸುವುದೇ ಭಾರತದಲ್ಲಿ ಶಿಕ್ಷಣ ಸುಧಾರಣೆಯ ಮೂಲ ತಿರುಳಾಗಿದೆ. ಅದು ಸಂಪೂರ್ಣವಾಗಿ ಸುಸ್ಥಿರವಾಗಲು, ಇಡೀ ವ್ಯವಸ್ಥೆಯ ತಳಹದಿಯನ್ನೇ -ಪಠ್ಯಕ್ರಮ ಮತ್ತು ಕಾರ್ಯಾಚರಣೆ- ಎರಡನ್ನೂ ಪುನರ್ ವಿನ್ಯಾಸಗೊಳಿಸಬೇಕಾಗಿದೆ.

ಮೂರನೆ ಲೇಖನವು ಶಿಕ್ಷಕರು ಕಾರ್ಯನಿರ್ವಹಿಸುವ ಪಬ್ಲಿಕ್ ಶಾಲೆಗಳ ವ್ಯವಸ್ಥೆಯ ವಾತಾವರಣವನ್ನು ಪ್ರಾಯೋಗಿಕ ಅಧ್ಯಯನಕ್ಕೆ ಒಳಪಡಿಸುತ್ತದೆ. ನಮ್ಮ ಶಿಕ್ಷಕರನ್ನು ಬೆಂಬಲಿಸುವ ವ್ಯವಸ್ಥೆಯು, ಪ್ರತಿ ಶಾಲೆಗೂ ಸಾಕಷ್ಟು ಶಿಕ್ಷಕರನ್ನು ಒದಗಿಸಲು ಅಥವಾ ಅರ್ಹ ಶಿಕ್ಷಕರು, ಅವರು ಪರಿಣಿತರಾಗಿರುವ ವಿಷಯಗಳನ್ನು ಬೋಧಿಸುವಂತೆ ನೋಡಿಕೊಳ್ಳಲು ಹೆಣಗುತ್ತದೆ. ಶಿಕ್ಷಕರಿಗೆ ಬೋಧನೆಯ ಸಮಯದ ಮಧ್ಯೆ ಅಡ್ಡಿ ಉಂಟು ಮಾಡದಿರುವಂತೆ ಅಥವಾ ಅರ್ಥಪೂರ್ಣ ನಿರಂತರ ವೃತ್ತಿ ಕೌಶಲಾಭಿವೃದ್ಧಿಗೆ ಅವಕಾಶ ಮತ್ತು ಮಾರ್ಗದರ್ಶನಗಳನ್ನು ಕೊಡುತ್ತಿಲ್ಲ. ಸಮಯಕ್ಕೆ ಸರಿಯಾಗಿ ಪಠ್ಯಸಂಬಂಧಿ ಸಾಮಗ್ರಿಗಳನ್ನು ಕೂಡ ಒದಗಿಸುವುದಿಲ್ಲ. ದಕ್ಷ ಮತ್ತು ಸಾಮರ್ಥ್ಯವುಳ್ಳ ಶಿಕ್ಷಕರು ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಶ್ರಮವಹಿಸುತ್ತಾರೆ ಆದರೆ ಸಾಕಷ್ಟು ಬೆಂಬಲ ನೀಡದ ನಮ್ಮ ದಿನಿತ್ಯದ ವ್ಯವಸ್ಥೆಯು ವಾಸ್ತವದಲ್ಲಿ ಶಿಕ್ಷಕರ ಪ್ರಯತ್ನವನ್ನು ನಿರ್ಲಕ್ಷಿಸುತ್ತದೆ. ಅಗತ್ಯ ಮೂಲಸೌಕರ್ಯಗಳನ್ನು ಒದಗಿಸದೆ ಶಿಕ್ಷಕರನ್ನು ಮಕ್ಕಳ ಕಲಿಕೆಗೆ ಜವಾಬುದಾರರನ್ನಾಗಿ ಮಾಡುವುದು ವ್ಯರ್ಥ. ಶಿಕ್ಷಕರಿಗೆ ಕಾರ್ಯನಿರ್ವಹಿಸಲು 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ಉತ್ತಮ ಸಂಪನ್ಮೂಲ ಹೊಂದಿರುವ, ಸೂಕ್ತವಾದ ವಾತಾವರಣವನ್ನು ಒದಗಿಸಲು ಪದೇಪದೇ ಒತ್ತಿ ಹೇಳುತ್ತದೆ.

ನಾಲ್ಕನೆ ಅಧ್ಯಾಯವು ಗುತ್ತಿಗೆ ಆಧಾರದ ಮೇಲೆ ನೇಮಕವಾದ ದೇಶದಾದ್ಯಂತ ಹರಡಿರುವ ಅರೆಕಾಲಿಕ/ಹಂಗಾಮಿ ಶಿಕ್ಷಕರ ವ್ಯಾಪಕತೆಯ ಬಗ್ಗೆ ವಿವರಿಸುತ್ತದೆ. ಈ ಅರೆಕಾಲಿಕ ಶಿಕ್ಷಕರನ್ನು ಕಡಿಮೆ ಅವಧಿಗೆ ತಾತ್ಕಾಲಿಕವಾಗಿ ನೇಮಿಸಕೊಳ್ಳಲಾಗುತ್ತದೆ, ಕಡಿಮೆ ವೇತನ ನೀಡಲಾಗುತ್ತದೆ ಮತ್ತು ಎಲ್ಲೋ ಕೆಲವು ಅಥವಾ ಯಾವುದೇ ಅನುಕೂಲಗಳನ್ನು ಇವರಿಗೆ ಒದಗಿಸುವುದಿಲ್ಲ. ಇಂಥೊಂದು ಕೆಟ್ಟ ಪದ್ಧತಿ ಅಸ್ತಿತ್ವದಲ್ಲಿರುವ ಬಗ್ಗೆ ಅನೇಕ ಸಾಕ್ಷಾಧಾರಗಳಿದ್ದರೂ ಇದು ಈಗಲೂ ಮುಂದುವರೆಯುತ್ತಿದೆ. ಇದು ದೀರ್ಘಾವಧಿಯ ನಷ್ಟವನ್ನು ಶಿಕ್ಷಕವೃತ್ತಿಗಷ್ಟೇ ಉಂಟುಮಾಡುತ್ತಿಲ್ಲ, ವಿದ್ಯಾರ್ಥಿಗಳ ಕಲಿಕೆಯ ಮೇಲೂ ಪ್ರಭಾವ ಬೀರುತ್ತಿದೆ. ನಮ್ಮ ಎಲ್ಲಾ ಕ್ಲಾಸ್ ರೂಮುಗಳು ಅರ್ಹ, ಉತ್ತಮ ತರಬೇತಿ ಹೊಂದಿದ, ಕಠಿಣ ಆಯ್ಕೆ ಪ್ರಕ್ರಿಯೆಯ ಮೂಲಕ ಆಯ್ಕೆಯಾದ ಶಿಕ್ಷಕ ಸಮುದಾಯದ ಅಖಂಡ ಭಾಗವಾದ ಶಿಕ್ಷಕರನ್ನು ಹೊಂದುವಂತಾಗಬೇಕು.

## ಪ್ರಬಂಧ 1

# ಭಾರತದಲ್ಲಿರುವ ಶಿಕ್ಷಕರ ತರಬೇತಿ ಸಂಸ್ಥೆಗಳ ಕ್ಷೇತ್ರ ಸಮೀಕ್ಷೆ (ವೈಶಿಷ್ಟ್ಯ/ರೂಪರೇಷೆ)

ಸಂಶೋಧನಾ ತಂಡ, ಅಜೀಂ ಪ್ರೇಮ್ ಜಿ ಫೌಂಡೇಷನ್

ಶಿಕ್ಷಕರ ಶಿಕ್ಷಣವು ತುಂಬಾ ಸಂಕೀರ್ಣ ಮತ್ತು ಅದು ಅನೇಕ ವಿಷಯಗಳನ್ನು ಅರ್ಥಮಾಡಿಕೊಳ್ಳುವುದನ್ನು ಒಳಗೊಂಡಿದೆ. ಉತ್ತಮ ಶಿಕ್ಷಕರ ಶಿಕ್ಷಣವು ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳಲ್ಲಿ ಪರಿಣತಿಯ ಅವಶ್ಯಕತೆ ಇದೆ- ಆರಂಭಿಕ ಬಾಲ್ಯದ ಶಿಕ್ಷಣ; ವಿಷಯಗಳ ಬೋಧನಾ ವಿಧಾನವನ್ನು ಗ್ರಹಿಸಬೇಕಾಗುತ್ತದೆ; ಮೌಲ್ಯಮಾಪನ ಮಾಡುವುದನ್ನು; ಪಠ್ಯಕ್ರಮ ಮತ್ತು ಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದನ್ನು; ಶಾಲಾ ನಾಯಕತ್ವ ವಹಿಸಿ ನಿರ್ವಹಣೆ ಮಾಡುವುದನ್ನು ಮತ್ತು ಇವುಗಳ ಜೊತೆಗೆ ಮನಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರ, ಶಿಕ್ಷಣದ ಇತಿಹಾಸ ಇವೆಲ್ಲವನ್ನೂ ತಿಳಿದಿರಬೇಕಾಗುತ್ತದೆ.

ಶಿಕ್ಷಕರ ಶಿಕ್ಷಣದಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳ ಪ್ರಬಲ ಶೈಕ್ಷಣಿಕ ಸೈದ್ಧಾಂತಿಕ ದೃಷ್ಟಿಕೋನಗಳ ಗ್ರಹಿಕೆಯನ್ನು ಒದಗಿಸಿಕೊಡಬೇಕಾಗುತ್ತದೆ. ವಿಷಯ ಮತ್ತು ಬೋಧನಾ ವಿಧಾನಗಳನ್ನು ಪ್ರಬಲ ಸಿದ್ಧಾಂತದ ಆಚರಣೆಗಳೊಂದಿಗೆ ಸಂಬಂಧ ಕಲ್ಪಿಸಿರಬೇಕಾಗುತ್ತದೆ. ಇದು ವಿಭಿನ್ನ ಪರಿಣತಿಗಳ ಸಂಪನ್ಮೂಲಗಳನ್ನು ಬೇಡುತ್ತದೆ. ಇತರ ಅನೇಕ ಶಿಸ್ತುಗಳೊಂದಿಗೆ ಮತ್ತು ಶಾಲೆ ಹಾಗೂ ಹಾಲಿ ಬೋಧಿಸುತ್ತಿರುವ ಶಿಕ್ಷಕರೊಂದಿಗೆ ನಿರಂತರ ಸಂಬಂಧವಿಟ್ಟುಕೊಂಡಿರಬೇಕಾಗುತ್ತದೆ.

ಪ್ರಪಂಚದಲ್ಲಿ ಅತ್ಯಂತ ದುರ್ಬಲ ಶಿಕ್ಷಕ ತರಬೇತಿ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ಇದು ಕೇವಲ ಒಂದೇ ಕೋರ್ಸನ್ನು ನಡೆಸುವ ಬಹುಸಂಖ್ಯಾತ ಖಾಸಗಿ ಶಿಕ್ಷಣ ಸಂಸ್ಥೆಗಳ ಮೂಲಕ ಗುರುತಿಸಲ್ಪಟ್ಟಿದೆ. ಅನೇಕ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಪಠ್ಯಕ್ರಮ ಮತ್ತು ತರಗತಿಯ ಪ್ರಕ್ರಿಯೆಗಳಲ್ಲಿ ಕಳಪೆ ಮಟ್ಟದ ದೃಷ್ಟಿಕೋನ ಅಥವಾ ಸಾಮರ್ಥ್ಯಗಳನ್ನು ಬಿತ್ತುತ್ತಿವೆ. ಅಸ್ತಿತ್ವದಲ್ಲಿರುವ ವ್ಯವಸ್ಥೆಯು, ಅಪ್ರಸ್ತುತವಾಗಿದೆ ಮತ್ತು ಇಂದಿನ ಶಾಲೆಗಳ ಹಾಗೂ ಮಕ್ಕಳ ವಾಸ್ತವ ಚಿತ್ರಣದ ಅರಿವೇ ಇಲ್ಲ. ಪ್ರಶಿಕ್ಷಕರ ಸರಾಸರಿ ಅರ್ಹತೆಯು ಬಹಳ ಕಳಪೆ ಮಟ್ಟದಲ್ಲಿದೆ. ಶಿಕ್ಷಕರ ತರಬೇತಿ ಬೇಡುವ ವಿವಿಧ ಬಗೆಯ ಸಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಒದಗಿಸಲು ಒಂದೇ ಕೋರ್ಸ್ ನಡೆಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಷ್ಟ. ಹಾಗಾಗಿ ಶಿಕ್ಷಕರ ತರಬೇತಿಯು ಬೌದ್ಧಿಕತೆ, ವೃತ್ತಿಪರತೆಯಿರುವ ಇತರ ಉನ್ನತ ಶಿಕ್ಷಣಗಳಿಂದ ಪ್ರತ್ಯೇಕಗೊಂಡಿದೆ. ಇಂಥ ಸಂಸ್ಥೆಗಳು, ಇವುಗಳ ಅಸಮಾನ ಭೌಗೋಳಿಕ ಹರಡುವಿಕೆ, ಇವುಗಳಿಂದ ಹೊರಬರುತ್ತಿರುವ ಕಳಪೆ ಫಲಿತಾಂಶ ಇವೆಲ್ಲವೂ ನಮ್ಮ ವ್ಯವಸ್ಥೆಯಲ್ಲಿರುವ ಮೂಲಭೂತ ದೌರ್ಬಲ್ಯವನ್ನು ಸ್ಪಷ್ಟವಾಗಿ ಸೂಚಿಸುತ್ತಿವೆ.

## 1. ಒಂದು ಅವಲೋಕನ

1 ಭಾರತದಲ್ಲಿ 17, 503 ಶಿಕ್ಷಕ ತರಬೇತಿ ಸಂಸ್ಥೆ(ಟಿಇಐ)ಗಳಿವೆ. ಇವು ಪ್ರತಿವರ್ಷ ಒಟ್ಟು 18,86,028 (ಬಹಳ ಕಡಿಮೆ ಸಂಖ್ಯೆಯ ಪ್ರಶಿಕ್ಷಕರನ್ನೂ ಒಳಗೊಂಡಿದೆ) ಶಿಕ್ಷಕರನ್ನು ತರಬೇತುಗೊಳಿಸುವ ಸಾಮರ್ಥ್ಯ ಹೊಂದಿವೆ.

2 ಸುಮಾರು 1,452, ಶಿಕ್ಷಕ ತರಬೇತಿ ಸಂಸ್ಥೆಗಳು 600 ಜಿಲ್ಲಾ ಶಿಕ್ಷಣ ಶಿಕ್ಷಕ ತರಬೇತಿ ಸಂಸ್ಥೆ(ಡಯಟ್)ಗಳನ್ನು ಒಳಗೊಂಡಂತೆ ಸರ್ಕಾರಿ ತರಬೇತಿ ಸಂಸ್ಥೆಗಳಿವೆ. ಉಳಿದ 15,454 (ಸುಮಾರು 92%) ಸಂಸ್ಥೆಗಳು ಖಾಸಗಿಯವರ ಒಡೆತನದಲ್ಲಿವೆ.

3 ಕೆಲವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಮತ್ತೆ ಕೆಲವು ಕಡಿಮೆ ಸಂಖ್ಯೆಯಲ್ಲಿ ಶಿಕ್ಷಕ ತರಬೇತಿ ಸಂಸ್ಥೆ(ಟಿಇಐ)ಗಳನ್ನು- ಬಹುತೇಕ ಖಾಸಗಿ- ಹೊಂದಿವೆ. ಈ ಅಸಮತೋಲನ ಹಂಚಿಕೆಯು ರಾಜ್ಯದೊಳಗೆ ಜಿಲ್ಲಾ ಮಟ್ಟದಲ್ಲಿ ಎದ್ದು ಕಾಣುತ್ತದೆ.

ಎ. ನಾಲ್ಕು ರಾಜ್ಯಗಳು (ಉತ್ತರ ಪ್ರದೇಶ, ರಾಜಾಸ್ತಾನ, ಮಹಾರಾಷ್ಟ್ರ ಮತ್ತು ತಮಿಳುನಾಡು) ದೇಶದ ಒಟ್ಟು 54% ರಷ್ಟು ಸಂಸ್ಥೆಗಳನ್ನು ಹೊಂದಿವೆ.

**ಬಿ**. ಕೇವಲ 12 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪ್ರತಿ ಜಿಲ್ಲೆಗೊಂದರಂತೆ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿವೆ

ಸಿ. ಒಂದು ಜಿಲ್ಲೆಯು ಹೊಂದಿರಬಹುದಾದ ಶಿಕ್ಷಕ ತರಬೇತಿ ಸಂಸ್ಥೆಗಳು ಸೊನ್ನೆಯಿಂದ 300 ರವರೆಗೆ ಇವೆ.

**4.ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ನಡೆಸುವ ಕೋರ್ಸುಗಳು:**

ಎ. ಸುಮಾರು 98% ರಷ್ಟು ಶಿಕ್ಷಕ ತರಬೇತಿ ಸಂಸ್ಥೆಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಶಿಕ್ಷಕ ತರಬೇತಿ ಕೋರ್ಸುಗಳನ್ನು ನಡೆಸುತ್ತಿವೆ

**ಬಿ**. ಸುಮಾರು 1% ನಷ್ಟು ಪೂರ್ವ ಪ್ರಾಥಮಿಕ ತರಬೇತಿಯನ್ನು ನೀಡುತ್ತಿವೆ

ಸಿ. ಸುಮಾರು 7% ರಷ್ಟು ಪ್ರಶಿಕ್ಷಕರನ್ನು ಸಿದ್ಧಗೊಳಿಸುತ್ತಿವೆ

5 64% ನಷ್ಟು ಒಂಟಿ ಸಂಸ್ಥೆಗಳು (ಒಂದೇ ಒಂದು ಶಿಕ್ಷಕ ತರಬೇತಿ ಇರುವ) ಮತ್ತು 31% ರಷ್ಟು ಸಂಸ್ಥೆಗಳು ಕೇವಲ ಒಂದೇ ಒಂದು ಘಟಕವನ್ನು ಹೊಂದಿವೆ.[1]

6 ಪ್ರಾಥಮಿಕ ಶಾಲೆಯ ಶಿಕ್ಷಕ ಹುದ್ದೆ ಪಡೆಯಲು ಅತ್ಯಗತ್ಯವಾಗಿರುವ ಶಿಕ್ಷಕ ಅರ್ಹತಾ ಪರೀಕ್ಷೆ(ಟಿಇಟಿ)ಯಲ್ಲಿ ಉತ್ತೀರ್ಣರಾಗುವವರ ಸಂಖ್ಯೆ ಸುಮಾರು 10% ಎನ್ನುವುದು ಅತ್ಯಂತ ಶೋಚನೀಯ.

---

[1] ಮಾನದಂಡ ಮತ್ತು ಪ್ರಕ್ರಿಯೆ ನಿಯಮಗಳು 2014, ಅಧಿಸೂಚನೆಯು, ಒಂದು ಘಟಕದ ಪ್ರವೇಶಾತಿಯು ಹೆಚ್ಚು ಎಂದರೆ ಎಷ್ಟಿರಬೇಕೆಂದು ಸೂಚಿಸಿದರೂ, ಈ ಸಂಖ್ಯೆಯು ಕೋರ್ಸಿಗೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ಆದರೆ ಸಾಮಾನ್ಯವಾಗಿ 50 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದು. ಪ್ರತಿ ಕೋರ್ಸ್ ನ ಮಾನದಂಡಗಳು ಎಷ್ಟು ಘಟಕಗಳಿಗೆ ಪ್ರವೇಶ ನೀಡಬಹುದು ಎನ್ನುವುದರ ಮೇಲೆ ವ್ಯತ್ಯಾಸವಾಗುತ್ತವೆ.

## 2. ಕೆಲವು ವಿಶೇಷಗಳು

### *2.1 ಭೌಗೋಳಿಕವಾಗಿ ಹರಡಿರುವ ಶಿಕ್ಷಕ ತರಬೇತಿ ಸಂಸ್ಥೆಗಳು*

ಶಿಕ್ಷಕ ತರಬೇತಿ ಸಂಸ್ಥೆಗಳು ಭೌಗೋಳಿಕವಾಗಿ ಹರಡಿರುವುದರಲ್ಲಿ ಅಪಾರ ಅಸಮತೋಲನ ಕಂಡುಬರುತ್ತದೆ. ಐದು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಹತ್ತಕ್ಕೂ ಕಡಿಮೆ ಶಿಕ್ಷಕ ತರಬೇತಿ ಸಂಸ್ಥೆಗಳಿದ್ದರೆ ಏಳು ರಾಜ್ಯಗಳಲ್ಲಿ ಸಾವಿರಕ್ಕೂ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆಗಳಿವೆ.

ಕಿಕ್ಕಿರಿದು ತುಂಬಿರುವ ಈ ಭೂಪಟವು ದೇಶದಾದ್ಯಂತ ಹರಡಿಕೊಂಡಿರುವ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ತೋರಿಸುತ್ತಿದೆ. ಕೆಲವು ರಾಜ್ಯ/ಕೇಂದ್ರಾಡಳಿತ ಗಳಲ್ಲಿ ಹೆಚ್ಚು ಅಥವಾ ಕಡಿಮೆ ಎಂದು ಗುರುತಿಸಲಾಗಿದೆ ಅದು ರಾಜ್ಯದೊಳಗೆ ಜಿಲ್ಲೆಗಳಲ್ಲೂ ಕಂಡುಬರುವುದನ್ನು ತೋರಿಸುತ್ತದೆ.


ಜಮ್ಮು ಕಾಶ್ಮೀರ ಮತ್ತು ಲಡಾಖ್ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಏಕೆಂದರೆ 2019 ರ ವರೆಗೆ ಇವು ಎನ್ ಸಿ ಟಿ ಇ ಯ ಸುಪರ್ದಿಗೆ ಬಂದಿರಲಿಲ್ಲ.

ಆನಂತರದ ಜಮ್ಮು ಕಾಶ್ಮೀರದ ಬದಲಾವಣೆಯನ್ನು ಈ ಭೂಪಟದಲ್ಲಿ ಸೇರಿಸಲಾಗಿಲ್ಲ.


**ಸೂಚನೆ:** ಭೂಪಟಗಳ ನಡುವೆ ಕಂಡುಬರುವ ಅಂತರವು ಸಮರೂಪದಲ್ಲಿಲ್ಲ; ಅವು ಎರಡೂ ಭೂಪಟಗಳಲ್ಲಿ ಬೇರೆಬೇರೆಯಾಗಿವೆ ಕೂಡ. ವ್ಯತ್ಯಾಸಗಳ ಸಾಂದ್ರತೆಯನ್ನು ಸ್ಪಷ್ಟವಾಗಿ ತೋರಿಸಲು ಹಾಗೆ ಮಾಡಲಾಗಿದೆ.

ಚಿತ್ರ 1. ಶಿಕ್ಷಕ ತರಬೇತಿ ಸಂಸ್ಥೆ(ಟಿಇಐ)ಗಳು ರಾಜ್ಯ ಮತ್ತು ಜಿಲ್ಲೆಗಳಾದ್ಯಂತ ಹರಡಿರುವುದು

**ರಾಜ್ಯಗಳಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ**




**ರಾಜ್ಯದ ಜಿಲ್ಲೆಗಳಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ**




ಉತ್ತರಪ್ರದೇಶದಲ್ಲಿ 4,726, ರಾಜಾಸ್ತಾನದಲ್ಲಿ 1,406, ಮಹಾರಾಷ್ಟ್ರದಲ್ಲಿ 1,363, ತಮಿಳುನಾಡಿನಲ್ಲಿ 1,229, ಕರ್ನಾಟಕದಲ್ಲಿ 1,102, ಮಧ್ಯಪ್ರದೇಶದಲ್ಲಿ 1,901 ಮತ್ತು ಆಂಧ್ರಪ್ರದೇಶದಲ್ಲಿ 1,405 ಶಿಕ್ಷಕ ತರಬೇತಿ ಸಂಸ್ಥೆಗಳಿವೆ. ಈಶಾನ್ಯ ರಾಜ್ಯಗಳಲ್ಲಿ 116 ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಅಸ್ಸಾಮ್ ನ್ನು ಹೊರತುಪಡಿಸಿ ಉಳಿದ ರಾಜ್ಯಗಳು 25ಕ್ಕೂ ಕಡಿಮೆ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿವೆ. ರಾಜ್ಯಗಳೆಲ್ಲ ಅತ್ಯಂತ ಕಡಿಮೆ, (8)[2]. ಶಿಕ್ಷಕ ತರಬೇತಿ ಸಂಸ್ಥೆ ಗಳಿರುವುದು ಸಿಕ್ಕಿಮ್ ನಲ್ಲಿ.

[2] ಎನ್ ಸಿ ಟಿ ಇ ಗುರುತಿಸಿದ ಸಂಸ್ಥೆಗಳು. ತಿದ್ದುಪಡಿ 15 ಜೂನ್ 2020. https://ncte.gov.in/Website/RecognizedInstitutions.aspx

ಬಹುಸಂಖ್ಯೆಯಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳಿರುವುದು ಖಾಸಗಿ ಒಡೆತನದಲ್ಲಿ. ಸುಮಾರು ಪ್ರತಿ ಒಂದು ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗೆ(ಸರ್ಕಾರಿ 1,452: ಖಾಸಗಿ 15,464) 11 ಖಾಸಗಿ ಸಂಸ್ಥೆಗಳಿವೆ. ಉತ್ತರಪ್ರದೇಶದಲ್ಲಿ ಈ ಅನುಪಾತವು 1:55 ಆಗಿದೆ. ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಅಡ್ಡಾದಿಡ್ಡಿಯಾಗಿ ಹರಡಿಕೊಂಡಿವೆ. ದೇಶದಲ್ಲಿ ಒಟ್ಟಾರೆಯಿರುವ ಖಾಸಗಿ ಸಂಸ್ಥೆಗಳಲ್ಲಿ 54% ರಷ್ಟು ಉತ್ತರಪ್ರದೇಶ, ರಾಜಾಸ್ತಾನ, ಮಹಾರಾಷ್ಟ್ರ ಮತ್ತು ತಮಿಳುನಾಡುಗಳಲ್ಲಿವೆ. ಇತರ ಏಳು ರಾಜ್ಯಗಳು ಒಂದು ಸಾವಿರಕ್ಕಿಂತಲೂ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿದ್ದರೆ, ಉಳಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಹತ್ತಕ್ಕಿಂತಲೂ ಕಡಿಮೆ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿವೆ.

ಈ ರೀತಿಯ ಅಸಮತೋಲನವು ಜಿಲ್ಲೆಗಳ ಮಟ್ಟದಲ್ಲೂ ಮುಂದುವರೆಯುತ್ತದೆ, ಸೊನ್ನೆ ಯಿಂದ 300 ಸಂಸ್ಥೆಗಳಿಗೆ ಹರಡಿಕೊಂಡಿದೆ. ಇದರರ್ಥ ಎಲ್ಲಾ ಜಿಲ್ಲೆಗಳಲ್ಲೂ ಒಂದಾದರೂ ಶಿಕ್ಷಕ ತರಬೇತಿ ಸಂಸ್ಥೆಗಳು ಇವೆ ಎಂದಲ್ಲ, ಉದಾ: ಛತ್ತೀಸಘಢ್ ದ 28 ಜಿಲ್ಲೆಗಳಲ್ಲಿ 11 ರಲ್ಲಿ ಒಂದೂ ಶಿಕ್ಷಕ ತರಬೇತಿ ಸಂಸ್ಥೆಗಳು ಇಲ್ಲ, ಉತ್ತರಪ್ರದೇಶದ ಘಾಜಿಪುರ್ ಜಿಲ್ಲೆಯಲ್ಲಿ 300 ಶಿಕ್ಷಕ ತರಬೇತಿ ಸಂಸ್ಥೆಗಳು ಇವೆ. ಕೇವಲ 12 ರಾಜ್ಯಗಳು ತಮ್ಮ ಎಲ್ಲಾ ಜಿಲ್ಲೆಗಳಲ್ಲಿ ಒಂದೊಂದು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿವೆ.

ರಾಜ್ಯ/ಕೇಂದ್ರಾಡಳಿತಗಳಲ್ಲಿ ಇರುವ ಶಿಕ್ಷಕ ತರಬೇತಿ ಸಂಸ್ಥೆಗಳನ್ನು, ಕಾಲೇಜುಗಳನ್ನು ಹೋಲಿಸಿ ನೋಡಿದಾಗ ಅರ್ಧದಷ್ಟು ಶಿಕ್ಷಕ ತರಬೇತಿ ಸಂಸ್ಥೆಗಳು ಖಾಸಗಿ; 17-30 ರ ವಯಸ್ಸಿನ (ಶಿಕ್ಷಕ ತರಬೇತಿ ಸಂಸ್ಥೆಗೆ ಸೇರಲು ಸೂಕ್ತ ವಯಸ್ಸು) ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡಿವೆ. ಇದೇ ಅಸಮತೋಲನ ಸಮೀಕ್ಷೆ ನಡೆಸಿದ ಎಲ್ಲಾ ರಾಜ್ಯಗಳಲ್ಲಿ ಕಂಡುಬರುತ್ತದೆ.[3]

### *2.2 ಶಿಕ್ಷಕರನ್ನು ತರಬೇತುಗೊಳಿಸುವ ಕೋರ್ಸ್‌ಗಳನ್ನು ನಡೆಸುತ್ತಿರುವ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು*

ಖಾಸಗಿ ಒಡೆತನದಲ್ಲಿರುವ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಹೆಚ್ಚು, 62% ರಷ್ಟು ಬಿಎಡ್, ಡಿಎಲ್ಇಡಿ ಕೋರ್ಸ್‌ಗಳನ್ನು ನಡೆಸುತ್ತಿವೆ. ಇವು ಶಿಕ್ಷಕರನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗೆ ತರಬೇತುಗೊಳಿಸುತ್ತವೆ. ಕೋಷ್ಟಕ 1 ಶಿಕ್ಷಕ ತರಬೇತಿ ಕೋರ್ಸ್‌ಗಳು ಹೇಗೆ ಹಂಚಿಕೆಯಾಗಿವೆ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 1. ಶಿಕ್ಷಕರನ್ನು ತರಬೇತುಗೊಳಿಸುವ ಹಂತಗಳು**

| ಕ್ರಮ ಸಂಖ್ಯೆ | ಶಿಕ್ಷಕರು ತರಬೇತಿಗೊಳ್ಳುವ ಹಂತ | ಕೋರ್ಸ್ ನಡೆಸುತ್ತಿರುವ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು |
|---|---|---|
| 1 | ಪ್ರಾಥಮಿಕ ಮತ್ತು ಮಾಧ್ಯಮಿಕ | 15113 |
| 2 | ಪೂರ್ವ ಪ್ರಾಥಮಿಕ | 140 |
| 3 | ದೈಹಿಕ ಶಿಕ್ಷಣ | 734 |
| 4 | ದೃಶ್ಯ ಮತ್ತು ಪ್ರದರ್ಶನ ಕಲೆ | 0 |
| 5 | ಪ್ರಶಿಕ್ಷಕರು | 1144 |

[3] ಉನ್ನತ ಶಿಕ್ಷಣ ಸಮೀಕ್ಷೆ, ಭಾರತ 2018-19. http://aishe.nic.in/aishe/viewDocument.action?documentId=262

ಕೆಲವು ರಾಜ್ಯ/ಕೇಂದ್ರಾಡಳಿತಗಳು ನಿಗದಿತ ಕೋರ್ಸುಗಳನ್ನು ಅತಿ ಹೆಚ್ಚಾಗಿ ನಡೆಸುತ್ತಿದ್ದರೆ ಮತ್ತೆ ಕೆಲ ರಾಜ್ಯದಲ್ಲಿ ಅತಿ ಕಡಿಮೆ ಇವೆ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ 2,565 ಸಂಸ್ಥೆಗಳು ಮಾಧ್ಯಮಿಕ ಶಿಕ್ಷಕ ತರಬೇತಿ ಕೊಟ್ಟರೆ, 2,823 ಪ್ರಾಥಮಿಕ ಶಿಕ್ಷಕ ತರಬೇತಿ ನೀಡುತ್ತಿವೆ, ಕೇವಲ 34 ಸಂಸ್ಥೆಗಳು ಪೂರ್ವ ಪ್ರಾಥಮಿಕ ತರಬೇತಿ ನೀಡುತ್ತಿವೆ. ಮತ್ತೊಂದೆಡೆ ಒಟ್ಟಾರೆ 8 ಈಶಾನ್ಯ ರಾಜ್ಯಗಳಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳು ಇರುವುದು 118 ಮಾತ್ರ (95 ಮಾಧ್ಯಮಿಕ, 23 ಪ್ರಾಥಮಿಕ). ಈ ರಾಜ್ಯಗಳಲ್ಲಿ, ಅಸ್ಸಾಮ್ ನಲ್ಲಿ ಅತಿ ಹೆಚ್ಚು 56 ಶಿಕ್ಷಕ ತರಬೇತಿ ಸಂಸ್ಥೆ ಗಳಿವೆ, ಇವುಗಳಲ್ಲಿ 53 ರಲ್ಲಿ ಬಿಎಡ್ ಕೋರ್ಸನ್ನು, 16 ರಲ್ಲಿ ಡಿಇಎಲ್ಎಡ್ ಕೋರ್ಸುಗಳನ್ನು ನಡೆಸಲಾಗುತ್ತಿದೆ ಮತ್ತು ಈ ಯಾವ ರಾಜ್ಯಗಳಲ್ಲೂ ಪೂರ್ವ ಪ್ರಾಥಮಿಕ ಹಂತದ ತರಬೇತಿ ನೀಡುವ ಖಾಸಗಿ ಸಂಸ್ಥೆಗಳಿಲ್ಲ.

## ***2.3 ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ನಡೆಸುತ್ತಿರುವ ಕೋರ್ಸುಗಳ ಸಂಖ್ಯೆ***

ಒಟ್ಟು ಇರುವ 15,464 ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ 9,971, ಅಂದರೆ 64% ಸಂಸ್ಥೆಗಳು ಒಂಟಿ ಸಂಸ್ಥೆಗಳಾಗಿವೆ(ಕೇವಲ ಒಂದೇ ಶಿಕ್ಷಕ ತರಬೇತಿ ಕೋರ್ಸ್ ನಡೆಸುವುದು). ಇವುಗಳಲ್ಲಿ ಬಹುತೇಕ ಶಿಕ್ಷಕ ತರಬೇತಿ ಸಂಸ್ಥೆಗಳು (9,938) ಎರಡು ವರ್ಷದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕ ತರಬೇತಿ ಕೋರ್ಸುಗಳನ್ನು ನಡೆಸುತ್ತವೆ ಎಲ್ಲೋ ಕೆಲವು ಪ್ರಶಿಕ್ಷಕರನ್ನು ತರಬೇತುಗೊಳಿಸುತ್ತವೆ. ಇಂಟೆಗ್ರೇಟೆಡ್ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕ ತರಬೇತಿಯನ್ನು ನಡೆಸುವವು ಬೆರಳೆಣಿಕೆಯಷ್ಟು, ಕೇವಲ 8 ಮಾತ್ರ. ಮತ್ತೊಂದೆಡೆ ಹೆಚ್ಚುಕಡಿಮೆ 1/3 ಭಾಗದಷ್ಟು ಶಿಕ್ಷಕ ತರಬೇತಿ ಸಂಸ್ಥೆಗಳು (5,493) ವಿವಿಧ ಕೋರ್ಸುಗಳನ್ನು ನಡೆಸುತ್ತವೆ ಮತ್ತು ಇವುಗಳಲ್ಲಿ 1,112 ಶಿಕ್ಷಕ ತರಬೇತಿ ಸಂಸ್ಥೆಗಳು ಶಿಕ್ಷಕರನ್ನು ತರಬೇತುಗೊಳಿಸುವುದರೊಂದಿಗೆ ಪ್ರಶಿಕ್ಷಕರನ್ನೂ ತರಬೇತುಗೊಳಿಸುತ್ತಿವೆ.

ಕೋಷ್ಟಕ 2. ನಿಗದಿತ ಕೋರ್ಸನ್ನು ನಡೆಸುತ್ತಿರುವ ಶಿಕ್ಷಕ ತರಬೇತಿ ಸಂಸ್ಥೆಗಳು(ಎಲ್ಲಾ ಸೇರಿ) ಮತ್ತು ಕೋರ್ಸುಗಳ ಪ್ರವೇಶಾತಿ ಸಂಖ್ಯೆ

ಸೂಚನೆ: ಕೆಲವು ಸಂಸ್ಥೆಗಳು ಒಂದಕ್ಕಿಂತ ಹೆಚ್ಚು ಕೋರ್ಸುಗಳನ್ನು ನಡೆಸುತ್ತಿರುವುದರಿಂದ ಮತ್ತೆ ಮತ್ತೆ ಬಂದಿವೆ. ನಿಜವಾಗಿ ಇರುವ ಒಟ್ಟು ಸಂಸ್ಥೆಗಳು

| | ಕೋರ್ಸಿನ ಹೆಸರು | ಕೋರ್ಸನ್ನು ನಡೆಸುತ್ತಿರುವ ಸಂಸ್ಥೆಗಳು (ಎಲ್ಲಾ ಸೇರಿ) | ಒಟ್ಟು ಪ್ರವೇಶಾತಿ | ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆ ಯ ಕೋರ್ಸುಗಳು | ಒಟ್ಟು ಪ್ರವೇಶಾತಿ@ (ಖಾಸಗಿ) |
|---|---|---|---|---|---|
| 1 | ಬಿ ಎಡ್* | 10034 | 994270 | 9517 | 946200 |
| 2 | ಡಿ ಎಲ್ ಎಡ್** | 10577 | 669065 | 9583 | 592260 |
| 3 | ಬಿ ಎಲ್ ಎಡ್ | 102 | 5900 | 95 | 5560 |
| 4 | ಡಿ ಪಿ ಎಡ್ | 155 | 8475 | 145 | 7920 |
| 5 | ಬಿ ಪಿ ಎಡ್ | 665 | 52290 | 589 | 45890 |
| 6 | ಡಿ ಪಿ ಎಸ್ ಇ | 166 | 9580 | 140 | 8230 |
| 7 | ಎಂ ಎಡ್ | 1204 | 61180 | 1045 | 52730 |
| 8 | ಎಂ ಪಿ ಎಡ್ | 167 | 8095 | 112 | 5550 |
| 9 | ಬಿಎ/ಬಿಎಸ್ಸಿ ಬಿ ಎಡ್ | 703 | 63660 | 674 | 61110 |
| 10 | ಬಿ ಎಡ್ ಎಂ ಎಡ್ (ಇಂಟಿಗ್ರೇಟಡ್) | 24 | 1250 | 16 | 850 |
| 11 | ಡಿ ಎ ಎಡ್ # | 2 | 100 | 0 | 0 |
| 12 | ಇತರೆ ## | 213 | 12163 | 177 | 9055 |

16917(ಸಾರ್ವಜನಿಕ 1453, ಖಾಸಗಿ 15464)

*ಇದು ಮುಕ್ತ ವಿವಿ ಮತ್ತು ಅರೆಕಾಲಿಕ ಬಿಎಡ್ ನ್ನು ಒಳಗೊಂಡಿಲ್ಲ

** ಇದು ಮುಕ್ತ ವಿವಿಯ ಡಿ ಇಎಲ್ ಎಡ್ ನ್ನು ಒಳಗೊಂಡಿಲ್ಲ

#ಡಿಪ್ಲೊಮಾ ಇನ್ ಆರ್ಟ್ಸ್ ಎಜುಕೇಶನ್ (ದೃಶ್ಯ ಕಲೆ) ಮತ್ತು ಫರ್ಫಾಮಿಂಗ್ (ಪ್ರದರ್ಶನ ಕಲೆ)

## ಮುಖ್ಯವಾಗಿ ಎಚ್ ಪಿ ಟಿ (54), ಪಿಪಿಟಿಟಿಇ (40), ಸಿ ಪಿ ಎಡ್ (26), ನರ್ಸರಿ(11) ಇತ್ಯಾದಿ ಒಳಗೊಂಡಿದೆ

@ ಪ್ರವೇಶಾತಿ ಪಡೆಯಬಹುದಾದ ವಿದ್ಯಾರ್ಥಿಗಳ ಅತಿ ಹೆಚ್ಚು ಸಂಖ್ಯೆಯನ್ನು ತೋರಿಸುತ್ತದೆಯೇ ಹೊರತು ವಾಸ್ತವವಾಗಿ ಪ್ರವೇಶ ಪಡೆದಿರುವ ಸಂಖ್ಯೆಯನ್ನಲ್ಲ.

ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಎಂಜಿನಿಯರಿಂಗ್ ಮತ್ತು ವೈದ್ಯಕೀಯದಂತಹ ವೃತ್ತಿಪರ ಕೋರ್ಸುಗಳ ಜೊತೆಯಲ್ಲಿ ಶಿಕ್ಷಕ ತರಬೇತಿ ಕೋರ್ಸುಗಳನ್ನು ನಡೆಸುತ್ತಿರುವ ದೊಡ್ಡ ಕಥಾನಕವೇ ಇದೆ; ಆದರೆ ಕೇವಲ ಸಾಮಾನ್ಯ ಪದವಿಯೊಂದಿಗೆ ಶಿಕ್ಷಕ ತರಬೇತಿ ಕೋರ್ಸುಗಳನ್ನು ನಡೆಸುತ್ತಿರುವ ಸಂಸ್ಥೆಗಳೇ ಇಲ್ಲ.

## **2.4 ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ *ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಮೂರು ಜಿಲ್ಲೆಗಳು***

ಈ ವಿಭಾಗವು ಅತಿ ಹೆಚ್ಚು ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಮೂರು ಜಿಲ್ಲೆಗಳನ್ನು ಕುರಿತು ವಿಸ್ತಾರವಾಗಿ ವಿವರಿಸುತ್ತದೆ. ಇವು ಇಲ್ಲಿಯವರೆಗೆ ಎತ್ತಿ ಹೇಳಿದ ಸಮಸ್ಯೆಗಳನ್ನು ವರ್ಣಿಸುತ್ತವೆ.

### **ಉತ್ತರಪ್ರದೇಶದ ಘಾಜಿಪುರ್**

ಇಡೀ ಭಾರತದಲ್ಲಿಯೇ ಅತಿ ಹೆಚ್ಚು ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ ಉತ್ತರಪ್ರದೇಶದ ಘಾಜಿಪುರ್. ಇದು 300 ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿದೆ ಅವುಗಳಲ್ಲಿ 298 ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು. ಇದಲ್ಲದೆ ಈ ಜಿಲ್ಲೆಯಲ್ಲಿ ಇತರ ಪದವಿಗಳ 302 ಕಾಲೇಜುಗಳೂ ಇವೆ (ಈ ಕಾಲೇಜುಗಳಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳು ಇರಬಹುದು).

ಘಾಜಿಪುರ್ ದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಮೂರು ಸಾಮಾನ್ಯ ಕಾಲೇಜುಗಳಿವೆ ಮತ್ತು ಎಂಟು ಶಿಕ್ಷಕ ತರಬೇತಿ ಸಂಸ್ಥೆ ಗಳಿವೆ. ಜಿಲ್ಲೆಯ ಮೂರು ಮುಖ್ಯ ಪ್ರದೇಶಗಳಲ್ಲಿ, ಘಾಜಿಪುರ್ (76) ಜಖಾನಿಯಾ (91) ಸೈಧಪುರ್ (83) ಗಳಲ್ಲಿ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆ ಗಳಿವೆ.

ಈ 300 ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ 242 ಒಂಟಿ ಸಂಸ್ಥೆಗಳಾಗಿವೆ. ಇವು ಬಿಎಡ್ (68) ಅಥವಾ ಡಿ ಎಲ್ ಎಡ್ (172) ಅಥವಾ ಬಿ ಪಿ ಎಡ್ (2) ಗಳಂಥ ಒಂದೇ ಕೋರ್ಸುಗಳನ್ನು ನಡೆಸುತ್ತಿವೆ.

ಉಳಿದವುಗಳಲ್ಲಿ, 55 ಶಿಕ್ಷಕ ತರಬೇತಿ ಸಂಸ್ಥೆಗಳು ಎರಡು ಕೋರ್ಸುಗಳನ್ನು ನಡೆಸುತ್ತಿವೆ: 51 ಬಿ ಎಡ್, ಬಿ ಎಲ್ ಎಡ್ ಗಳನ್ನು; 2 ಶಿಕ್ಷಕ ತರಬೇತಿ ಸಂಸ್ಥೆಗಳು ಬಿ ಎಡ್, ಬಿ ಪಿ ಎಡ್ ಗಳನ್ನು, ಒಂದು  ಡಿ ಎಲ್ ಎಡ್ ಮತ್ತು ಬಿ ಪಿ ಎಡ್ ನ್ನು ನಡೆಸುತ್ತಿವೆ. ಮೂರು ಮಾತ್ರ ಮೂರು ಕೋರ್ಸುಗಳನ್ನು, ಒಂದು ಬಿ ಎಡ್, ಬಿ ಪಿ ಎಡ್ ಮತ್ತು ಡಿ ಪಿ ಎಡ್; ಒಂದು ಬಿ ಎಡ್, ಎಂ ಎಡ್ ಮತ್ತು ಡಿ ಎಲ್ ಎಡ್ ಮತ್ತು ಒಂದು ಬಿ ಎಡ್, ಎಂ ಎಡ್ ಮತ್ತು ಬಿ ಪಿ ಎಡ್ ನಡೆಸುತ್ತಿವೆ.

ದತ್ತಾಂಶವನ್ನು ವಿಶ್ಲೇಷಿಸಿದಾಗ ಕೆಲವು ಶಿಕ್ಷಕ ತರಬೇತಿ ಸಂಸ್ಥೆಗಳು ಅಕ್ಕಪಕ್ಕದಲ್ಲಿಯೇ ಇರುವುದು ಮತ್ತೆ ಕೆಲವು ಒಂದೇ ವಿಳಾಸವನ್ನು ಹೊಂದಿರುವುದು ಕಂಡುಬರುತ್ತದೆ.

**ರಾಜಾಸ್ತಾನದ ಜೈಪುರ್**

ಭಾರತದಲ್ಲಿ ಎರಡನೇ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ ರಾಜಾಸ್ತಾನದ ಜೈಪುರ್. ಇದು 259 ಸಂಸ್ಥೆಗಳನ್ನು ಹೊಂದಿದೆ, ಇವುಗಳಲ್ಲಿ 247 ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು.

ಒಂದು ಲಕ್ಷ ಜನಸಂಖ್ಯೆಗೆ ಎಂಟು ಶಿಕ್ಷಕ ತರಬೇತಿ ಸಂಸ್ಥೆ ಗಳಿವೆ. 259 ಸಂಸ್ಥೆಗಳಲ್ಲಿ, 175 ಕೇವಲ ಒಂದು ಕೋರ್ಸನ್ನು, ಬಿ ಎಡ್ (114) ಅಥವಾ ಡಿ ಎಲ್ ಎಡ್ (61) ನ್ನು ನಡೆಸುತ್ತಿವೆ. ಇನ್ನುಳಿದ 84 ರಲ್ಲಿ, 54 ಎರಡು ಕೋರ್ಸುಗಳನ್ನು, ಬಿ ಎಡ್ ಮತ್ತು ಡಿ ಎಲ್ ಎಡ್; 21 ಸಂಸ್ಥೆಗಳು ಮೂರು ಕೋರ್ಸುಗಳನ್ನು, ಬಿ ಎಡ್, ಡಿ ಎಲ್ ಎಡ್, ಬಿಎ/ಬಿಎಸ್ಸಿ ಬಿ ಎಡ್ ಮತ್ತು ಎಂ ಎಡ್; 4 ಸಂಸ್ಥೆಗಳು 4 ಕೋರ್ಸುಗಳನ್ನು ಮತ್ತು ಒಂದು ಸಂಸ್ಥೆ 5 ಕೋರ್ಸುಗಳನ್ನು ನಡೆಸುತ್ತಿವೆ. 4 ಸಂಸ್ಥೆಗಳ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ.

ದತ್ತಾಂಶವನ್ನು ವಿಶ್ಲೇಷಿಸಿದಾಗ ಕೆಲವು ಶಿಕ್ಷಕ ತರಬೇತಿ ಸಂಸ್ಥೆಗಳು ಅಕ್ಕಪಕ್ಕದಲ್ಲಿಯೇ ಇರುವುದು, ಉದಾಹರಣೆಗೆ, 8 ಸಂಸ್ಥೆಗಳು ಒಂದೇ ಬಡಾವಣೆಯಲ್ಲಿವೆ. ಮತ್ತೊಂದು ಸನ್ನಿವೇಶದಲ್ಲಿ ಐದು ಸಂಸ್ಥೆಗಳು ಒಂದೇ ಕಡೆ ಇವೆ. ಅನೇಕ ಸಂಸ್ಥೆಗಳ ಹೆಸರೂ ಒಂದೇ ತರ ಇದೆ.

**ಕರ್ನಾಟಕದ ಬೆಂಗಳೂರು**

ಹೆಚ್ಚು  ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಬೆಂಗಳೂರು ಆರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿರುವ 1,102 ಸಂಸ್ಥೆಗಳಲ್ಲಿ 204 ಬೆಂಗಳೂರಿನಲ್ಲಿವೆ. ಅಂದರೆ ರಾಜ್ಯದ ಐದು ಅಥವಾ ಆರನೆ ಸಂಸ್ಥೆ ಬೆಂಗಳೂರಿನಲ್ಲಿದೆ. ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳನ್ನು ಒಟ್ಟು ಸೇರಿಸಿ 1,125 ಸಂಸ್ಥೆಗಳಿವೆ (ಗ್ರಾಮಾಂತರ ಮತ್ತು ನಗರ ಜಿಲ್ಲೆ ಎರಡೂ ಸೇರಿ) ಎಂದು ಲಭ್ಯವಿರುವ ದತ್ತಾಂಶ ಹೇಳುತ್ತದೆ.

ಅನೇಕ ಸಂಸ್ಥೆಗಳು ಡಿ ಎಲ್ ಎಡ್ (60%) ಮತ್ತು ಬಿ ಎಡ್ (30%) ಕೋರ್ಸುಗಳನ್ನು ನಡೆಸುತ್ತವೆ. ಬಹುತೇಕ ಸಂಸ್ಥೆಗಳು (204 ರಲ್ಲಿ 127) ಒಂದೇ ಕೋರ್ಸನ್ನು, ಡಿ ಎಲ್ ಎಡ್ (104), ಬಿ ಎಡ್ (22) ಅಥವಾ ಎಂ ಎಡ್ (1) ಗಳನ್ನು ನಡೆಸುತ್ತವೆ. ಹೆಚ್ಚಿನ ಕೋರ್ಸುಗಳನ್ನು ನಡೆಸುತ್ತಿರುವ ಸಂಸ್ಥೆಗಳಲ್ಲಿ (77), ಮುಖ್ಯವಾಗಿ ಬಿ ಎಡ್ ಮತ್ತು ಡಿ ಇಎಲ್ ಎಡ್  ಕೋರ್ಸುಗಳನ್ನು ನಡೆಸಲಾಗುತ್ತಿದೆ. ಕೇವಲ ಎರಡು ಸಂಸ್ಥೆಗಳು ಮಾತ್ರ ನಾಲ್ಕು ವರ್ಷದ ಬಿ ಎ/ಬಿ ಎಸ್ಸಿ ಬಿ ಎಡ್ ಇಂಟಿಗ್ರೇಟೆಡ್ ಕೋರ್ಸುಗಳನ್ನು ನಡೆಸುತ್ತಿವೆ. ಬೆಂಗಳೂರಿನಲ್ಲಿ ಯಾವುದೇ ಸಂಸ್ಥೆಯು ಮೂರು ವರ್ಷದ ಇಂಟೆಗ್ರೇಟೆಡ್ ಬಿ ಎಡ್-ಎಂ ಎಡ್ ಕೋರ್ಸುಗಳನ್ನು ನಡೆಸುತ್ತಿಲ್ಲ.

ಕೊನೇಪಕ್ಷ ಮೂರು ಸಂಸ್ಥೆಗಳು ಒಂದೇ ರೀತಿಯ ಹೆಸರು ಹೊಂದಿವೆ; ಆರು ಸಂಸ್ಥೆಗಳು ಹೆಸರಿಗೆ 'ಪೂರ್ವ ಪ್ರಾಥಮಿಕ' ಕೋರ್ಸುಗಳನ್ನು ನಡೆಸುತ್ತೇವೆ ಎಂದು ಹೇಳಿದರೂ ಲಭ್ಯವಿರುವ ದತ್ತಾಂಶವು ಪೂರ್ವ ಪ್ರಾಥಮಿಕ ಹಂತದ ಯಾವುದೇ ಕೋರ್ಸುಗಳನ್ನು ಒಳಗೊಂಡಿಲ್ಲ ಎನ್ನುತ್ತದೆ.

**2.5 ಶಿಕ್ಷಕ ಅರ್ಹತಾ ಪರೀಕ್ಷೆಯಲ್ಲಿ ಸಾಧನೆ**

ಶಿಕ್ಷಕರ ಅರ್ಹತಾ ಪರೀಕ್ಷೆಯು ಬಹುಮುಖ್ಯ; ಪ್ರಾಥಮಿಕ ಶಾಲೆಯ ಶಿಕ್ಷಕರಾಗಲು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಅತ್ಯಗತ್ಯ, ಆ ಮೂಲಕ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಲಾಗುತ್ತದೆ.

ಸೆಪ್ಟೆಂಬರ್ 2016 ರಲ್ಲಿ ದೇಶದಾದ್ಯಂತ 12,363 ಶಿಕ್ಷಕ ತರಬೇತಿ ಸಂಸ್ಥೆಗಳ ಒಟ್ಟು 4,14,483 ಅಭ್ಯರ್ಥಿಗಳು, ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಕೇಂದ್ರ ಶಿಕ್ಷಕ ಅರ್ಹತಾ ಪರೀಕ್ಷೆ ಗಾಗಿ ನೊಂದಾಯಿಸಿಕೊಂಡರು. ಇವರಲ್ಲಿ 3,37,609 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದರು ಮತ್ತು 43,130 ಅಭ್ಯರ್ಥಿಗಳು ಅರ್ಹತೆ ಪಡೆದರು. ಶಿಕ್ಷಕ ತರಬೇತಿ ಪಡೆದು ವೃತ್ತಿಗೆ ಸಮರ್ಥರೆಂದು ಪರಿಗಣಿಸಬಹುದಾದ ಗುಂಪಿನಿಂದ ಕೇವಲ 10.4 % ಅಭ್ಯರ್ಥಿಗಳು ಮಾತ್ರ ಪ್ರಾಥಮಿಕ ಶಿಕ್ಷಕರಾಗಲು ಅರ್ಹರಾದರು. ಮತ್ತೊಂದು ವಿಧದಲ್ಲಿ, ಕಡಿಮೆ ಶಿಕ್ಷಕ ತರಬೇತಿ ಸಂಸ್ಥೆ ಗಳಿರುವಲ್ಲಿಗೆ ಹೋಲಿಸಿದಾಗ ಎಲ್ಲಿ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆ ಗಳಿವೆಯೋ ಅಲ್ಲಿಯೇ ಕಳಪೆ ಮಟ್ಟದ ಸಾಧನೆ ಕಂಡುಬಂದಿದೆ[4] (ಹೆಚ್ಚು ಅಭ್ಯರ್ಥಿಗಳು ಶಿಕ್ಷಕ ತರಬೇತಿ ಪಡೆಯುವುದರಿಂದ ಅಲ್ಲಿ ಹೆಚ್ಚು ಅಭ್ಯರ್ಥಿಗಳು ಅರ್ಹರಾಗುತ್ತಾರೆ ಎಂದೂ ನೀರೀಕ್ಷಿಸಬಹುದಾಗಿತ್ತಲ್ಲವೇ). ಹಾಗಾಗಿ, ಭಾರತದಲ್ಲಿ ಶಿಕ್ಷಕ ತರಬೇತಿ ವ್ಯವಸ್ಥೆಯು ಬಹು ದೊಡ್ಡ ವೈಫಲ್ಯವಾಗಿದೆ.

### 3. ಉಪಸಂಹಾರ

ಶಿಕ್ಷಕ ತರಬೇತಿ ಸಂಸ್ಥೆಗಳು ದೇಶದಲ್ಲಿ ಯಾವುದೇ ಪ್ರಾಮುಖ್ಯವಿಲ್ಲದೆ, ಅಸಮವಾಗಿ ಬೆಳೆದು ನಿಂತಿವೆ. ಈ ಬೆಳವಣಿಗೆಯು ಭೌಗೋಳಿಕವಾಗಿಯಾಗಲೀ ಅಥವಾ ಕೋರ್ಸುಗಳನ್ನು ನಡೆಸುವ ರೀತಿಯಲ್ಲಾಗಲೀ ಅಥವಾ ಬೇಡಿಕೆ ಪೂರೈಕೆಗನುಗುಣವಾಗಿಯಾಗಲೀ ವ್ಯವಸ್ಥಿತವಾಗಿಲ್ಲ. ಈ ಶಿಕ್ಷಣ ಸಂಸ್ಥೆಗಳು ಭೌಗೋಳಿಕವಾಗಿಯೂ ದೇಶದುದ್ದಕ್ಕೂ ಸಮಾನವಾಗಿ ಹರಡಿಕೊಂಡಿಲ್ಲ. ಈ ಅಸಮತೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಅರ್ಹತೆ/ಸಾಮರ್ಥ್ಯ ಪಡೆದವರು ಒಂದು ಶೈಕ್ಷಣಿಕ ವರ್ಷದಲ್ಲಿ ಶಾಲಾ ವ್ಯವಸ್ಥೆಯು ಬೇಡುವ ಅವಶ್ಯಕತೆಗಿಂತ ಹೆಚ್ಚಾಗಿ ಕಂಡುಬರುತ್ತಾರೆ.

ಪ್ರಸ್ತುತ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ 90 ಲಕ್ಷ, ಅಂದಾಜು 10-12 ಲಕ್ಷ ಶಿಕ್ಷಕರ ಹುದ್ದೆಗಳು ಇನ್ನೂ ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡಿದ ಮೇಲೆ ಪ್ರತಿವರ್ಷದ ಬೇಡಿಕೆಯು ನಿವೃತ್ತಿ ಹೊಂದುವ ಶಿಕ್ಷಕರು ಮತ್ತು ಕೊರತೆ ಬೀಳುವ (ಬಿಟ್ಟು ಹೋಗುವ, ಮರಣ ಹೊಂದುವ, ರಾಜಿನಾಮೆ ನೀಡುವ) ಹುದ್ದೆಗಳಿಂದ ನಿರ್ಧರಿತವಾಗುತ್ತದೆ. ಆಯ್ಕೆಯಾದವರು ಸುಮಾರು 30-35 ವರ್ಷಗಳು ವೃತ್ತಿಯಲ್ಲಿರುತ್ತಾರೆ ಮತ್ತು ಬಹು ಕಡಿಮೆ ಕೊರತೆ ಕಂಡುಬರುತ್ತದೆ ಎಂದುಕೊಂಡರೆ, ಆಗ ವರ್ಷಕ್ಕೆ ಅಂದಾಜು 3-4 ಲಕ್ಷ ಶಿಕ್ಷಕರ ಅವಶ್ಯಕತೆ ಬೀಳುತ್ತದೆ. ದೇಶದಲ್ಲಿರುವ 17,000 ಕ್ಕೂ ಹೆಚ್ಚು ಶಿಕ್ಷಕ ತರಬೇತಿ ಸಂಸ್ಥೆಗಳಿಂದ, ವರ್ಷಕ್ಕೆ ಸುಮಾರು 19 ಲಕ್ಷ ಶಿಕ್ಷಕ ತರಬೇತಿ ಪಡೆದವರು ಹೊರಬೀಳುತ್ತಾರೆ. ಹಾಗಿದ್ದರೂ, ಕಳೆದ ಕೆಲವು ವರ್ಷಗಳಿಂದ ಈ ಶಿಕ್ಷಕ ತರಬೇತಿ ಸಂಸ್ಥೆ ಗಳಿಂದ ಹೊರಬೀಳುತ್ತಿರುವ ಪದವೀಧರರ ಸಂಖ್ಯೆಯಲ್ಲಿ 40-60 % ವ್ಯತ್ಯಯವಿದೆ, ಅಂದರೆ ವರ್ಷಕ್ಕೆ 8 ರಿಂದ 11 ಲಕ್ಷಗಳು ಎಂದು ಆಧಾರಗಳು

[4] ಸಿಬಿಎಸ್‌ಇ (2017). ಸಿಟಿಇಟಿ. ಸಂಸ್ಥೆಗಳ ಸಾಧನೆ. ಪಡೆದದ್ದು 30 ಅಕ್ಟೋಬರ್, 2017 http://59.179.16.89/cbse/ ctetstats/stats.aspx

ಹೇಳುತ್ತಿದ್ದರೂ, ಅದೂ ಕೂಡ ವಾರ್ಷಿಕ ಅಗತ್ಯಕ್ಕಿಂತ ಹೆಚ್ಚೇ ಆಗಿದೆ. ಅಂದರೆ, ಬೇಡಿಕೆಯು ಸುಮಾರು 3-4 ಲಕ್ಷ, ಪೂರೈಕೆಯು ಅದರ ಎರಡರಷ್ಟು.

ಕೆಲವು ಶಾಲಾ ಶಿಕ್ಷಣ ಹಂತಗಳಲ್ಲಿ ಬೇಡಿಕೆಗಿಂತ ಹೆಚ್ಚಿನ ಶಿಕ್ಷಕರು ಕಂಡುಬರುತ್ತಾರೆ ಮತ್ತು ಕೆಲವು ಶಾಲಾ ಶಿಕ್ಷಣ ಹಂತಗಳಿಗೆ ಶಿಕ್ಷಕರೇ ಇಲ್ಲ. ನಿಖರವಾಗಿ ಈ ವಿಷಯಗಳಲ್ಲಿ ಶಿಕ್ಷಕರ ಕೊರತೆಯಿದೆ ಎಂದು ಹೇಳುವ ದತ್ತಾಂಶವಿಲ್ಲದಿದ್ದರೂ, ಗಣಿತ, ಇಂಗ್ಲೀಷ್, ಭೂಗೋಳದಂಥ ವಿಷಯಗಳಿಗೆ ಶಿಕ್ಷಕರ ಕೊರತೆಯಿದೆ ಎಂಬುದಕ್ಕೆ ಅನೇಕ ಸಾಕ್ಷ್ಯಗಳಿವೆ. ಅದೇ ವೇಳೆಗೆ, ಈ ಎಲ್ಲಾ ಶಿಕ್ಷಕರಿಗೂ ಉದ್ಯೋಗ ಸಿಗದು, ಯಾಕೆಂದರೆ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕಳಪೆ ಸಾಧನೆಯಾಗಿದೆ.

ಈ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕಳಪೆ ಸಾಧನೆಗೈದವರಲ್ಲಿ ಖಾಸಗಿ ಸಂಸ್ಥೆಯವರೇ ಜಾಸ್ತಿ. ಹಾಗಂತ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ಕಳಪೆಯವು ಎಂದಲ್ಲ, ಆದರೆ ಶಿಕ್ಷಕರನ್ನು ತರಬೇತುಗೊಳಿಸುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟವಿಲ್ಲ ಎಂಬುದಕ್ಕೆ ಸಾಕ್ಷಿಯಿದೆ. ಇವುಗಳಲ್ಲಿ ಬಹತೇಕ ಸಂಸ್ಥೆಗಳು ಭ್ರಷ್ಟತೆಯೆಸಗುತ್ತಿವೆ ಎಂಬ ಆರೋಪವಿದೆ.

ಅನೇಕ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಒಂಟಿ ಸಂಸ್ಥೆಗಳು, ಒಂದೇ ಒಂದು ಕೋರ್ಸ್ ನಡೆಸುತ್ತವೆ. ಇವುಗಳಲ್ಲಿ ಅರ್ಧದಷ್ಟು ಸಂಸ್ಥೆಗಳು ಎನ್ ಸಿ ಟಿ ಇ ಯಿಂದ ಕನಿಷ್ಠ ಸಂಖ್ಯೆಯಲ್ಲಿ ಪ್ರವೇಶಾತಿ ಮಾಡಿಕೊಳ್ಳಲು ಮಾನ್ಯತೆ ಪಡೆದಿವೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದ್ದರೆ, ರಾಜ್ಯ ಶುಲ್ಕ ನಿಯಂತ್ರಣ ಸಮಿತಿಯ ನಿಯಮದಂತೆ ಕಡಿಮೆ (20000 ದಿಂದ 50000) ಶುಲ್ಕ ವಿಧಿಸಿದಾಗ ಎನ್ ಸಿ ಟಿ ಇ ಯ ಮಾನದಂಡಗಳನ್ನು ಮುಟ್ಟಲು ಆರ್ಥಿಕ ತೊಂದರೆ ಎದುರಾಗುತ್ತದೆ. ಇಂಥ ಸಂದರ್ಭದಲ್ಲಿ, ವಿದ್ಯಾರ್ಥಿಗಳಿಗೆ ಅತ್ಯಂತ ಕನಿಷ್ಠ ಮಟ್ಟದ ಸಿಬ್ಬಂದಿ ಮತ್ತು ಸಂಪನ್ಮೂಲಗಳು ದೊರೆಯುತ್ತವೆ. ಹೀಗಾಗಿ ಇದು ಶಿಕ್ಷಕರ ಶಿಕ್ಷಣವು ಸಂಪೂರ್ಣವಾಗಿ ವಿಶ್ವವಿದ್ಯಾಲಯಗಳಿಂದ ಮತ್ತು ಉಳಿದ ಉನ್ನತ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿಯುವಂತೆ ಮಾಡಿದೆ.

## ಪರಾಮರ್ಶನೆಗಳು


1. Azim Premji Foundation. (2020). *Corruption in private teacher education institutions: The rot in the teacher education system.* Unpublished.
2. Kant, A., Iype, S. (2020, March 4). Our teacher education system must be aligned to global standards. *India Express*. https://indianexpress.com/article/opinion/columns/government-schools-education-teacher-qualification-exam-hrd-ministry-6297802/
3. MHRD (2017). *School Education in India U-DISE Flash Statistics 2016-17*. http://udise.in/Downloads/Publications/Documents/Flash_Statistics_on_School_Education-2016-17.pdf
4. MHRD. (2018). *Educational Statistics at a Glance.* https://mhrd.gov.in/sites/upload_files/mhrd/files/statistics-new/ESAG-2018.pdf
5. MHRD. (2012). Vision of Teacher Education in India. Quality and Regulatory Perspective. Report of the High-Powered Commission on Teacher Education Constituted by the Hon'ble Supreme Court of India. Volume 1. New Delhi: MHRD. Retrieved 1 Dec 2012 from http://www.teindia.nic.in/Files/TE-India-Report/JVC-Vol-1.pdf
6. MHRD. (2019). Draft National Education Policy 2019.

https://mhrd.gov.in/sites/upload_files/mhrd/files/Draft_NEP_2019_EN_Revised.pdf
7. MHRD. (2019a). All India Survey on Higher Education 2018-19. New Delhi: MHRD. Retrieved 8 June 2020 from http://aishe.nic.in/aishe/reports
8. Tata Institute of Social Sciences (TISS). (2017). Evaluation of Centrally Sponsored Scheme on Teacher Education in States/UTs. https://tiss.edu/uploads/files/CSSTE_Report_Web_22.2.18.pdf

# ಪ್ರಬಂಧ 2: ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಭ್ರಷ್ಟಾಚಾರ

ಸಂಶೋಧನಾ ತಂಡ, ಅಜೀಂ ಪ್ರೇಮ್ ಜಿ ಫೌಂಡೇಷನ್

## ಪ್ರಮುಖ ಸಾರಾಂಶ

ಬಹುಶಃ, ಶಿಕ್ಷಕ ತರಬೇತಿಯು ಇಡೀ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿಯೇ ದುರ್ಬಲವಾದ ಶಾಲಾ ಶಿಕ್ಷಣವಿರಬಹುದು. 2019 ರ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಕಸ್ತೂರಿ ರಂಗನ್ ಸಮಿತಿಯು ಈ ಶಿಕ್ಷಕ ತರಬೇತಿಯ ಅದಕ್ಷತೆಯನ್ನು ಎತ್ತಿ ತೋರಿಸಿದೆ ಮತ್ತು ಈ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ ಕರೆ ನೀಡಿದೆ. ಇದೇ ರೀತಿಯ ಅವಲೋಕನವು ಜೆ. ಎಸ್. ವರ್ಮ ಸಮಿತಿ ಮತ್ತು ಇತರ ಅಧಿಕೃತ ದಾಖಲೆಗಳಲ್ಲಿ ಕಂಡುಬಂದಿದೆ. ಆ ಅವಲೋಕನಗಳ ಒಟ್ಟು ಸಾರವೆಂದರೆ: (ಎ) ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ  ಭ್ರಷ್ಟತೆ ತಾಂಡವವಾಡುತ್ತಿದೆ; (ಬಿ) ಪಠ್ಯಕ್ರಮ ಅಭ್ಯಾಸಗಳು, ಬೋಧನಾ ವಿಧಾನಗಳನ್ನು ಗಾಳಿಗೆ ತೂರಲಾಗಿದೆ.

ಹೀಗೆ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಭ್ರಷ್ಟತೆ ತಾಂಡವವಾಡುತ್ತಿದ್ದರೂ ಅದನ್ನು ಸಾಕ್ಷ್ಯ ಸಮೇತ ಅದರ ರೂಪರೇಷೆಗಳನ್ನು/ಇತಿಮಿತಿಗಳನ್ನು ತೆರೆದು ತೋರಿಸಲು  ಪ್ರಾಯೋಗಿಕವಾಗಿ ಅಸಾಧ್ಯ.  ಇದೇನೂ ಆಶ್ಚರ್ಯವಲ್ಲ ಭ್ರಷ್ಟತೆಯ ಮೇಲೆ ಸಂಶೋಧನೆ ನಡೆಸುವುದು ಬಹಳ ಕಷ್ಟ.

ಭಾರತದಲ್ಲಿ ಭ್ರಷ್ಟತೆಯ ಮೇಲಿನ ಅಧ್ಯಯನಗಳು, ಅದರಲ್ಲೂ ಶಿಕ್ಷಣದ ಮೇಲೆ ಬಹಳ ಅಪರೂಪ. ಸಾಂಸ್ಥಿಕ ಭ್ರಷ್ಟತೆಯ ಮೇಲಿನ ಸಂಶೋಧನೆಗಿರುವ ಸವಾಲುಗಳನ್ನು ಚೆನ್ನಾಗಿಯೇ ದಾಖಲಿಸಲಾಗಿದೆ. ಹೀಗಿದ್ದರೂ, ಇದನ್ನು ನಿವಾರಿಸಲು ಕಠಿಣ ಪ್ರಯತ್ನ ಮಾಡಲಾಗಿದೆ, ಈ ಅಧ್ಯಯನದಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಭ್ರಷ್ಟತೆ ಯಾವ ಮಟ್ಟದವರೆಗಿದೆ ಎಂದು ತಿಳಿಯಲು 5 ರಾಜ್ಯಗಳ 13 ಜಿಲ್ಲೆಗಳ 35 ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.

ಈ ಅಧ್ಯಯನವು ವಿಸ್ತಾರವಾಗಿ ಹರಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಗೊತ್ತಿದ್ದೂ ಮಾಡುವ ಸಾಂಸ್ಥಿಕ ಹಾಗೂ ಶೈಕ್ಷಣಿಕ ಭ್ರಷ್ಟತೆಯನ್ನು ಬಯಲುಗೊಳಿಸಿದೆ.

ಖಾಸಗಿ ಸಂಸ್ಥೆಗಳಿಗೆ ಶಿಕ್ಷಕ ತರಬೇತಿ ನಡೆಸಲು ಎನ್ ಸಿ ಟಿ ಇ ಯ ನೀತಿ ನಿಯಮಗಳಾನುಸಾರ ಪರವಾನಗಿ ನೀಡಲಾಗುತ್ತದೆ. ಇವುಗಳಲ್ಲಿ ಕಾಲೇಜು ನಡೆಸಲು ಬೇಕಾದ  ಮೂಲಸೌಕರ್ಯಗಳು (ಜಾಗದ ಒಡೆತನ, ಸಂಸ್ಥೆಗೆ ನಿಗದಿ ಮಾಡಿದ ಸೌಕರ್ಯಗಳು ಇತ್ಯಾದಿ), ಆಡಳಿತ ಸಿಬ್ಬಂದಿ, ಅರ್ಹರಾದ ಬೋಧಕ ಸಿಬ್ಬಂದಿ, ಪಠ್ಯಕ್ರಮ ಮತ್ತು ಕೋರ್ಸನ್ನು ಜಾರಿಗೆ ತರಲು ಬೇಕಾದ ಗುಣಮಟ್ಟ ಇರಬೇಕು. ಈ ನಿಯಮಗಳು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು  ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಸಶಕ್ತಗೊಳಿಸುತ್ತವೆ. ಆದರೆ ನಮ್ಮ ಸಂಶೋಧನೆಯಲ್ಲಿ,  ಇವುಗಳಲ್ಲಿ ಅನೇಕ ನೀತಿ ನಿಯಮಗಳನ್ನು ಖಾಸಗಿ ಸಂಸ್ಥೆಗಳು ಉಲ್ಲಂಘಿಸಿರುವುದು ಕಂಡುಬರುತ್ತದೆ.

- ಖಾಸಗಿ ಶಿಕ್ಷಣ ಸಂಸ್ಥೆಗಳು ಅಗತ್ಯಕ್ಕೆ ತಕ್ಕಷ್ಟು ಪ್ರಶಿಕ್ಷಕರನ್ನು ಹೊಂದಿಲ್ಲ, ಇದನ್ನು ಮುಚ್ಚಿಹಾಕಲು ಭ್ರಷ್ಟ ಮಾರ್ಗಗಳನ್ನು ಅನುಸರಿಸುತ್ತವೆ.
    - 29 ಸಂಸ್ಥೆಗಳಲ್ಲಿ 26 ಸಂಸ್ಥೆಗಳು ಈ ರೀತಿಯ ಮಾರ್ಗ ಹಿಡಿದಿವೆ
- ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಬೇಕೆಂದೇ ಪಠ್ಯಕ್ರಮ ಅಗತ್ಯಗಳನ್ನು, ಕೋರ್ಸ್ ನಡೆಸಲು ಇರಬೇಕಾದ ಮೂಲಭೂತ ಅವಶ್ಯಕತೆಗಳನ್ನು ನಿರ್ಲಕ್ಷಿಸುತ್ತವೆ.
    - ಸೂಕ್ತ ತರಗತಿಗಳನ್ನು ನಡೆಸುವುದಿಲ್ಲ ಮತ್ತು ವಿದ್ಯಾರ್ಥಿಗಳು ತರಗತಿಗೆ ಹಾಜರಾಗುವುದೂ ಇಲ್ಲ. ಇದು ಅನೇಕ ರೀತಿಯಲ್ಲಿ ಕಂಡುಬರುತ್ತದೆ;

        - ಹೆಚ್ಚುಕಡಿಮೆ ಎಲ್ಲಾ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅನುಮತಿ ನೀಡುತ್ತವೆ.
        - 60% ಗಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಅವರು ಇಂಟರ್ನ್‌ಶಿಪ್ ಮುಗಿಸದಿದ್ದರೂ ಪರೀಕ್ಷೆ ಬರೆಯಲು ಅನುಮತಿ ನೀಡಿವೆ.
        - ಸುಮಾರು 70% ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಸರಾಸರಿ 80% ಕ್ಕಿಂತ ಕಡಿಮೆ ಹಾಜರಾದ ವಿದ್ಯಾರ್ಥಿಗಳಿದ್ದರು.
    - 30% ರಷ್ಟು ಸಂಸ್ಥೆಗಳಲ್ಲಿ ವಿಷಯ ಸಂಬಂಧಿ ಪ್ರಯೋಗಗಳನ್ನು ನಡೆಸಿಯೇ ಇಲ್ಲ ಮತ್ತು ಬಹುತೇಕ ಸಂಸ್ಥೆಗಳು ಕ್ಷೇತ್ರ ಸಂಶೋಧನೆ ಎಂಬುದನ್ನು ಕೇಳಿಯೇ ಇಲ್ಲ.
- ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಮೂಲ ಬೋಧನಾ ಸೌಕರ್ಯಗಳೇ ಇಲ್ಲ:
    - 50% ಗೂ ಹೆಚ್ಚು ಸಂಸ್ಥೆಗಳಲ್ಲಿ ಪಠ್ಯಕ್ರಮ ಪ್ರಯೋಗಾಲಯಗಳು ಇಲ್ಲ
    - ಮೂರನೆ ಒಂದು ಭಾಗದಷ್ಟು ಸಂಸ್ಥೆಗಳಲ್ಲಿ ಗ್ರಂಥಾಲಯಗಳಿಲ್ಲ, ಕಂಪ್ಯೂಟರ್ ಲ್ಯಾಬ್, ಸೆಮಿನಾರ್ ಹಾಲ್ ಗಳಿಲ್ಲ

ಭ್ರಷ್ಟತೆಯ ಈ ಪರಿಮಾಣಾತ್ಮಕ ಸಮೀಕ್ಷೆಯು, ಖಾಸಗಿ ಸಂಸ್ಥೆ ಸಿಬ್ಬಂದಿ, ವಿದ್ಯಾರ್ಥಿಗಳಿಂದ ಪಡೆದ ಪ್ರತಿಕ್ರಿಯೆಯಾಗಿದೆ. ಇದು ಭ್ರಷ್ಟತೆಯು ಎಲ್ಲಾ ಕಡೆ ಹರಡಿರುವುದನ್ನು ತೋರಿಸುತ್ತದೆ. ನಮ್ಮ ಅಧ್ಯಯನವು ಮೂಲ ಸಾಂಸ್ಥಿಕ, ಪಠ್ಯಕ್ರಮ ಮತ್ತು ಕೋರ್ಸುಗಳ ನೀತಿನಿಯಮಗಳನ್ನು ಉಲ್ಲಂಘಿಸಿರುವುದನ್ನೂ ಎತ್ತಿ ತೋರಿಸುತ್ತದೆ. ಆದರೆ ವಾಸ್ತವದಲ್ಲಿ, ಬಹಳ ವಿಸ್ತಾರವಾಗಿ ಅವಲೋಕಿಸಿದಂತೆ, ಶೈಕ್ಷಣಿಕ ಗುಣಮಟ್ಟವು ಅತ್ಯಂತ ಕೆಟ್ಟದಾಗಿರುವುದು ನಾವು ನಡೆಸಿದ ಸಂದರ್ಶನಗಳಿಂದ ಹೊರಬಿದ್ದಿದೆ.

ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಬಂದ ಈ ಗುಣಾತ್ಮಕ ಪ್ರತಿಕ್ರಿಯೆಗಳು ಭ್ರಷ್ಟತೆಯು ಎಷ್ಟು ಆಳ ಮತ್ತು ಸೂಕ್ಷ್ಮ ಎಂಬುದನ್ನು ವಿಶದಪಡಿಸುತ್ತವೆ. ಪರೀಕ್ಷೆಯಲ್ಲಿ ನಕಲು ಮಾಡುವುದು, ಹಣಕ್ಕೋಸ್ಕರ ನಡೆಯುವ ಭ್ರಷ್ಟ ಆಚರಣೆಗಳು ಒಂದು ರೀತಿಯ ವಿಷಮಯ ಸಾಂಸ್ಥಿಕ ವಾತಾವರಣವನ್ನು ಸೃಷ್ಟಿಸಿ ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳಿಬ್ಬರನ್ನೂ ಈ ಬಲೆಯೊಳಗೆ ಬೀಳಿಸುತ್ತವೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ, ಕಸ್ತೂರಿ ರಂಗನ್ ಸಮಿತಿಯು ಸಲ್ಲಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಉಲ್ಲೇಖಿಸಿದಂತೆ ಹಾಗೂ ಜೆ. ಎಸ್. ವರ್ಮ ಆಯೋಗ ಅವಲೋಕಿಸಿರುವಂತೆ ಲಂಗುಲಗಾಮಿಲ್ಲದ ಭ್ರಷ್ಟತೆ ಮತ್ತು ವಾಣಿಜ್ಯಿಕ ಉದ್ದೇಶಗಳಿರುವುದಕ್ಕೆ ಈ ಅಧ್ಯಯನವು ಪ್ರಬಲ ಪ್ರಾಯೋಗಿಕ ಸಾಕ್ಷ್ಯವನ್ನು ಒದಗಿಸುತ್ತದೆ. ಉತ್ತಮ ಶಿಕ್ಷಕ ತರಬೇತಿ ಸಂಸ್ಥೆಯನ್ನು ನಡೆಸಲು, ಅತ್ಯಂತ ಮೂಲಭೂತ ಅವಶ್ಯಕತೆಗಳಾದ ಗುಣಮಟ್ಟದ ಸಿಬ್ಬಂದಿ, ಪಠ್ಯಕ್ರಮ, ಬೋಧನಾತ್ಮಕ ಪರಿಕರಗಳು ಇಲ್ಲದಿರುವುದನ್ನು ರಾಜಿಮಾಡಿಕೊಂಡಿರುವುದು ಸ್ಪಷ್ಟವಾಗಿದೆ. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು, ಉನ್ನತ ಶಿಕ್ಷಣ ಸಂಸ್ಥೆಗಳು (ಶಿಕ್ಷಕರ ಶಿಕ್ಷಣವೂ ಸೇರಿದಂತೆ) ಉನ್ನತ ಗುಣಮಟ್ಟದ ಕೋರ್ಸುಗಳನ್ನು ನಡೆಸಲು ಸಮರ್ಥವೂ ಬದ್ಧತೆಯುಳ್ಳವೂ ಆಗಿರಬೇಕೆಂದು, ಯಾವುದೇ ಹೊರಗಿನ ನೀತಿನಿಯಮಗಳನ್ನು ಅನುಸರಿಸದೆ, ಸಂಪೂರ್ಣ ಸ್ವಾಯತ್ತವಾಗಿರಬೇಕೆಂದು ಆಶಿಸುತ್ತದೆ. ಆದರೆ ಪ್ರಸ್ತುತ ಶಿಕ್ಷಕ ತರಬೇತಿ ಸಂಸ್ಥೆಗಳು ಈ ಸಾಮರ್ಥ್ಯ ಹೊಂದಿಲ್ಲ ಅಥವಾ ಹೊಂದಲೂ ತಯಾರೂ ಇಲ್ಲ. ಹಾಗಾಗಿ ಈ ಅಧ್ಯಯನವು ಭಾರತದ ಶಿಕ್ಷಕ ತರಬೇತಿ ಶಿಕ್ಷಣದ ವಲಯವನ್ನು ಸಂಪೂರ್ಣವಾಗಿ ಬದಲಾಯಿಸುವ ಅಗತ್ಯವಿರುವುದನ್ನು ಪುನರುಚ್ಚರಿಸುತ್ತದೆ. **

## 1.ಪೀಠಿಕೆ

ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಎತ್ತಿ ಹಿಡಿಯಬೇಕಿದ್ದ ಶಿಕ್ಷಕರ ಶಿಕ್ಷಣವೇ ಭಾರತದಲ್ಲಿ ಬಹಳ ದುರ್ಬಲವಾಗಿರುವ ಸಾಂಸ್ಥಿಕ ರಚನೆಗಳಲ್ಲಿ ಒಂದಾಗಿದೆ.[5] ಇತ್ತೀಚಿನ ಕಸ್ತೂರಿ ರಂಗನ್ ಸಮಿತಿಯು ತನ್ನ 2019 ರ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಇದನ್ನು ಯಾವುದೇ ಗೊಂದಲಕ್ಕೆಡೆಯಿಲ್ಲದಂತೆ ಸ್ಪಷ್ಟವಾಗಿ ಹೇಳಿದೆ: **"ಶಿಕ್ಷಕರ ಶಿಕ್ಷಣವು ಕಠೋರ ಅಭಾವದಲ್ಲಿದೆ, ನಿಜವಾಗಿಯೂ ಪ್ರಸ್ತುತ ಸಂದರ್ಭದಲ್ಲಿ ದಾರುಣ ಸ್ಥಿತಿಯಲ್ಲಿದೆ"** (ಪುಟ 114; ಒತ್ತು ಮೂಲದ್ದು). ಕರಡು ಪ್ರತಿಯು, ಇತ್ತೀಚಿನ ಮತ್ತೊಂದು ವರದಿಯನ್ನು ಉಲ್ಲೇಖಿಸುತ್ತಾ, ಇದರ ಹಿಂದಿನ ಕಾರಣವನ್ನು ಮತ್ತೆಮತ್ತೆ ಹೇಳುತ್ತಿದೆ: "ದೇಶದಲ್ಲಿ ಸುಮಾರು 17,000 ಶಿಕ್ಷಕ ತರಬೇತಿ ಸಂಸ್ಥೆಗಳಿವೆ, ಅವುಗಳಲ್ಲಿ 92% ರಷ್ಟು ಖಾಸಗಿ ಒಡೆತನದಲ್ಲಿವೆ. ಅನೇಕ ಅಧ್ಯಯನಗಳಲ್ಲಿ- ಜಸ್ಟಿಸ್ ಜೆ. ಎಸ್. ವರ್ಮ ಆಯೋಗ, ಸುಪ್ರೀಂ ಕೋರ್ಟಿನಿಂದ ನೇಮಿತವಾದದ್ದು- ಹೇಳಲಾಗಿದೆ, ಬಹುತೇಕ ಈ ಶಿಕ್ಷಣ ಸಂಸ್ಥೆಗಳು ಉತ್ತಮ ಶಿಕ್ಷಣವನ್ನು ನೀಡುವ ಪ್ರಯತ್ನವನ್ನೇ ಮಾಡುತ್ತಿಲ್ಲ; ಬದಲಿಗೆ ಅನೇಕ ಸಂಸ್ಥೆಗಳು ಮಾರಾಟದ ಅಂಗಡಿಗಳಾಗಿವೆ; ಅಲ್ಲಿ ಕೋರ್ಸ್‌ಗೆ ಅಗತ್ಯವಾದ ಕನಿಷ್ಠ ಮಟ್ಟದ ಪಠ್ಯಕ್ರಮಗಳೂ ಪಾಲನೆಯಾಗುತ್ತಿಲ್ಲ, ಪದವಿ ಪ್ರಮಾಣಪತ್ರಗಳು ಮಾರಾಟಕ್ಕಿಟ್ಟ ಸರಕುಗಳಾಗಿವೆ. ಇಂತಹ ಸಂಸ್ಥೆಗಳನ್ನು ಮುಚ್ಚದೆ ಶಿಕ್ಷಕರ ಶಿಕ್ಷಣದ ಪಾವಿತ್ರ್ಯನ್ನು ಉಳಿಸಲಾಗುವುದಿಲ್ಲ" (ಪುಟ. 114-115).

ನಿಜವಾಗಿಯೂ, ಈ ನೀತಿಯ ದಾಖಲೆಗಳಲ್ಲಿ ವಾಣಿಜ್ಯೀಕರಣಗೊಂಡಿರುವ ಶಿಕ್ಷಕರ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿಲ್ಲ, ಕಡಿಮೆ ಆದ್ಯತೆ ನೀಡಲಾಗಿದೆ. ಅದು ಯಾವುದೆಂದರೆ, ಭ್ರಷ್ಟಾಚಾರ ಮತ್ತು ಈ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ವಾಣಿಜ್ಯಿಕ ಆಸಕ್ತಿಯೆಡೆ ತಳ್ಳುವ ವಿಚಾರಗಳು. ಅಧಿಕಾರಿಗಳು ಮತ್ತು ಮಾಧ್ಯಮದವರು ಮಾಡಿರುವ ಒಂದೆರಡು ವರದಿಗಳನ್ನು ಬಿಟ್ಟರೆ, ಸ್ವಂತ ಹಣದಿಂದ ನಡೆಯುವ ಈ ಶಿಕ್ಷಣ ಕಾಲೇಜುಗಳ ವಾಣಿಜ್ಯಿಕ ಆಸಕ್ತಿಯ ಬಗ್ಗೆ ಯಾವುದೇ ಅಧ್ಯಯನಗಳೇ ನಡೆದಿಲ್ಲ[6] ಇದನ್ನು ಅರ್ಥಮಾಡಿಕೊಳ್ಳಬಹುದು, ಭ್ರಷ್ಟಾಚಾರವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವುದು ಬಹಳ ಕಷ್ಟ, ಹಾಗಾಗಿ ಭಾರತದ ಸಂದರ್ಭದಲ್ಲಿ ಶೈಕ್ಷಣಿಕ ಭ್ರಷ್ಟಾಚಾರದ ಬಗ್ಗೆ ಹೆಚ್ಚುಕಡಿಮೆ ಯಾವ ಅಧ್ಯಯನಗಳೂ ನಡೆದೇ ಇಲ್ಲ (ಟೈರ್ನಿ ಮತ್ತು ಸಬರವಾಲ್ 2017). ಶಿಕ್ಷಕರ ಶಿಕ್ಷಣ ಕ್ಷೇತ್ರದಲ್ಲಿ, ಅಂಥ ಒಂದು ಅಧ್ಯಯನ ಹರಿಯಾಣ ರಾಜ್ಯದಲ್ಲಿ ನಡೆದಿದೆ, ಅದು ಮುಖ್ಯವಾಗಿ ವೃತ್ತಪತ್ರಿಕೆಗಳ ವರದಿಗಳನ್ನು ಆಧರಿಸಿ ಈ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ನಿಯಂತ್ರಣ ನೀತಿನಿಯಮಗಳನ್ನು ಉಲ್ಲಂಘಿಸಿರುವುದರತ್ತ ಗಮನ ಸೆಳೆಯುತ್ತದೆ (ದೇಸ್ವಾಲ್ 2017).

ಆದ್ದರಿಂದ ಈ ಅಧ್ಯಯನವನ್ನು ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳ ಭ್ರಷ್ಟತೆಯ ಪ್ರಮಾಣವನ್ನು ಅರ್ಥಮಾಡಿಕೊಳ್ಳಲು ಪ್ರಾಯೋಗಿಕ ಕ್ಷೇತ್ರಕಾರ್ಯ ನಡೆಸಿ ಕೈಗೊಳ್ಳಲಾಗಿದೆ. ಅಧ್ಯಯನವು 5 ರಾಜ್ಯಗಳ, 13 ಜಿಲ್ಲೆಗಳ 35 ಸಂಸ್ಥೆಗಳನ್ನು ಒಳಗೊಂಡಿದೆ ಮತ್ತು ನಮ್ಮ ಸಂಶೋಧನಾ ತಂಡದ ಮೂಲಕ ಈ ಉದ್ದೇಶವನ್ನು ಸಾಧಿಸಲಾಗಿದೆ. ಅಧ್ಯಯನದ ಉದ್ದೇಶದಿಂದಾಗಿ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಮೊದಲನೆಯದಾಗಿ, ಉತ್ತರ ಕೊಡುವವರು (ಇಲ್ಲಿ, ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ) ಭ್ರಷ್ಟ ಆಚರಣೆಗಳನ್ನು, ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿರುವುದರ ಬಗ್ಗೆ ತಮ್ಮ ಸಂಸ್ಥೆಗಳ ಯಾವುದೇ ಮಾಹಿತಿ ನೀಡುವುದಿಲ್ಲವೆಂದು, ನೇರವಾಗಿಯೇ ನಿರಾಕರಿಸಿದರು. ಆದ್ದರಿಂದ ನಾವು ಮೊದಲು ಅಂದುಕೊಂಡಿದ್ದಂತೆ, ಆಡಳಿತ ಮಂಡಳಿಯನ್ನು ಅಥವಾ ಒಡೆಯರನ್ನು ಅಥವಾ ಪ್ರಾಂಶುಪಾಲರನ್ನು ಸಂದರ್ಶಿಸಲು ಅಥವಾ ಗಮನಿಸಲು ಅವಕಾಶವೇ ಸಿಗಲಿಲ್ಲ. ಎರಡನೆಯದಾಗಿ, ಸಂಶೋಧನಾ ತಂಡವು ಖಾಸಗಿ ಶಿಕ್ಷಣ ಸಂಸ್ಥೆಗಳ ಭ್ರಷ್ಟತೆಯ ಪಾಲುದಾರರಾದ ವಿದ್ಯಾರ್ಥಿಗಳು, ಶಿಕ್ಷಕರಿಂದ ಉತ್ತರ ಪಡೆಯಲು ಬಹಳ ಸವಾಲನ್ನು ಎದುರಿಸಬೇಕಾಯಿತು.

[5] ಈ ಅಧ್ಯಯನವು ಶಿಕ್ಷಕರ ಶಿಕ್ಷಣ ವ್ಯವಸ್ಥೆ ಎಂದರೆ, ಶಿಕ್ಷಕರಾಗಲು ವಿದ್ಯಾರ್ಥಿಗಳಿಗೆ ತರಬೇತಿ ಕೊಡುವ ವ್ಯವಸ್ಥೆ ಮತ್ತು ನಡೆಸುವ ಸಂಸ್ಥೆಗಳನ್ನು ಒಳಗೊಳ್ಳುತ್ತದೆ. ಹಾಲಿ ಶಿಕ್ಷಕರು ತಮ್ಮ ವೃತ್ತಿ ಕೌಶಲಾಭಿವೃದ್ಧಿಗಾಗಿ ಪಡೆಯುವ ತರಗತಿಗಳನ್ನು ಒಳಗೊಳ್ಳುವುದಿಲ್ಲ.

[6] ಉದಾಹರಣೆಗೆ, ಎಂ ಎಚ್ ಆರ್ ಡಿ ಯ ಮಾಜಿ ಕಾರ್ಯದರ್ಶಿಯೊಬ್ಬರು, ಈ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಶಿಕ್ಷಣ ಕ್ಷೇತ್ರದ 'ಮಾಫಿಯಾ' ಎಂದು ಕರೆದಿದ್ದಾರೆ. ಏಕೆಂದರೆ, ಅವುಗಳು ಎಷ್ಟು ಗಾಢವಾಗಿ ಮತ್ತು ಆಳವಾಗಿ ರಾಜಕೀಯ, ಆರ್ಥಿಕ ಕಂದಕಕ್ಕೆ ಬಿದ್ದಿವೆ ಎನ್ನುತ್ತಾ ಅವು ನಿಜವಾಗಲೂ ಅಸ್ತಿತ್ವದಲ್ಲಿಯೆವೆಯೇ ಎಂದು ಎಚ್ಚರಿಸುತ್ತಾರೆ. ದೇಶದಲ್ಲಿ ಸುಮಾರು 16,000 ಬಿ ಎಡ್, ಡಿ ಎಲ್ ಎಡ್ ಕಾಲೇಜುಗಳಿವೆ, ಇವುಗಳಲ್ಲಿ ಬಹುತೇಕ ಸಂಸ್ಥೆಗಳು ಕೇವಲ ಕಾಗದದ ಮೇಲಿವೆ (ದಿ ಫೈನಾನಿಷಿಯಲ್ ಎಕ್ಸ್ ಪ್ರೆಸ್ 15, ನಂವೆಂಬರ್ 2018)

ಪರಿಣಾಮವಾಗಿ, ಪ್ರಾರಂಭದಲ್ಲಿ ಅನೇಕರು ಉತ್ತರಿಸಲು ಸಿದ್ಧರಿದ್ದರೂ ಆನಂತರ ಹಿಂದೆ ಸರಿದರು. ಬೋಧನೆ ಕಲಿಕೆ ಬಗ್ಗೆ ಸಂಸ್ಥೆಗಳಲ್ಲಿ ದೊರೆಯುವ ಮೂಲಸೌಕರ್ಯಗಳ ಬಗ್ಗೆ ಉತ್ತರಿಸುತ್ತಿದ್ದವರೂ ಸಂಶೋಧನೆಯ ಮಧ್ಯದಲ್ಲಿ ಬಿಟ್ಟುಹೋದರು.

ಅಧ್ಯಯನದ ಗಮನವು ಈ ಖಾಸಗಿ ಶಿಕ್ಷಣ ಸಂಸ್ಥೆಗಳ ಕೋರ್ಸುಗಳ ಗುಣಾತ್ಮಕ ಬೋಧನೆ ಮತ್ತು ಕಲಿಕೆಯ ಮೇಲೆ ಪ್ರತ್ಯಕ್ಷ ಪ್ರಭಾವ ಬೀರುವ ಅಂಶಗಳ ಮೇಲೆ ಕೇಂದ್ರಿಕೃತವಾಗಿತ್ತು. ಎನ್ ಸಿ ಟಿ ಇ ಯ ಅಸಮರ್ಪಕ ನಿಯಂತ್ರಣ ಚೌಕಟ್ಟಿನ ವಿನ್ಯಾಸದೊಳಗೆ ಇರುವ ನೀತಿನಿಯಮಗಳು, ಯಾವ ಹಂತದವರೆಗೆ ಪಾಲನೆಯಾಗಿವೆ ಎಂಬುದನ್ನು ಅಧ್ಯಯನ ಮಾಡಲು ಆಗಲಿಲ್ಲ.[7] ಅದರ ಬದಲು ಪ್ರಸ್ತುತ ನಿಯಂತ್ರಣ ನಿಯಮಗಳನ್ನೇ ಭ್ರಷ್ಟ ಆಚರಣೆಗಳನ್ನು ಹೊರಗೆಳೆಯಲು ಮಾರ್ಗದರ್ಶಿ ಚೌಕಟ್ಟುಗಳನ್ನಾಗಿ ಬಳಸಿಕೊಳ್ಳಲಾಯಿತು.[8] ಅಧ್ಯಯನದ ಮುಖ್ಯಾಂಶಗಳನ್ನು ಈ ಕೆಳಗೆ ನೀಡಲಾಗಿದೆ:

**ಪಟ್ಟಿ 1. ಮುಖ್ಯ ಫಲಿತಗಳು**

**ಶಿಕ್ಷಕರ ಶಿಕ್ಷಣ ಕೋರ್ಸುಗಳ ಗುಣಮಟ್ಟಕ್ಕೆ ಸಂಬಂಧಪಟ್ಟ ಪ್ರಮುಖ ಸಮಸ್ಯೆಗಳು**

**ಪ್ರಶಿಕ್ಷಕರು**

- ಬಹುತೇಕ ಸಂಸ್ಥೆಗಳಲ್ಲಿ ಎನ್ ಸಿ ಟಿ ಇ ನಿಯಮಗಳ ಪ್ರಕಾರ ಪ್ರಕಾರ ಪ್ರಶಿಕ್ಷಕರುಗಳನ್ನು ಹೊಂದಿಲ್ಲ.
    - ಬಹಳ ಕಡಿಮೆಯೆಂದರೆ, 29 ಸಂಸ್ಥೆಗಳಲ್ಲಿ 1 ವಿದ್ಯಾರ್ಥಿಗಳಿಗನುಗುಣವಾಗಿ ಪ್ರಶಿಕ್ಷಕರನ್ನು ಹೊಂದಿತ್ತು; ಹೆಚ್ಚು ಅಂದರೆ 29 ರಲ್ಲಿ 3
- ಶಿಕ್ಷಣ ಸಂಸ್ಥೆಗಳು ಪ್ರಶಿಕ್ಷಕರನ್ನು ನೇಮಿಸುವಾಗ ಬೇಕೆಂದೇ ಭ್ರಷ್ಟ ಮಾರ್ಗ ಅನುಸರಿಸುತ್ತವೆ; ಅವು:
    - ಉತ್ತಮ ಗುಣಮಟ್ಟದ ವಿಷಯತಜ್ಞ ಪ್ರಶಿಕ್ಷಕರನ್ನು ನೇಮಿಸುವುದಿಲ್ಲ; ಒಬ್ಬರೇ ಬೇರೆ ಬೇರೆ ವಿಷಯ ಬೋಧನೆ ಮಾಡುವಂತೆ ನೇಮಿಸುತ್ತಾರೆ
    - ಪ್ರಶಿಕ್ಷಕರನ್ನು ಅರೆಕಾಲಿಕ ಸಿಬ್ಬಂದಿಯಾಗಿ ಉಳಿಸಿಕೊಂಡು, ಅವರು ಇತರ ಸಂಸ್ಥೆಗಳಲ್ಲೂ ಬೋಧಿಸಲು ಅವಕಾಶ ಮಾಡಿಕೊಡುತ್ತಾರೆ
    - ಮೇಲಧಿಕಾರಿಗಳು ತನಿಖೆಗೆ ಬಂದಾಗ, ಯಾವುದೇ ನೇಮಕಾತಿ ಪತ್ರ ನೀಡದೆ ಪ್ರಶಿಕ್ಷಕರನ್ನು ಪೂರ್ಣಕಾಲಿಕ ಸಿಬ್ಬಂದಿಯೆಂದು ಹಾಜರಾಗಲು ಒತ್ತಾಯ ಮಾಡುತ್ತಾರೆ.
    - ದಾಖಲೆಯಲ್ಲಿ ನಮೂದಿಸಿರುವುದಕ್ಕಿಂತ ಕಡಿಮೆ ವೇತನ ನೀಡುತ್ತಾರೆ; ಹುದ್ದೆಗೆ ತಕ್ಕ ವಿದ್ಯಾರ್ಹತೆಯಿಲ್ಲದವರನ್ನು ನೇಮಕ ಮಾಡಿಕೊಳ್ಳುತ್ತಾರೆ

**ಪಠ್ಯಕ್ರಮ ಅಗತ್ಯಗಳು**

- ಮೂಲ ಪಠ್ಯಕ್ರಮ ಬೇಡಿಕೆಗಳನ್ನು ನಿರ್ಲಕ್ಷಿಸಲಾಗುತ್ತದೆ
    - ಕಡಿಮೆಯೆಂದರೆ, 90% ರಷ್ಟು ಸಂಸ್ಥೆಗಳು 80% ನಷ್ಟು ವಿದ್ಯಾರ್ಥಿಗಳ ಹಾಜರಿ ಹೊಂದಿದ್ದರೆ; ಹೆಚ್ಚು ಎಂದರೆ ಇದು 70% ನಷ್ಟಿತ್ತು

---

[7] ಎನ್ ಸಿ ಟಿ ಇ ಯ ನಿಯಂತ್ರಣ ಚೌಕಟ್ಟಿನ ಕಾರಣ ಮತ್ತು ಗುಣಗಳೆಂದರೆ, ಸಂಸ್ಥೆಗಳ ಮೂಲ ಸೌಕರ್ಯಗಳು ಮತ್ತು ಅವು ಜಾರಿಯಾಗುತ್ತಿವೆಯೇ ಎಂಬುದನ್ನು ಕಠಿಣ ಪರಿಶೀಲನೆಗೊಳಪಡಿಸುವುದು.

[8] ಹೆಚ್ಚಿನ ಮಾಹಿತಿಗಾಗಿ ಗಮನಿಸಿ: http://www.ncte.gov.in/Website/ PDF/regulation/regulation2014/english/appendix2.pdf;http://www.ncte.gov.in/Website/PDF/regulation/regulation2014/english/appendix4.pdf (last accessed 17 September 2019).

- ಹೆಚ್ಚುಕಡಿಮೆ ಎಲ್ಲಾ ಸಂಸ್ಥೆಗಳೂ ಕಡಿಮೆ ಹಾಜರಾತಿಯಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದವು. 60% ನಷ್ಟು ಸಂಸ್ಥೆಗಳು ಇಂಟರ್ನ್‌ಶಿಪ್ ಮುಗಿಸದ ವಿದ್ಯಾರ್ಥಿಗಳಿಗೂ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಿದ್ದವು
- 30% ಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ವಿಷಯ ಪ್ರಯೋಗಗಳನ್ನು ನಡೆಸಿರಲಿಲ್ಲ ಮತ್ತು ಹೆಚ್ಚಿನ ಸಂಸ್ಥೆಗಳು ಕ್ರಿಯಾ ಸಂಶೋಧನೆ ಎಂಬ ಪದವನ್ನೇ ಕೇಳಿಲ್ಲ

**ಇತರ ಸಮಸ್ಯೆಗಳು**

- ಅನೇಕ ಸಂಸ್ಥೆಗಳು ಬೋಧನೆಗೆ ಅಗತ್ಯವಾದ ಮೂಲ ಸೌಕರ್ಯಗಳನ್ನೇ ಹೊಂದಿಲ್ಲ
  - 50% ಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ಪಠ್ಯಕ್ರಮ ಪ್ರಯೋಗಾಲಯಗಳೇ ಇಲ್ಲ
  - ಸುಮಾರು ಮೂರನೇ ಒಂದರಷ್ಟು ಸಂಸ್ಥೆಗಳಲ್ಲಿ ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಮತ್ತು ಸೆಮಿನಾರ್ ಹಾಲ್ ಗಳು ಇರಲಿಲ್ಲ
  - ಕೆಲವು ಮೂಲ ಬೋಧನಾ ಸೌಕರ್ಯಗಳು ಉದ್ದೇಶಪೂರ್ವಕವಾಗಿಯೇ ನಡೆಸುವ ಭ್ರಷ್ಟತೆಯಿಂದಾಗಿ ಉಳಿದಿದ್ದವು, ಹೇಗೆಂದರೆ ಒಂದೇ ಆಡಳಿತ ಮಂಡಳಿಯ ಇತರ ಬೇರೆಬೇರೆ ಕೋರ್ಸುಗಳನ್ನು ನಡೆಸಲು ಬಳಕೆಯಾಗುವುದರ ಮೂಲಕ

ಅಧ್ಯಯನದಲ್ಲಿ ಕಂಡುಬಂದಂತೆ ಬಹುತೇಕ ಖಾಸಗಿ ಸಂಸ್ಥೆಗಳು ಮೂಲಸೌಕರ್ಯಗಳಿಗೆ - ಸಿಬ್ಬಂದಿ, ಪಠ್ಯಕ್ರಮ ಮತ್ತು ಬೋಧನಾ ಅಗತ್ಯಗಳಿಗೆ ಅತ್ಯಂತ ಕಡಿಮೆ ಹಣ ಖರ್ಚು ಮಾಡುತ್ತವೆ. ಅಷ್ಟೇ ಅಲ್ಲ, ಇದು ಎಲ್ಲಾ ಖಾಸಗಿ ಸಂಸ್ಥೆಗಳಲ್ಲಿ ನೇರವಾಗಿಯೇ ಎದ್ದು ಕಾಣುವ ದುಷ್ಕೃತ್ಯವಾಗಿದೆ. ಈ ರೀತಿಯ ಭ್ರಷ್ಟ ಮಾರ್ಗಗಳು ದೇಶದಾದ್ಯಂತ ಎಲ್ಲಾ ಕಡೆಯೂ ಹರಡಿಕೊಂಡಿವೆ. ನಮ್ಮ ಸಂಶೋಧನೆಗೆ ಸಹಕರಿಸಿ ಪ್ರತಿಕ್ರಿಯೆ ನೀಡಿದವರ ದತ್ತಾಂಶವನ್ನು ವಿಶ್ಲೇಷಿದಾಗ ಇಂತಹ ದುಷ್ಕೃತ್ಯಗಳಿಗೆ ಭ್ರಷ್ಟತೆಯೇ ಕಾರಣವಾಗಿರುವುದು ಕಂಡುಬರುತ್ತದೆ. ಅದರೊಂದಿಗೆ, ನಮ್ಮ ಸಂಶೋಧನೆಗೆ ಸಹಕರಿಸಲು ಮುಂದೆ ಬಂದವರು ಅನಂತರ ಹಿಂಜರಿದದ್ದಕ್ಕೆ ಈ ದುಷ್ಕೃತ್ಯಗಳಿರುವುದೇ ಕಾರಣವಾಗಿದೆ. ಯಾವ ಮಟ್ಟದವರೆಗೆ ಈ ಭ್ರಷ್ಟತೆ ಹಬ್ಬಿದೆ ಎನ್ನುವುದಕ್ಕೆ ಅಧ್ಯಯನ ಸಾಕ್ಷಿಯಾಗಿದೆ, ಸಂಪೂರ್ಣ ಚಿತ್ರ ಒದಗಿಸಲು ಸವಾಲುಗಳಿದ್ದರೂ ಅದು ಭ್ರಷ್ಟವಾಗಿದೆ ಎನ್ನುವುದು ಅಧ್ಯಯನದಿಂದ ಸಾಬೀತಾಗುತ್ತದೆ. ಆದ್ದರಿಂದ ಈ ಅಧ್ಯಯನವು ಏನು ಹೇಳಲು ಹೊರಟಿದೆಯೆಂದರೆ, ಪ್ರಾದೇಶಿಕವಾಗಿ ಹರಡಿಕೊಂಡಿರುವ ಭ್ರಷ್ಟತೆಯನ್ನು ಅಧ್ಯಯನ ಮಾಡಲು ಸವಾಲುಗಳಿದ್ದರೂ, ಈ ಭ್ರಷ್ಟಾಚಾರವೆನ್ನುವುದು ಕಣ್ಣಿಗೆ ಕಾಣುವುದಕ್ಕಿಂತ ಆಳವಾಗಿದೆ ಎಂದು ಮಾತ್ರ.

## 2. ಸಂಶೋಧನಾ ವಿಧಾನ

ಸಂಶೋಧನಾ ತಂಡಗಳಿಗೆ ಸಂಶೋಧನೆಯನ್ನು ನಡೆಸಲು ಅವಕಾಶವಿದ್ದ 5 ರಾಜ್ಯಗಳ (ಛತ್ತೀಸ್ ಗಢ, ಕರ್ನಾಟಕ, ಮಧ್ಯಪ್ರದೇಶ, ರಾಜಾಸ್ತಾನ ಮತ್ತು ಉತ್ತರಾಖಂಡ) 13 ಜಿಲ್ಲೆಗಳಲ್ಲಿ ಈ ಸಂಶೋಧನೆಯನ್ನು ನಡೆಸಲಾಯಿತು. ಈ ಅಧ್ಯಯನವು ಖಾಸಗಿ, ಸ್ವಯಂ ಆಗಿ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವ ಶಿಕ್ಷಕ ತರಬೇತಿ ಸಂಸ್ಥೆಗಳ ಗುಣಲಕ್ಷಣ ಮತ್ತು ಭ್ರಷ್ಟಾಚಾರದ ಹರವನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವನ್ನು ಹೊಂದಿದ್ದರಿಂದ, 13 ಜಿಲ್ಲೆಗಳಲ್ಲಿ, ಬ್ಯಾಚುಲರ್ ಆಫ್ ಎಜುಕೇಶನ್ (ಬಿ.ಎಡ್) ಅಥವಾ ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಶನ್ (ಡಿ.ಎಲ್.ಎಡ್) ಇವೆರಡರಲ್ಲಿ ಯಾವುದಾದರೂ ಒಂದು ಅಥವಾ ಎರಡನ್ನೂ ಆರಿಸಲಾಯಿತು. ತುಲನಾತ್ಮಕವಾಗಿ ಅತ್ಯಧಿಕ ಪ್ರಮಾಣದ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಇರುವ ಜಿಲ್ಲೆಗಳಲ್ಲಿ ಇಂತಹ ನಾಲ್ಕು ಸಂಸ್ಥೆಗಳು ಮತ್ತು ತುಲನಾತ್ಮಕವಾಗಿ ಕಡಿಮೆ ಪ್ರಮಾಣದ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಇರುವ ಜಿಲ್ಲೆಗಳಲ್ಲಿ ಎರಡು ಇಂತಹ ಸಂಸ್ಥೆಗಳನ್ನು ಒಳಗೊಳ್ಳುವ ಯತ್ನವನ್ನು ಮಾಡಲಾಯಿತು.[9] ಒಟ್ಟು 35 ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಒಳಗೊಳ್ಳಲಾಯಿತು ಹಾಗೂ 14 ಪ್ರಾಂಶುಪಾಲರು, 29 ಬೋಧಕ ಸಿಬ್ಬಂದಿ ಮತ್ತು 76 ವಿದ್ಯಾರ್ಥಿಗಳೊಂದಿಗೆ ಅರೆ ರಚನಾತ್ಮಕ ಸಂದರ್ಶನಗಳನ್ನು ನಡೆಸಲಾಯಿತು. (ಕೋಷ್ಟಕ 1 ನೋಡಿ).

ಕೋಷ್ಟಕ 1: ಸಂಶೋಧನೆಯಲ್ಲಿ ಪಾಲ್ಗೊಂಡ ಶಿಕ್ಷಕ ಶಿಕ್ಷಣ ಸಂಸ್ಥೆಗಳು, ಪ್ರಾಂಶುಪಾಲರು, ಬೋಧಕ ವರ್ಗ ಮತ್ತು ವಿದ್ಯಾರ್ಥಿಗಳು, ಜಿಲ್ಲಾವಾರು.

| ಜಿಲ್ಲೆಗಳು | ಪ್ರಾಂಶುಪಾಲರು | ಬೋಧಕ ವರ್ಗ | ವಿದ್ಯಾರ್ಥಿಗಳು | ಶಿಕ್ಷಕ ತರಬೇತಿ ಸಂಸ್ಥೆಗಳು |
|---|---|---|---|---|
| ಜಾನಿಗಿರ್ | 2 | 1 | 6 | 5 |
| ರಾಯ್ ಗಢ | 1 | 4 | 6 | 2 |
| ರಾಯ್ ಪುರ | 1 | 2 | 8 | 4 |
| ಕಲಬುರ್ಗಿ | - | - | 4 | 2 |
| ಮಂಡ್ಯ | 1 | 1 | 4 | 2 |
| ಯಾದಗಿರಿ | 1 | 3 | 4 | 3 |
| ಖರ್ಗೋನ್ | 1 | 4 | 9 | 4 |
| ಬಾರ್ಮರ್ | 1 | 3 | 5 | 2 |
| ರಾಜ್ ಸಮಂದ್ | 1 | 1 | 8 | 2 |
| ಟೋಂಕ್ | 2 | 3 | 6 | 5 |
| ಹಲ್ದ್ವಾನಿ | 1 | 2 | 4 | 1 |
| ಉಧಮ್ ಸಿಂಗ್ ನಗರ | 1 | 3 | 8 | 2 |
| ಉತ್ತರಕಾಶಿ | 1 | 2 | 4 | 1 |
| **ಒಟ್ಟು** | **14** | **29** | **76** | **35** |

[9] ಇದು ಈ ಜಿಲ್ಲೆಗಳಲ್ಲಿ ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಉಪಸ್ಥಿತಿಯ ಬಗ್ಗೆ ಲಭ್ಯವಿರುವ ಮಾಹಿತಿಯನ್ನು ಆಧರಿಸಿದೆ. ಪ್ರತಿಕ್ರಿಯೆ ಲಭಿಸದ ಕಾರಣ ಆಯ್ದ ಎಲ್ಲಾ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಒಳಗೊಳ್ಳಲು ಸಾಧ್ಯವಾಗಿಲ್ಲ

ಬೋಧಕ ವಿವರಗಳು, ಮೂಲ ಪಠ್ಯಕ್ರಮ ಪ್ರಕ್ರಿಯೆಗಳು, ಮತ್ತು ಅವರ ಸಂಸ್ಥೆಗಳಲ್ಲಿನ ಅಗತ್ಯ ಬೋಧನಾ ಸೌಲಭ್ಯಗಳ ಕುರಿತು ಪ್ರತಿಕ್ರಿಯೆ ನೀಡುವವರ ಅಭಿಪ್ರಾಯಗಳನ್ನು ದಾಖಲಿಸಲು ಅರೆ ರಚನಾತ್ಮಕ ಸಂದರ್ಶನ ಸಾಧನವನ್ನು ವಿನ್ಯಾಸಗೊಳಿಸಲಾಯಿತು. ಈ ಅರೆ ರಚನಾತ್ಮಕ ಸಂದರ್ಶನ ಸಾಧನಕ್ಕೆ ಪ್ರಸ್ತುತ ಎನ್.ಸಿ.ಟಿ.ಇ ನಿಯಮಗಳ ಕಟ್ಟುಗಳು ಚೌಕಟ್ಟಾಗಿ ಕಾರ್ಯನಿರ್ವಹಿಸಿದವು. ಆದರೂ, ಈ ಹಿಂದೆ ಉಲ್ಲೇಖಿಸಿದಂತೆ, ಸೂಚಿಸಲಾದ ಮಾನದಂಡಗಳು ಮತ್ತು ವರದಿಯಾದ ಅಭ್ಯಾಸಗಳ ನಡುವಿನ ಅಂತರದ ಮೌಲ್ಯಮಾಪನ ಮಾಡಲು ಎನ್.ಸಿ.ಟಿ.ಇ ಮಾನದಂಡಗಳನ್ನು ಅಂತಿಮ ಮಾರ್ಗಸೂಚಿಗಳಾಗಿ ತೆಗೆದುಕೊಂಡಿಲ್ಲ. ಬದಲಾಗಿ, ಈ ಮಾನದಂಡಗಳನ್ನು, ಖಾಸಗಿ ಟಿ.ಇ.ಐ ಗಳಲ್ಲಿ ಚಾಲ್ತಿಯಲ್ಲಿರುವ ಭ್ರಷ್ಟಾಚಾರದ ಮುಖ್ಯ ಕ್ಷೇತ್ರಗಳನ್ನು ಬಯಲುಗೊಳಿಸುವ ಸಾಧನಗಳಾಗಿ ಬಳಸಲಾಗಿದೆ.

ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಇತರ ಅಧ್ಯಯನಗಳಲ್ಲಿ ಕಂಡುಬಂದಂತೆ, ಪ್ರತಿಕ್ರಿಯೆ ನೀಡದೆ ಇರುವುದು ಮತ್ತು ನಿರ್ದಿಷ್ಟ ವಿಚಾರಗಳಿಗೆ ಪ್ರತಿಕ್ರಿಯೆ ನೀಡಲು ಹಿಂದೇಟು ಹಾಕಿರುವಂತಹ ಸಂದರ್ಭಗಳು ಅತ್ಯಧಿಕವಾಗಿದ್ದವು. ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಅಗತ್ಯ ಬೋಧಕ ವರ್ಗದ ಲಭ್ಯತೆ/ ಅಲಭ್ಯತೆ, ಪಠ್ಯಕ್ರಮ ಮತ್ತು ಬೋಧನಾ ಅಗತ್ಯತೆಗಳ ಮೇಲೆ ಕೇಂದ್ರೀಕರಿಸಿದ್ದ ಪ್ರತಿಕ್ರಿಯೆಗಳ ಕುರಿತು ಪರಿಮಾಣಾತ್ಮಕ ವಿಷಯ ವಿಶ್ಲೇಷಣೆಯನ್ನು ನಡೆಸಲಾಯಿತು. ಸಂಖ್ಯೆಗಳಲ್ಲಿ ವರದಿಯಾದ ಪ್ರತಿಕ್ರಿಯೆಗಳಿಗೆ ಸಂಬಂಧಿಸಿದಂತೆ, (ಉದಾಹರಣೆಗೆ: ಬೋಧಕರ ಸಂಖ್ಯಾಬಲ; ವಿದ್ಯಾರ್ಥಿಗಳ ಸರಾಸರಿ ಹಾಜರಾತಿ), ಸಂಸ್ಥೆಯೊಳಗೆಯೇ, ಪ್ರತಿಕ್ರಿಯೆ ನೀಡುವವರ ಪ್ರತಿಕ್ರಿಯೆಯಲ್ಲಿಯೇ ವ್ಯತ್ಯಯ ಇರುವುದನ್ನು ಗಮನದಲ್ಲಿಟ್ಟುಕೊಂಡು ಅತ್ಯುತ್ತಮ ಸಾಧ್ಯ ಸನ್ನಿವೇಶ ಮತ್ತು ಕಷ್ಟ ಸಾಧ್ಯ ಸನ್ನಿವೇಶಗಳನ್ನು ಪರಿಗಣಿಸಲಾಗಿದೆ. ಅಂದರೆ, ಯಾವುದೇ ನಿರ್ದಿಷ್ಟ ಸಂಸ್ಥೆಗೆ, ಈ ಸಾಂಸ್ಥಿಕ ಮಾನದಂಡಗಳಿಗೆ ಪ್ರತಿಕ್ರಿಯಿಸುವ ವರ್ಗವು ವರದಿ ಮಾಡಿರುವ ಗರಿಷ್ಠ ಮೌಲ್ಯ ಮತ್ತು ಕನಿಷ್ಠ ಮೌಲ್ಯಗಳೆರಡರನ್ನೂ ಪ್ರತ್ಯೇಕವಾಗಿ ಪರಗಣಿಸಲಾಗಿದೆ. ಈ ಸಂಸ್ಥೆಗಳಲ್ಲಿ, ಈ ಮಾನದಂಡಗಳ ಅತ್ಯುತ್ತಮ ಸನ್ನಿವೇಶ ಯಾವುದು ಹಾಗೂ ಅತ್ಯಂತ ಕಷ್ಟದ ಸನ್ನಿವೇಶ ಯಾವುದಾಗಿರಬಹುದು ಎಂಬ ಚಿತ್ರಣವನ್ನು ನೀಡಲು ಈ ರೀತಿ ಮಾಡಲಾಗಿದೆ.

ಅರೆ ರಚನಾತ್ಮಕ ಸಂದರ್ಶನ ಸಾಧನದಲ್ಲಿ ಒಳಗೊಂಡಿರುವ ಪ್ರತಿವಾದಿಗಳಲ್ಲದೆ, ಅರೆ ರಚನಾತ್ಮಕ ಸಂದರ್ಶನ ಸಾಧನದ ಭಾಗವಾಗಿದ್ದ ಅದೇ ಪ್ರಮುಖ ವಿಷಯಗಳ ಸುತ್ತ, ಸಂಶೋಧಕ ತಂಡವು ಒಟ್ಟು ಮೂರು ತಾಣಗಳಲ್ಲಿ ಅನೌಪಚಾರಿಕ, ಮುಕ್ತ ಚರ್ಚೆಗಳನ್ನು ನಡೆಸಲು ಇನ್ನಷ್ಟು ಪ್ರತಿವಾದಿಗಳ ತಂಡವನ್ನು ಒಳಗೊಂಡಿತು (ಕೋಷ್ಠಕ 2 ನೋಡಿ). ಈ ಚರ್ಚೆಗಳು ಪರಿಮಾಣಾತ್ಮಕ ವಿಷಯ ವಿಶ್ಲೇಷಣೆ ನಡೆಸಲು ಸಾಲುವಂತೆ ರೂಪಿಸದ ಕಾರಣ, ದತ್ತಾಂಶದ ಈ ವಿಭಾಗಕ್ಕಾಗಿ ಗುಣಾತ್ಮಕ ವಿಷಯಾಧಾರಿತ ವಿಶ್ಲೇಷಣೆಯನ್ನು ಬಳಸಲಾಯಿತು.

ಕೋಷ್ಠಕ 2. ಅನೌಪಚಾರಿಕ, ಮುಕ್ತ ಚರ್ಚೆಯಲ್ಲಿ ಒಳಗೊಂಡ ಪ್ರತಿವಾದಿಗಳು

| ಜಿಲ್ಲೆಗಳು | ಪ್ರಾಂಶುಪಾಲರು | ಬೋಧಕ ಸಿಬ್ಬಂದಿ | ವಿದ್ಯಾರ್ಥಿಗಳು | ಶಿಕ್ಷಕ ತರಬೇತಿ ಸಂಸ್ಥೆಗಳು |
|---|---|---|---|---|
| ಕಲಬುರ್ಗಿ | 8 | 12 | 30 | 12 (ಯಾದಗಿರಿ, ಬೀದರ್, ರಾಯಚೂರು ಮತ್ತು ಕಲಬುರ್ಗಿ ಜಿಲ್ಲೆಗಳಿಂದ) |
| ದೆಹ್ರಾದೂನ್ | 4 | 22 | 38 | 8 |
| ಹರಿದ್ವಾರ | 2 | 14 | 8 | 2 |
| ಒಟ್ಟು | 14 | 48 | 76 | 22 |

ಅರೆ ರಚನಾತ್ಮಕ ಸಂದರ್ಶನ ಪಟ್ಟಿ ಮತ್ತು ಅನೌಪಚಾರಿಕ ಮುಕ್ತ ಚರ್ಚೆಗಳ ವಿಚಾರದಲ್ಲಿ, ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಇರುವ ವಿವಿಧ ಭ್ರಷ್ಟಾಚಾರ ಪ್ರಕ್ರಿಯೆಗಳ ಗುಣಲಕ್ಷಣದ ಒಳನೋಟವನ್ನು ನೀಡುವುದಕ್ಕಾಗಿ ಪ್ರತಿವಾದಿಗಳು ನೀಡಿದ ನಿರೂಪಣೆಗಳನ್ನು ನಾವು ವಿಶ್ಲೇಷಿಸಿದೆವು.[10]

[10] ಈ ವಿಶ್ಲೇಷಣೆಯನ್ನು, ಭಾರತದಲ್ಲಿ ಶಿಕ್ಷಕರ ಶಿಕ್ಷಣದ ನಿಯಂತ್ರಣ ಮತ್ತು ಅವ್ಯವಹಾರದ ಕುರಿತ ಮಾಧ್ಯಮ ಚರ್ಚೆಗಳು ಮತ್ತು ಈ ಅಧ್ಯಯನ ಕ್ಷೇತ್ರದಲ್ಲಿ ಸಾಕಷ್ಟು ನೇರವಾಗಿ ಒಳಗೊಂಡಿರುವ ಅನುಭವವಿರುವ ಮಾಜಿ ಹಿರಿಯ ಅಧಿಕಾರಿಯ ಜೊತೆ ನಡೆಸಿದ ಸಂದರ್ಶನ ಇವೆರಡೂ ಪುಷ್ಟೀಕರಿಸುತ್ತವೆ

# 3. ಫಲಿತಗಳು: ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿರುವ ಭ್ರಷ್ಟಾಚಾರದ ರೂಪಗಳು

## 3.1 ಪ್ರಶಿಕ್ಷಕರಿಗೆ ಸಂಬಂಧಿಸಿದ್ದು

ಸಂಸ್ಥೆಗಳ ಗುಣಮಟ್ಟ ಮತ್ತು ಅವುಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಶಿಕ್ಷಕ ತರಬೇತಿ ಸಂಸ್ಥೆಗಳ ಬೋಧಕ ವರ್ಗವು, ಅಂದರೆ ಶಿಕ್ಷಕರ ಬೋಧಕರು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. (ಅತ್ಯಂತ ಪ್ರಮುಖವಲ್ಲದಿದ್ದರೂ) ಆದರೆ ಈ ಸಂಸ್ಥೆಗಳಲ್ಲಿ, ಬೋಧಕ ಸಿಬ್ಬಂದಿಗಳ ಹಂಚಿಕೆ, ನೇಮಕಾತಿ, ಮತ್ತು ಉಳಿಸಿಕೊಳ್ಳುವ ವಿಚಾರದಲ್ಲಿ ಘೋರ ಉಲ್ಲಂಘನೆಗಳು ಕಂಡುಬಂದಿವೆ.

ಅವರ ತಂಡದ ಗಾತ್ರಕ್ಕೆ ಸಂಬಂಧಿಸಿದಂತೆ ಬೋಧಕ ಸಿಬ್ಬಂದಿಯ ಗಾತ್ರವನ್ನು ವಿಶ್ಲೇಷಿಸಿದಾಗ, ಖಾಸಗಿ ಸಂಸ್ಥೆಗಳು ಎಷ್ಟು ಕನಿಷ್ಠ ಬೋಧಕ ಸಿಬ್ಬಂದಿಗಳೊಂದಿಗೆ ಕಾರ್ಯಾಚರಿಸಿವೆ ಎಂಬುದು ಬೆಳಕಿಗೆ ಬಂದಿದೆ. ದತ್ತಾಂಶ ಲಭ್ಯವಿರುವ ಒಟ್ಟು 29 ಸಂಸ್ಥೆಗಳ ಪೈಕಿ 3 ಸಂಸ್ಥೆಗಳು ಮಾತ್ರವೇ, ಅತ್ಯುತ್ತಮ ಸಾಧ್ಯ ಸನ್ನಿವೇಶದಲ್ಲಿ, ಎನ್.ಸಿ.ಟಿ.ಇ ಮಾನದಂಡಕ್ಕೆ ಅನುಗುಣವಾಗಿ ಬೇಕಾದ ಸಂಖ್ಯೆಯ ಶಿಕ್ಷಕ ಬೋಧಕರನ್ನು ಹೊಂದಿದ್ದವು (ಕೋಷ್ಟಕ 3 ನೋಡಿ).[11] ಅತ್ಯಂತ ಕಷ್ಟ ಸಾಧ್ಯ ಸನ್ನಿವೇಶದಲ್ಲಿ, ಅಗತ್ಯವಿರುವ ಬೋಧಕ ಸಿಬ್ಬಂದಿಗೆ ಸಂಬಂಧಿಸಿದಂತೆ 29ರಲ್ಲಿ 1 ಸಂಸ್ಥೆ ಮಾತ್ರವೇ ಎನ್.ಸಿ.ಟಿ.ಇ, ಯ ಮಾನದಂಡವನ್ನು ಪಾಲಿಸಿತ್ತು.

**ಕೋಷ್ಟಕ 3.** ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಬೋಧಕ ವರ್ಗದ ಸಂಖ್ಯಾಬಲದ ಸ್ಥಿತಿಗತಿ

| | ತಂಡದ ಗಾತ್ರಕ್ಕೆ ಅನುಗುಣವಾಗಿ ಬೋಧಕ ಸಿಬ್ಬಂದಿಯ ಸಂಖ್ಯಾಬಲ | ತಂಡದ ಗಾತ್ರಕ್ಕೆ ಅನುಗುಣವಾಗಿ ಸೂಚಿಸಿರುವ ಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಬೋಧಕ ಸಿಬ್ಬಂದಿ | ತಂಡದ ಗಾತ್ರಕ್ಕೆ ಅನುಗುಣವಾಗಿ ಸೂಚಿಸಿರುವ ಸಂಖ್ಯೆಯ ಅರ್ಧ ಅಥವಾ ಅರ್ಧಕ್ಕಿಂತ ಕಡಿಮೆ ಬೋಧಕ ಸಿಬ್ಬಂದಿ |
|---|---|---|---|
| ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ (ಅತ್ಯುತ್ತಮ ಸಾಧ್ಯ ಸನ್ನಿವೇಶ) | 3 | 8 | 18 |
| ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ (ಅತ್ಯಂತ ಕಷ್ಟಸಾಧ್ಯ ಸನ್ನಿವೇಶ) | 1 | 6 | 22 |

ಆಧಾರ (ದತ್ತಾಂಶ ಲಭ್ಯವಿರುವ ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ): 29

ಅಲ್ಲದೆ, ಬೋಧಕ ಸಿಬ್ಬಂದಿಗಳ ಪ್ರತಿಕ್ರಿಯೆಯ ಪ್ರಕಾರ, 18ರಲ್ಲಿ 5 ಸಂಸ್ಥೆಗಳಲ್ಲಿ, ಬೋಧಕ ಸಿಬ್ಬಂದಿಗಳು ಅನೇಕ ಸಂಸ್ಥೆಗಳಲ್ಲಿ (ಕೆಲವೊಮ್ಮೆ ಇಂತಹ 3-4 ಸಂಸ್ಥೆಗಳು) ಕಲಿಸುತ್ತಿದ್ದರು. ವಿದ್ಯಾರ್ಥಿಗಳ ಪ್ರತಿಕ್ರಿಯೆಯ ಪ್ರಕಾರ, 13ರಲ್ಲಿ 3 ಸಂಸ್ಥೆಗಳಲ್ಲಿ ಇಂತಹ ಪರಿಸ್ಥಿತಿ ಇತ್ತು. ಇದರೊಂದಿಗೆ, ಬೋಧಕ ವರ್ಗದ ಪ್ರತಿಕ್ರಿಯೆಯ ಪ್ರಕಾರ, 19ರಲ್ಲಿ 15 ಸಂಸ್ಥೆಗಳಲ್ಲಿ ಬೋಧಕ ಸಿಬ್ಬಂದಿಗಳು ಒಂದಕ್ಕಿಂತ ಹೆಚ್ಚು (ಕೆಲವೊಮ್ಮೆ 2-3) ವಿಷಯಗಳನ್ನು ಕಲಿಸುತ್ತಿದ್ದರು. ಇನ್ನೊಂದೆಡೆ, ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ವಿಶ್ಲೇಷಿಸಿದಾಗ, 25ರಲ್ಲಿ 22 ಸಂಸ್ಥೆಗಳಲ್ಲಿ ಇದೇ ರೀತಿಯ ಸನ್ನಿವೇಶವಿತ್ತು (ಕೋಷ್ಟಕ 4 ನೋಡಿ).

**ಕೋಷ್ಟಕ 4.** ಅನೇಕ ಸಂಸ್ಥೆಗಳಲ್ಲಿ ಕಲಿಸುವ ಮತ್ತು ಒಂದಕ್ಕಿಂತ ಹೆಚ್ಚು ವಿಷಯ ಕಲಿಸುವ ಬೋಧಕ ವರ್ಗದ ಸ್ಥಿತಿಗತಿ

[11] ಅತ್ಯುತ್ತಮ ಸಾಧ್ಯ ಸನ್ನಿವೇಶ ಮತ್ತು ಅತ್ಯಂತ ಕಷ್ಟಸಾಧ್ಯ ಸನ್ನಿವೇಶಗಳು, ಇಲ್ಲಿ ಬೋಧಕ ವರ್ಗದ ಸಂಖ್ಯೆಯ ಕುರಿತ ಅನುರೂಪ ಮಾನದಂಡದಲ್ಲಿ, ಎರಡು ಪ್ರತಿವಾದಿ ಗುಂಪುಗಳ (ಬೋಧಕ ವರ್ಗ ಮತ್ತು ವಿದ್ಯಾರ್ಥಿಗಳು) ಪ್ರತಿಕ್ರಿಯೆಗಳ ನಡುವೆ ಇರುವ ವ್ಯತ್ಯಯವನ್ನು ಪ್ರತಿನಿಧಿಸುತ್ತವೆ.

| | ಅನೇಕ ಸಂಸ್ಥೆಗಳಲ್ಲಿ ಕಲಿಸುವ ಬೋಧಕ ವರ್ಗ | | ವಿವಿಧ ವಿಷಯಗಳನ್ನು (ಒಂದಕ್ಕಿಂತ ಹೆಚ್ಚು) ಕಲಿಸುವ ಬೋಧಕ ವರ್ಗ | |
|---|---|---|---|---|
| | ಬೋಧಕ ವರ್ಗದ ಪ್ರತಿಕ್ರಿಯೆ | ವಿದ್ಯಾರ್ಥಿಗಳ ಪ್ರತಿಕ್ರಿಯೆ | ಬೋಧಕ ವರ್ಗದ ಪ್ರತಿಕ್ರಿಯೆ | ವಿದ್ಯಾರ್ಥಿಗಳ ಪ್ರತಿಕ್ರಿಯೆ |
| ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ | 5 | 3 | 15 | 22 |
| ಆಧಾರ (ದತ್ತಾಂಶ ಲಭ್ಯವಿರುವ ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ) | 18 | 13 | 19 | 25 |

ಈ ಸಂಸ್ಥೆಗಳಲ್ಲಿ ಶಿಕ್ಷಕರ ಬೋಧಕರ ಜೊತೆ ನಡೆಸಿದ ಸಂದರ್ಶನವು, ಬೋಧಕ ಸಿಬ್ಬಂದಿಯ ಕಡಿಮೆ ಹಂಚಿಕೆಯ ಹಿಂದೆ ಅಕ್ರಮ ಇರುವುದನ್ನು ಬಹಿರಂಗಪಡಿಸಿದೆ. ಖಾಸಗಿ ಸಂಸ್ಥೆಗಳು, ನಿಗದಿಪಡಿಸಿರುವ ಮಾನದಂಡ ಹಾಗೂ ತಮ್ಮ ದಾಖಲೆಗಳಲ್ಲಿ ತೋರಿಸಿರುವುದಕ್ಕಿಂತಲೂ ಕಡಿಮೆ ಸಂಖ್ಯೆಯ ಬೋಧಕ ವರ್ಗವನ್ನು ಹೊಂದಿರುವುದು ವರದಿಯಾಗಿದೆ. ಉಪಾಯದಿಂದ, ಅನೇಕ ಬೋಧಕ ಸಿಬ್ಬಂದಿಗಳನ್ನು ಅರೆಕಾಲಿಕ ಉದ್ಯೋಗಿಗಳಾಗಿ ಉಳಿಸಿಕೊಂಡು ಅವರಿಗೆ ಅನೇಕ ಸಂಸ್ಥೆಗಳಲ್ಲಿ ಕಲಿಸಲು ಅವಕಾಶ ಮಾಡಿಕೊಡಲಾಗಿದೆ. ಒಂದುವೇಳೆ ನಿಯಂತ್ರಣಾಧಿಕಾರಿ ತಪಾಸಣೆಗೆ ಬಂದಲ್ಲಿ, ಸೂಕ್ತ ಪ್ರಮಾಣದಲ್ಲಿ ಬೋಧಕ ವರ್ಗದ ಸಂಖ್ಯಾಬಲವನ್ನು ತೋರಿಸುವುದಕ್ಕಾಗಿ ಇದೇ ಬೋಧಕ ಸಿಬ್ಬಂದಿಗಳನ್ನು ಅನೇಕ ಸಂಸ್ಥೆಗಳು ಕರೆಸಿಕೊಳ್ಳುತ್ತವೆ. ಕಲಬುರ್ಗಿಯ ಬೋಧಕ ಸಿಬ್ಬಂದಿಯೊಬ್ಬರು ಈ ಕೆಳಗಿನ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ''ಬೋಧಕ ವರ್ಗದ ದಾಖಲೆಯಲ್ಲಿ ಅಂತರವಿದೆ. ದಾಖಲೆಗಳ ಪ್ರಕಾರ, ಕಾಲೇಜು ಅಗತ್ಯ ವಿದ್ಯಾರ್ಹತೆ ಮತ್ತು ಅನುಭವದೊಂದಿಗೆ ಬೇಕಾಗುವಷ್ಟು ಪೂರ್ಣಕಾಲಿಕ ಸಿಬ್ಬಂದಿಯನ್ನು ಹೊಂದಿದೆ. ಆದರೆ ವಾಸ್ತವವಾಗಿ ಪರಿಸ್ಥಿತಿಯು ಸಂಪೂರ್ಣವಾಗಿ ಭಿನ್ನವಾಗಿದೆ. ಅಧಿಕೃತವಾಗಿ ಶಿಕ್ಷಕರೊಬ್ಬರು ಒಂದು ಕಾಲೇಜಿನಲ್ಲಿ ಕಲಿಸುತ್ತಾರೆ. ಆದರೆ ಅನಧಿಕೃತವಾಗಿ ಅವರು ಅನೇಕ ಕಾಲೇಜುಗಳಲ್ಲಿ ಕಲಿಸುತ್ತಾರೆ. ಸಂಯುಕ್ತ ಕಾಲೇಜುಗಳಲ್ಲಿ, ಲಭ್ಯ ಬೋಧಕ ವರ್ಗವನ್ನು ಬೇರೆ ಬೇರೆ ವಿಷಯಗಳಿಗಾಗಿ ಬಳಸಿಕೊಳ್ಳಲಾಗುತ್ತದೆ. ಬಿ.ಎಡ್ ಕಾಲೇಜಿನ ಬೋಧಕ ಸಿಬ್ಬಂದಿಯೊಬ್ಬರು ಅದೇ ಆಡಳಿತ ಮಂಡಳಿಯಡಿ ಇರುವ ಪದವಿ ಕಾಲೇಜೊಂದರ ಪ್ರಾಂಶುಪಾಲರಾಗಿ ಕೆಲಸ ಮಾಡಬಹುದು. ಇನ್ನು ಕೆಲವು ಕಾಲೇಜುಗಳಲ್ಲಿ ಇದಕ್ಕೆ ತದ್ವಿರುದ್ಧವಾದ ವ್ಯವಸ್ಥೆ ಇದೆ. ಪದವಿ ಕಾಲೇಜೊಂದರ ಪ್ರಾಂಶುಪಾಲರಿಗೆ ಬಿ.ಎಡ್ ಕಾಲೇಜಿನಲ್ಲಿ ಕಲಿಸಲು ಹೇಳಬಹುದು.'' ಬಾರ್ಮರ್ ನಲ್ಲಿರುವ ಖಾಸಗಿ ಕಾಲೇಜೊಂದರ ಪ್ರಾಂಶುಪಾಲರು ಇನ್ನೂ ಹಲವು ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ''ಅನೇಕ ಕಾಲೇಜುಗಳಲ್ಲಿ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕರು ಲಭ್ಯವಿಲ್ಲ ಹಾಗೂ ಬೋಧಕ ಸಿಬ್ಬಂದಿ ಇಲ್ಲದೆಯೇ ಇವರು ಸಂಭಾಳಿಸುತ್ತಿದ್ದಾರೆ. ನಾವು ನಿವೃತ್ತ ಶಿಕ್ಷಕರೊಬ್ಬರನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಕಲಿಸಲು ಇವರು ಸಾಕಷ್ಟು ಅನುಭವವನ್ನು ಹೊಂದಿದ್ದಾರೆ.''

ಬೋಧಕ ವರ್ಗದ ಮೇಲಿನ ವೆಚ್ಚವನ್ನು ಕಡಿತಗೊಳಿಸಲು ಈ ಸಂಸ್ಥೆಗಳು ಅನುಸರಿಸಿರುವ ಇನ್ನೊಂದು ಕಾರ್ಯತಂತ್ರವೇನೆಂದರೆ, ಬೋಧಕರು ಕಲಿಸಬಹುದಾದ ವಿಷಯಗಳ ಸಂಖ್ಯೆಯನ್ನು ಆಧರಿಸಿ ಬೋಧಕ ಸಿಬ್ಬಂದಿಯನ್ನು ನೇಮಿಸುವುದು. ಹೀಗಾಗಿ ಈ ಶಿಕ್ಷಕ ತರಬೇತಿ ಸಂಸ್ಥೆಗಳು ನಿರ್ದಿಷ್ಟ ವಿಷಯದಲ್ಲಿ ಅನುಭವ ಹೊಂದಿರುವ ಸಮರ್ಪಿತ ಬೋಧಕ ವರ್ಗವನ್ನು ಹೊಂದಿಲ್ಲ. ದೆಹ್ರಾದೂನ್ ನಲ್ಲಿರುವ ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆ ಒಂದರ ಬೋಧಕ ಸಿಬ್ಬಂದಿ ಈ ರೀತಿ ಹೇಳಿದ್ದಾರೆ. ''ಅನೇಕ ಬಾರಿ ಈ ಸಂಸ್ಥೆಗಳು ಬಹು ವಿಷಯಗಳನ್ನು ಬೋಧಿಸುವ ವ್ಯಕ್ತಿಗಳನ್ನು ನೇಮಿಸುತ್ತವೆ. ಉದಾಹರಣೆಗೆ, ಅರ್ಹ ಅಭ್ಯರ್ಥಿಯೊಬ್ಬರು ಜೀವಶಾಸ್ತ್ರದಲ್ಲಿ ಪದವಿ ಪಡೆದಿದ್ದರೆ, ಹಾಗೂ ಕಡಿಮೆ ಸಾಮರ್ಥ್ಯವಿರುವ ಅಭ್ಯರ್ಥಿಯೊಬ್ಬರು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ ಪದವಿಯನ್ನು ಪಡೆದಿದ್ದರೆ, ಅನೇಕ ವಿಷಯಗಳನ್ನು ಬೋಧಿಸಬಲ್ಲ ಎರಡನೇ ಅಭ್ಯರ್ಥಿಯನ್ನೇ ಅವರು ಆರಿಸಿಕೊಳ್ಳುತ್ತಾರೆ.'' ಈ ಅಭ್ಯಾಸ ಜಾರಿಯಲ್ಲಿರುವ ಕುರಿತು ವಿದ್ಯಾರ್ಥಿಗಳು ಸಹ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ''ಖಾಸಗಿ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ಎರಡು - ಮೂರು

ಕಾಲೇಜುಗಳಲ್ಲಿ ಕಲಿಸುತ್ತಾರೆ. ಅಲ್ಲದೆ ಒಬ್ಬರೇ ಶಿಕ್ಷಕರು ಎರಡು - ಮೂರು ವಿಷಯಗಳನ್ನು ಕಲಿಸುತ್ತಾರೆ... ಮೂರು ದಿನಗಳ ಕಾಲ ಒಂದು ಕಾಲೇಜಿನಲ್ಲಿ ಕಲಿಸಿದರೆ ಇನ್ನುಳಿದ ಮೂರು ದಿನಗಳಲ್ಲಿ ಇನ್ನೊಂದು ಕಾಲೇಜು, ಅಥವಾ ಬೆಳಿಗ್ಗೆ ಒಂದು ಕಾಲೇಜಿನಲ್ಲಿ ಕಲಿಸಿದರೆ ಸಂಜೆ ಇನ್ನೊಂದು ಕಾಲೇಜು. ಅವರ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಕಾಲೇಜಿನ ವೇಳಾಪಟ್ಟಿಯನ್ನು ತಯಾರಿಸಲಾಗುತ್ತದೆ.'' (ವಿದ್ಯಾರ್ಥಿ, ಕಲಬುರ್ಗಿ)

ಈ ವ್ಯವಸ್ಥೆಗಳು ಖಾಸಗಿ ಸಂಸ್ಥೆಗಳಿಗೆ ಕನಿಷ್ಠ ಬೋಧಕ ವರ್ಗ ಮತ್ತು ಸಂಬಳದೊಂದಿಗೆ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುವುದಲ್ಲದೆ, ತಪಾಸಣಾ ಭೇಟಿಯ ವೇಳೆ ನಿಯಂತ್ರಕ ಅಧಿಕಾರಿಗಳನ್ನು ತೃಪ್ತಿಪಡಿಸಲು ಸಹ ಇದರಿಂದ ಸಾಧ್ಯವಾಗುತ್ತದೆ. ಉದಾಹರಣೆಗೆ, ಉತ್ತರಕಾಶಿಯ ಸಂಸ್ಥೆಯೊಂದರ ಬೋಧಕ ಸಿಬ್ಬಂದಿಯೊಬ್ಬರನ್ನು ಸಂತೃಪ್ತಿಯ ಮಟ್ಟದ ಕುರಿತು ಕೇಳಿದಾಗ ಈ ರೀತಿ ಹೇಳಿದರು, ''ಇಲ್ಲ, ನಾವು ಸಂತೃಪ್ತರಾಗಿಲ್ಲ, ಆದರೇನು ಮಾಡುವುದು? ಇಲ್ಲಿ ಬೇರೆ ಯಾವುದೇ ಅವಕಾಶಗಳು ಲಭ್ಯವಿಲ್ಲ. ತಪಾಸಣೆಯ ವೇಳೆ ಸೂಚಿಸಿರುವ ಮಾನದಂಡದಂತೆ ಬೋಧಕ ವರ್ಗವನ್ನು ತೋರಿಸಲಾಗುತ್ತದೆ... ಉತ್ತರಕಾಶಿಯ ಹಾಗೂ ದೆಹ್ರಾದೂನ್ ನ ಹೆಚ್ಚಿನ ಕಾಲೇಜುಗಳಲ್ಲಿ ಇದು ನಡೆಯುತ್ತಿದೆ.'' ಶಿಕ್ಷಕ ತರಬೇತಿ ಸಂಸ್ಥೆಗಳು ನಡೆಸುವ ಈ ಮೋಸದ ವ್ಯವಹಾರದ ಕುರಿತು ಇನ್ನೂ ಇಬ್ಬರು ಬೋಧಕ ಸಿಬ್ಬಂದಿಗಳು ಮಾಹಿತಿ ಹಂಚಿಕೊಂಡಿದ್ದಾರೆ. ಇವರಲ್ಲಿ ಒಬ್ಬರು ಡೆಹ್ರಾಡೂನ್ ನವರು, ಇನ್ನೊಬ್ಬರು ಖರ್ಗೋನ್ ನವರು.

ಬೋಧಕ ಸಿಬ್ಬಂದಿಗಳೊಂದಿಗೆ ಚರ್ಚೆ ನಡೆಸಿದಾಗ, ತಮ್ಮ ಉದ್ದೇಶಪೂರ್ವಕ ಭ್ರಷ್ಟ ಅಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಖಾಸಗಿ ಸಂಸ್ಥೆಗಳು ದಬ್ಬಾಳಿಕೆಯ ಕುಶಾಗ್ರ ತಂತ್ರಗಳನ್ನು ಬಳಸುತ್ತಿರುವ ಬಗ್ಗೆ ಮಾಹಿತಿ ದೊರೆಯಿತು. ಈ ಸಂಸ್ಥೆಗಳು ಬೋಧಕ ಸಿಬ್ಬಂದಿಗಳಿಗೆ ಔಪಚಾರಿಕ ನೇಮಕಾತಿ ಪತ್ರಗಳನ್ನು ಕೊಡುವುದಿಲ್ಲ ಹಾಗೂ ಅವರು ಔಪಚಾರಿಕವಾಗಿ ಸಹಿ ಹಾಕಿರುವ ಮೊತ್ತಕ್ಕಿಂತಲೂ ಕಡಿಮೆ ಸಂಬಳವನ್ನು ಪಾವತಿಸುತ್ತಿವೆ. ಕಡಿಮೆ ಸಂಬಳ ಪಾವತಿಸುವುದಕ್ಕಾಗಿ ಯಾವುದೇ ಕಾನೂನಿನ ಸಮಸ್ಯೆ ಬರಬಾರದು ಎಂಬ ಉದ್ದೇಶದಿಂದ ಎರಡನೇ ತಂತ್ರಗಾರಿಕೆಯನ್ನು ಬಳಸಲಾಗುತ್ತದೆ. ಪ್ರಶಿಕ್ಷಕರಿಗೆ ಬೇಕಾಗುವ ಅಗತ್ಯ ವಿದ್ಯಾರ್ಹತೆಯನ್ನು ಸಹ ಕಡೆಗಣಿಸಲಾಗುತ್ತದೆ. ಟೋಂಕ್ ಪಟ್ಟಣದಲ್ಲಿರುವ ಪ್ರಶಿಕ್ಷಕರೊಬ್ಬರು ಹೇಳಿರುವಂತೆ, 'ಹೇಗೆ ಗರಿಷ್ಠ ಲಾಭವನ್ನು ಪಡೆಯಬಹುದು ಎನ್ನುವುದರ ಮೇಲೆಯೇ ಆಡಳಿತ ಮಂಡಳಿಯು ಬೆಳಕು ಹರಿಸುತ್ತದೆ. ಹೀಗಾಗಿಯೇ ಅವರು ಅಗ್ಗದ ಆಯ್ಕೆಯನ್ನು ಹುಡುಕುತ್ತಾರೆ. ಅಗತ್ಯವಿರುವ ಪದವಿಯನ್ನು ಗಳಿಸಿರುವ ವ್ಯಕ್ತಿಯು ಗಣನೀಯ ಪ್ರಮಾಣದ ಮೊತ್ತವನ್ನೇ [ಸಂಬಳವಾಗಿ] ಕೇಳುತ್ತಾನೆ. ಆಡಳಿತ ಮಂಡಳಿಯು ಪದವಿ ಗಳಿಸದ ವ್ಯಕ್ತಿಗೆ ಆದ್ಯತೆ ನೀಡುತ್ತದೆ. ಏಕೆಂದರೆ ಅವರು ಅರ್ಧ ಸಂಬಳಕ್ಕೆ ಕೆಲಸ ಮಾಡುತ್ತಾರೆ. ದಾಖಲೆಯ ಪ್ರಕಾರ ಸಂಬಳವು 20ರಿಂದ 22 ಸಾವಿರ [ಪ್ರತಿ ತಿಂಗಳಿಗೆ] ಇರುತ್ತದೆ, ಆದರೆ ಆತ ಮಾತ್ರ 10ರಿಂದ 15 ಸಾವಿರ ಗಳಿಸುತ್ತಾನೆ; ಹಾಗೂ ಇದು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಯಗೊಳ್ಳುತ್ತದೆ. ಅವರನ್ನು ನೇಮಿಸುವ ಮೊದಲೇ ಆಡಳಿತ ಮಂಡಳಿಯು ಈ ಕುರಿತು ಮಾತುಕತೆ ನಡೆಸಿರುತ್ತದೆ. ಈ ಬೋಧಕ ಸಿಬ್ಬಂದಿ ಇನ್ನಷ್ಟು ವಿಷಯಗಳನ್ನು ಹಂಚಿಕೊಂಡರು, ''ಅವರು [ಕಾಲೇಜಿನ ಆಡಳಿತ ಮಂಡಳಿ] ಎಲ್ಲರಿಗೂ ನೇಮಕಾತಿ ಪತ್ರವನ್ನು ತಯಾರಿಸುತ್ತಾರೆ ಹಾಗೂ ಅದರಲ್ಲಿ ಉದ್ಯೋಗಿಯ ಸಂಬಳ ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲೇಖಿಸಿರುತ್ತಾರೆ. ಆದರೆ ಇದನ್ನು ಉದ್ಯೋಗಿಗೆ ನೀಡಲಾಗುವುದಿಲ್ಲ, ಬದಲಾಗಿ ಆಡಳಿತ ಮಂಡಳಿಯೇ ಇಟ್ಟುಕೊಳ್ಳುತ್ತದೆ. ಇಲ್ಲದಿದ್ದರೆ, ನೇಮಕಾತಿ ಪತ್ರದಲ್ಲಿ ಉಲ್ಲೇಖಿಸಿರುವ ಉದ್ಯೋಗಿಯ ಸಂಬಳ ಮತ್ತು ನಿಬಂಧನೆಗಳು - ಷರತ್ತುಗಳ ಪಾಲನೆಯಲ್ಲಿ ವ್ಯತ್ಯಯ ಇರುವುದಕ್ಕಾಗಿ ಉದ್ಯೋಗಿಗಳು ನ್ಯಾಯಾಯಲದಲ್ಲಿ ದಾವೆಯನ್ನು ಹೂಡಬಹುದು. ಅವರು [ಆಡಳಿತ ಮಂಡಳಿ] ಎಲ್ಲಾ ದಾಖಲೆಗಳನ್ನು ಇಡುತ್ತಾರೆ, ಆದರೆ ಅವರ ಬಳಿಯೇ [ಅವುಗಳನ್ನು] ಇಡುತ್ತಾರೆ ಹಾಗೂ ಸಂದರ್ಶಕರು [ಭೇಟಿ ನೀಡುವ ಸಂದರ್ಶಕ ತಂಡ] ಕೇಳಿದಲ್ಲಿ ಅವರಿಗೆ ತೋರಿಸುತ್ತಾರೆ.''

ಭರವಸೆ ನೀಡಿದ ಸಂಬಳ ಮತ್ತು ಅವರಿಗೆ ನಿಜವಾಗಿಯೂ ಪಾವತಿಯಾದ ಸಂಬಳದ ನಡುವೆ ಯಾವುದೇ ವ್ಯತ್ಯಾಸವಿದೆಯೇ ಎಂದು ಬೋಧಕ ಸಿಬ್ಬಂದಿಯನ್ನು ಕೇಳಲಾಯಿತು. ಈ ಪ್ರಶ್ನೆಗೆ ದತ್ತಾಂಶ ಲಭ್ಯವಿರುವ ಒಟ್ಟು 27 ಬೋಧಕ ಸಿಬ್ಬಂದಿಗಳ ಪೈಕಿ, 13 ಜನರು, ತಾವು ಸಹಿ ಹಾಕುವ ಸಂಬಳ ಮತ್ತು ನಿಜವಾಗಿಯೂ ಪಡೆಯುವ ಸಂಬಳದ ನಡುವೆ ಭಿನ್ನತೆ ಇದೆ ಎಂದು ಪ್ರತಿಕ್ರಿಯಿಸಿದ್ದಾರೆ (ಕೋಷ್ಟಕ 5 ನೋಡಿ).

ಇಂತಹ ಸಂಸ್ಥೆಗಳ ಸಂಖ್ಯೆಗಳ ವಿಚಾರದಲ್ಲಿ, ದತ್ತಾಂಶ ಲಭ್ಯವಿರುವ 18 ಸಂಸ್ಥೆಗಳ ಪೈಕಿ 10ರಲ್ಲಿ ಈ ರೀತಿಯ ಪರಿಸ್ಥಿತಿ ಇತ್ತು. ತಮ್ಮ ಸಂಸ್ಥೆಗಳು ನೇಮಕಾತಿ ಪತ್ರವನ್ನು ನೀಡಿವೆಯೇ ಎಂದು ಈ ಬೋಧಕ ಸಿಬ್ಬಂದಿಯನ್ನು ಕೇಳಲಾಯಿತು. ಇದಕ್ಕೆ, ದತ್ತಾಂಶ ಲಭ್ಯವಿರುವ 29 ಪ್ರತಿವಾದಿಗಳಲ್ಲಿ 15 ಮಂದಿ ಋಣಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ; ಹಾಗೂ 35 ಸಂಸ್ಥೆಗಳಲ್ಲಿ 11ರಲ್ಲಿ ಈ ಪರಿಸ್ಥಿತಿ ಇತ್ತು.

ಕೋಷ್ಟಕ 5. ಬೋಧಕ ಸಿಬ್ಬಂದಿಯ ಆಯ್ಕೆ ಮತ್ತು ಸಂಬಳ

| | ವೇತನ ಪಟ್ಟಿ ಮತ್ತು ನೀಡಲಾಗುವ ಸಂಬಳದ ನಡುವಿನ ವ್ಯತ್ಯಾಸ | ಆಧಾರ | ನೇಮಕಾತಿ ಪತ್ರ ಪಡೆಯದವರು | ಆಧಾರ |
|---|---|---|---|---|
| ಬೋಧಕ ಸಿಬ್ಬಂದಿಯ ಸಂಖ್ಯೆ | 13 | 27 | 15 | 29 |
| ಶಿಕ್ಷಕ ತರಬೇತಿ ಸಂಸ್ಥೆಗಳ ಸಂಖ್ಯೆ | 10 | 18 | 11 | 35 |

ಪ್ರಶಿಕ್ಷಕರ ಕಡಿಮೆ ಹಂಚಿಕೆಯ ವ್ಯಾಪಕ ಸಮಸ್ಯೆ ಮತ್ತು ಖಾಸಗಿ ಸಂಸ್ಥೆಗಳ ಸುಳ್ಳು ವರದಿಗಾರಿಕೆಯನ್ನು ಎನ್.ಸಿ.ಟಿ.ಇ ಸಹ ಒಪ್ಪಿಕೊಂಡಿದೆ. ಇಂತಹ ಅಕ್ರಮಗಳನ್ನು ಹತ್ತಿಕ್ಕುವ ಉದ್ದೇಶದಿಂದ, ಬೋಧಕ ಸಿಬ್ಬಂದಿಯ ಸಂಖ್ಯಾಬಲ ಸೇರಿದಂತೆ ಸಾಂಸ್ಥಿಕ ಮತ್ತು ಕಾರ್ಯಕ್ರಮದ ವಿವರಗಳ ಕುರಿತು ಅಗತ್ಯ ಮಾಹಿತಿ ಒಳಗೊಂಡಿರುವ ಅಫಿಡವಿಟ್ ಸಲ್ಲಿಸಲು ಎನ್.ಸಿ.ಟಿ.ಇ.ಯು ಮಾನ್ಯತೆ ಪಡೆದ ಶಿಕ್ಷಕ ತರಬೇತಿ ಸಂಸ್ಥೆ ಗಳಿಗೆ ತಿಳಿಸಿತ್ತು. ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಎನ್.ಸಿ.ಟಿ.ಇ ಅಧ್ಯಕ್ಷರ ಈ ಕೆಳಗಿನ ಪ್ರತಿಕ್ರಿಯೆಯು, ಖಾಸಗಿ ಶಿಕ್ಷಕ ಶಿಕ್ಷಣ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಯ ಸಂಖ್ಯಾಬಲದ ತಪ್ಪು ನಿರೂಪಣೆಯು ಎಷ್ಟು ವ್ಯಾಪಕವಾಗಿದೆ ಎಂಬುದನ್ನು ತೋರಿಸುತ್ತದೆ, ''ಅನೇಕ ಕಾಲೇಜುಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಶಿಕ್ಷಕರನ್ನು ಹೊಂದಿಲ್ಲ ಎಂಬುದನ್ನು ನಾವು ಕಂಡುಕೊಂಡೆವು. ಬೇರೆ ಬೇರೆ ಕಾಲೇಜುಗಳಲ್ಲಿ ಎಷ್ಟು ಪ್ರಶಿಕ್ಷಕರನ್ನು ತೋರಿಸಲಾಗಿದೆ ಎಂಬುದನ್ನು ಕಂಡುಹಿಡಿಯಲು ನಾವು ಆಧಾರ್ [ಹನ್ನೆರಡು ಅಂಕಿಗಳ ಬಯೋಮೆಟ್ರಿಕ್ ಆಧರಿತ, ಗುರುತಿಸುವಿಕೆಯ ವಿಶಿಷ್ಟ ಸಂಖ್ಯೆ] ಅನ್ನು ಬಳಸಲು ಯತ್ನಿಸುತ್ತಿದ್ದೇವೆ. ಗುತ್ತಿಗೆ ಆಧರಿತ ಶಿಕ್ಷಕರು ಕಲಿಸುವುದನ್ನು ನಾವು ನಿಲ್ಲಿಸುವುದಿಲ್ಲ, ಆದರೆ ಅವರನ್ನು ಅಗತ್ಯವಿರುವ ಸಂಖ್ಯಾಬಲದ ಅಡಿಯಲ್ಲಿ ತೋರಿಸಲಾಗದು'' (Scroll.in 30ನೇ ಮೇ 2017). ನಮ್ಮ ಅಧ್ಯಯನದಲ್ಲಿ ಕಂಡುಬಂದಂತೆ, ಹಿರಿಯ ಅಧಿಕಾರಿಯೊಬ್ಬರ ಈ ಪ್ರತಿಕ್ರಿಯೆಯು, ಶಾಶ್ವತ ನೆಲೆಯಲ್ಲಿ ಕೆಲಸ ಮಾಡಬೇಕಾದ, ಕೆಲವೊಂದು ಸಂಸ್ಥೆಗಳಲ್ಲಿ ಸಮರ್ಪಿತ ಬೋಧಕ ವರ್ಗವಾಗಿ ಸೇವೆ ನೀಡಬೇಕಾದ ಪ್ರಶಿಕ್ಷಕರು ವಾಸ್ತವವಾಗಿ ಬೇರೆ ಬೇರೆ ಸಂಸ್ಥೆಗಳಲ್ಲಿ ಹೇಗೆ ಗುತ್ತಿಗೆ ಆಧರಿತ ಸ್ಥಾನವನ್ನು ಹೊಂದಿದ್ದಾರೆ ಹಾಗೂ 'ಔಪಚಾರಿಕ'ವಾಗಿ ಅವರನ್ನು ಈ ಸಂಸ್ಥೆಗಳು ಹೇಗೆ ಶಾಶ್ವತ ನೆಲೆಯ ಉದ್ಯೋಗಿಗಳಾಗಿ ತೋರಿಸಿವೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ.

## 3.2 ಪೂರ್ಣಗೊಳ್ಳದ ಪಠ್ಯಕ್ರಮ ಅಗತ್ಯಗಳು

ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಗುಣಮಟ್ಟವು ತೃಪ್ತಿದಾಯಕವಾಗಿದೆ ಎಂದು ಹೇಳಬೇಕಾದರೆ, ಅದು ಪಠ್ಯಕ್ರಮದ ಅಗತ್ಯ ಅವಶ್ಯಕತೆಗಳಾದ ಕೋರ್ಸ್ ವರ್ಕ್ ಮತ್ತು ಇತರ ಮೂಲಾಂಶ (ಅಂದರೆ, ಪ್ರಾಯೋಗಿಕ ಪಾಠ, ಶಾಲಾ ಇಂಟರ್ನ್‌ಶಿಪ್‌ಗಳಂತಹವುಗಳನ್ನು) ಗಳೆರಡನ್ನು ಪೂರೈಸಬೇಕಾಗುತ್ತದೆ. ಪ್ರಶಿಕ್ಷರ ಆಯ್ಕೆಯ ವಿಷಯದಲ್ಲಿ ಕಾಣುವಂತೆ ಇಲ್ಲಿಯೂ ಸಹ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಅಗತ್ಯ ಮಾನದಂಡದವು ಉದ್ದೇಶಪೂರ್ವಕವಾಗಿ ಉಲ್ಲಂಘನೆಯಾಗಿರುವುದನ್ನು ಕಾಣಬಹುದು.

ತಾವು ಹಾಜರಾಗುವ ಕಾಲೇಜುಗಳಲ್ಲಿ ತಮ್ಮ ತಂಡಗಳ ಕೋರ್ಸ್ ವರ್ಕ್‌ನ ಸರಾಸರಿ ಹಾಜರಾತಿ ಕುರಿತಾಗಿ ವಿದ್ಯಾರ್ಥಿಗಳನ್ನು ಕೇಳಲಾಯಿತು. ಅತ್ಯುತ್ತಮವಾದ ಸನ್ನಿವೇಶದಲ್ಲಿ, ಅಂದರೆ ನಿರ್ದಿಷ್ಟ ಕಾಲೇಜೊಂದರಲ್ಲಿ ಹಾಜರಾತಿಯ ಕುರಿತು ವಿದ್ಯಾರ್ಥಿ ಪ್ರತಿವಾದಿಗಳಿಂದ ವರದಿಯಾದ ಗರಿಷ್ಠ ಸಂಖ್ಯೆಯನ್ನು ನಾವು ಪರಿಗಣಿಸುವಲ್ಲಿ, 10 ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಸರಾಸರಿ 50 ಶೇಕಡಾದಿಂದ 80 ಶೇಕಡಾದಷ್ಟು ಇತ್ತು ಎಂದು ವರದಿಯಾಯಿತು ಹಾಗೂ 10 ಸಂಸ್ಥೆಗಳಲ್ಲಿ ಸರಾಸರಿ ಹಾಜರಾತಿಯು 50 ಶೇಕಡಾ ಅಥವಾ ಅದಕ್ಕಿಂತ ಕಡಿಮೆ ಇತ್ತು (ಕೋಷ್ಟಕ 6 ನೋಡಿ). ಅತ್ಯಂತ ಕೆಟ್ಟದಾದ ಸನ್ನಿವೇಶದಲ್ಲಿ, ಅಂದರೆ ನಿರ್ದಿಷ್ಟ ಕಾಲೇಜೊಂದರಲ್ಲಿ ಹಾಜರಾತಿಯ ಕುರಿತು ವಿದ್ಯಾರ್ಥಿ ಪ್ರತಿವಾದಿಗಳಿಂದ ವರದಿಯಾದ ಕನಿಷ್ಠ ಸಂಖ್ಯೆಯನ್ನು ನಾವು ಪರಿಗಣಿಸುವಲ್ಲಿ, 12 ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಸರಾಸರಿ 50 ಶೇಕಡಾದಿಂದ 80 ಶೇಕಡಾದಷ್ಟು ಇತ್ತು ಎಂದು ವರದಿಯಾಯಿತು ಹಾಗೂ 14 ಸಂಸ್ಥೆಗಳಲ್ಲಿ ಸರಾಸರಿ ಹಾಜರಾತಿಯು 50 ಶೇಕಡಾ ಅಥವಾ ಅದಕ್ಕಿಂತ ಕಡಿಮೆ ಇತ್ತು. ರಾಯ್ ಪುರದ ಕೆಲವು ಖಾಸಗಿ ಕಾಲೇಜುಗಳಲ್ಲಿ ಸರಾಸರಿ ಹಾಜರಾತಿಯು 10 ರಿಂದ 15 ಶೇಕಡಾದಷ್ಟು ಇರುವುದನ್ನು ವಿದ್ಯಾರ್ಥಿಗಳು ವರದಿ ಮಾಡಿದ್ದಾರೆ. ಇದೇ ರೀತಿ, ಖರ್ಗೋನ್ ನಲ್ಲಿ, ಖಾಸಗಿ ಸಂಸ್ಥೆಯೊಂದರ ಬೋಧಕ ಸಿಬ್ಬಂದಿಯೊಬ್ಬರು ಹೇಳಿರುವಂತೆ, ಬಿ.ಎಡ್ ಕಾರ್ಯಕ್ರಮದ 100 ವಿದ್ಯಾರ್ಥಿಗಳಲ್ಲಿ ಸುಮಾರು 30-35 ಮಂದಿ ಮತ್ತು ಡಿ.ಎಲ್.ಎಡ್ ಕಾರ್ಯಕ್ರಮದ 150 ವಿದ್ಯಾರ್ಥಿಗಳ ಪೈಕಿ ಹಿಂದಿನಷ್ಟೇ ಸಂಖ್ಯೆಯ ವಿದ್ಯಾರ್ಥಿಗಳು ಅವರ ಸಂಸ್ಥೆಯಲ್ಲಿ ನಿರಂತರವಾಗಿ ತರಗತಿಗಳಿಗೆ ಹಾಜರಾಗುತ್ತಿದ್ದಾರೆ.

ಕೋಷ್ಟಕ 6. ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸರಾಸರಿ ಹಾಜರಾತಿ

| | 80% ಅಥವಾ ಅದಕ್ಕಿಂತ ಹೆಚ್ಚು ಹಾಜರಾತಿ | 80%ದಿಂದ 50% ಹಾಜರಾತಿ | 50% ಅಥವಾ ಅದಕ್ಕಿಂತ ಕಡಿಮೆ ಹಾಜರಾತಿ |
|---|---|---|---|
| ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ (ಅತ್ಯುತ್ತಮವಾಧಸನ್ನಿವೇಶ) | 9 | 10 | 10 |
| ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ (ಅತ್ಯಂತ ಕೆಟ್ಟದಾದಸನ್ನಿವೇಶ) | 3 | 12 | 14 |

ಆಧಾರ (ದತ್ತಾಂಶ ಲಭ್ಯವಿರುವ ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ): 29

ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳು ಹಾಜರಾತಿಯನ್ನು ಪರಿಗಣಿಸದೆ ಇರುವುದು, ಮತ್ತು ತಮ್ಮ ಪರೀಕ್ಷೆಗಳಿಗೆ ಹಾಜರಾಗಲು ಕನಿಷ್ಠ ಅಗತ್ಯತೆ ಎನಿಸಿರುವ ನಿರಂತರ ಕೋರ್ಸ್ ವರ್ಕ್ ಮತ್ತು ಶಾಲಾ ಇಂಟರ್ನ್‌ಶಿಪ್ ಗಳ ಹಾಜರಾತಿ ಮಾನದಂಡವನ್ನು ಯಾವುದೇ ಭೀತಿಯಿಲ್ಲದೆ ಉಲ್ಲಂಘಿಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿರುವುದು ಎದ್ದು ಕಾಣುತ್ತದೆ. ವಿದ್ಯಾರ್ಥಿಗಳ ವಿಶ್ಲೇಷಣೆಯು, 29ರಲ್ಲಿ 28 ಸಂಸ್ಥೆಗಳು ಹಾಜರಾತಿಯ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಿರುವುದನ್ನು ತೋರಿಸಿಕೊಟ್ಟಿದೆ. (ಕೋಷ್ಟಕ 7 ನೋಡಿ). ಇದೇ ರೀತಿ, 29ರಲ್ಲಿ 18 ಸಂಸ್ಥೆಗಳು, ತಮ್ಮ ಶಾಲಾ ಇಂಟರ್ನ್‌ಶಿಪ್ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಿರುವುದು ವರದಿಯಾಗಿದೆ.

ಕೋಷ್ಟಕ 7. ಕಾರ್ಯಕ್ರಮದ ಮಾನದಂಡವನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವ ಸಂಸ್ಥೆಗಳು

| | ಹಾಜರಾತಿಯ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವ ಸಂಸ್ಥೆಗಳು | ಆಧಾರ | ಇಂಟರ್ನ್‌ಶಿಪ್ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವ ಸಂಸ್ಥೆಗಳು | ಆಧಾರ |
|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 63 | 72 | 40 | 69 |
| ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ | 28 | 29 | 18 | 29 |

ಖಾಸಗಿ ಸಂಸ್ಥೆಗಳು ಶೈಕ್ಷಣಿಕ ಕಾರ್ಯಕ್ರಮದ ಮೂಲ ಅಗತ್ಯಗಳನ್ನೇ ಪೂರೈಸದೆ ಇರುವುದನ್ನು ನೋಡಿದರೆ, ಈ ಸಂಸ್ಥೆಗಳ ಪಠ್ಯಕ್ರಮದ ಮೂಲ ಅಗತ್ಯಗಳನ್ನು ವಿದ್ಯಾರ್ಥಿಗಳು ಪೂರೈಸಬೇಕಾದ ಅಗತ್ಯ ಬೀಳುವುದಿಲ್ಲ ಎನ್ನುವುದರಲ್ಲಿ ಅಚ್ಚರಿಯೇನೂ ಕಾಣುವುದಿಲ್ಲ. ದತ್ತಾಂಶ ಲಭ್ಯವಿರುವ 29 ಸಂಸ್ಥೆಗಳಲ್ಲಿ 10ರಲ್ಲಿ ವಿಷಯ ಅಭ್ಯಾಸವು ಕಲಿಕಾ ಕಾರ್ಯಕ್ರಮದ ಅಂಗವಾಗಿಲ್ಲ ಎಂಬುದು ವರದಿಯಾಗಿದೆ. ಇದೇ ವೇಳೆ ಕ್ರಿಯಾ ಸಂಶೋಧನೆಯನ್ನು (ವರದಿಯಾದ 29 ಸಂಸ್ಥೆಗಳ ಪೈಕಿ 25ರಲ್ಲಿ) ಹೆಚ್ಚಿನ ಸಂಸ್ಥೆಗಳಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಕಂಡುಬಂದಿದೆ. (ಕೋಷ್ಟಕ 8 ನೋಡಿ) ಹೀಗಾಗಿ, ಟೋಂಕ್ ಪಟ್ಟಣದ ವಿದ್ಯಾರ್ಥಿಯೊಬ್ಬರಿಗೆ ಅವರು ತಮ್ಮ ಕಲಿಕಾ ಅವಧಿಯಲ್ಲಿ ಯಾವುದೇ ಕ್ರಿಯಾ ಸಂಶೋಧನೆಯನ್ನು ಕೈಗೊಂಡಿದ್ದಾರೆಯೇ ಎಂದು ಕೇಳಿದಾಗ ಈ ಕೆಳಗಿನಂತೆ ಪ್ರತಿಕ್ರಿಯೆ ನೀಡಿರುವುದು ಅಚ್ಚರಿಯ ವಿಷಯವೇನಲ್ಲ, ‘‘ಇಲ್ಲ, ಈ ಹೆಸರನ್ನು ಈ ಮೊದಲು ನಾನು ಕೇಳಿಯೇ ಇಲ್ಲ; ಕ್ರಿಯಾ ಸಂಶೋಧನೆ ಎಂದರೇನು? ಕಾಲೇಜಿನಲ್ಲಿ ಈ ಕುರಿತು ನಾನು ನಾಳೆ ಕೇಳುತ್ತೇನೆ.’’ ಅಲ್ಲದೆ, ಶಿಕ್ಷಕರನ್ನು ರೂಪಿಸುವುದರಲ್ಲಿ ಶಾಲಾ ಇಂಟರ್ನ್‌ಶಿಪ್ ಪ್ರಮುಖ ಅಂಗವೆನಿಸುತ್ತದೆ. ಶಾಲಾ ಪ್ರಕ್ರಿಯೆಗಳ ಅಂಗವೆನಿಸಬೇಕಾದರೆ ಇಂಟರ್ನ್‌ಶಿಪ್ ತೀರಾ ಅಗತ್ಯವಾದುದು. ಪ್ರಶಿಕ್ಷಕರು ಮತ್ತು ಶಾಲೆಗಳ ಶಿಕ್ಷಕರ ನೆರವಿನೊಂದಿಗೆ ಭವಿಷ್ಯದ ಶಿಕ್ಷಕರು ಇದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಆದರೆ 23ರಲ್ಲಿ 16 ಸಂಸ್ಥೆಗಳಲ್ಲಿ ಪ್ರಶಿಕ್ಷಕರು ಶಾಲೆಗಳಿಗೆ (ಹೀಗೆ ಭೇಟಿ ನೀಡುವುದು ಅತ್ಯಗತ್ಯ) ನಿರಂತರ ಭೇಟಿ ನೀಡಿಯೇ ಇಲ್ಲ ಎಂಬುದನ್ನು ವಿದ್ಯಾರ್ಥಿಗಳ ಪ್ರತಿಕ್ರಿಯೆಯು ತೋರಿಸಿಕೊಟ್ಟಿದೆ.

ಕೋಷ್ಟಕ 8. ಕಾರ್ಯಕ್ರಮ ಸಂಬಂಧಿತ ಚಟುವಟಿಕೆಗಳ ಹಂಚಿಯ ಕುರಿತು ವಿದ್ಯಾರ್ಥಿಗಳ ಪ್ರತಿಕ್ರಿಯೆಗಳು

| | ವಿಷಯ ಅಭ್ಯಾಸಗಳ ಸಂಖ್ಯೆ | ಕ್ರಿಯಾ ಸಂಶೋಧನೆಯ ಗೈರು | ಇಂಟರ್ನ್‌ಶಿಪ್ ಸಂದರ್ಭದಲ್ಲಿ ಬೋಧಕ ಸಿಬ್ಬಂದಿ ಶಾಲೆಗೆ ಭೇಟಿ ನೀಡದೆ ಇರುವುದು |
|---|---|---|---|
| ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ | 10 | 25 | 16 |
| ಆಧಾರ (ಈ ದತ್ತಾಂಶ ಲಭ್ಯವಿರುವ ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ) | 29 | 29 | 23 |

ಈ ಸಂಸ್ಥೆಗಳ ಪ್ರಶಿಕ್ಷಕರೊಂದಿಗೆ ಚರ್ಚೆ ನಡೆಸಿದಾಗ, ಖಾಸಗಿ ಸಂಸ್ಥೆಗಳು ತಮ್ಮ ವಾಣಿಜ್ಯ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಪಠ್ಯಕ್ರಮದ ಅಗತ್ಯ ಮಾನದಂಡಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವುದು ಕಂಡುಬಂತು. ಉದಾಹರಣೆಗೆ, ಬಾರ್ಮರ್ ನಲ್ಲಿರುವ ಖಾಸಗಿ ಕಾಲೇಜೊಂದರ ಪ್ರಾಂಶುಪಾಲರು ಈ ಕೆಳಗಿನ ವಿಚಾರಗಳನ್ನು ಹಂಚಿಕೊಂಡಿದ್ದಾರೆ, ''ಕೆಲವೊಂದು ಸಂಸ್ಥೆಗಳು, ವಿದ್ಯಾರ್ಥಿಗಳು ಬರುವುದನ್ನೇ ಇಷ್ಟಪಡುವುದಿಲ್ಲ. ಏಕೆಂದರೆ, ವಿದ್ಯಾರ್ಥಿಗಳು ನಿರಂತರವಾಗಿ ಬಂದರೆ, ಅವರಿಗೆ ಕಲಿಸಬೇಕಾಗುತ್ತದೆ. ನನ್ನ ಸಂಬಂಧಿಯೊಬ್ಬರು ಈ ರೀತಿ ಹೇಳಿದ್ದರು, 'ನಾನು ಇಲ್ಲಿ ನನ್ನ ವಿದ್ಯಾರ್ಥಿಯನ್ನು ಬಿ.ಎಡ್ ಕಾಲೇಜಿಗೆ ಸೇರಿಸಿದ್ದೆ. ಆತ ತರಗತಿಗೆ ಹಾಜರಾಗಲು ಪ್ರಾರಂಭಿಸಿದ. ಆದರೆ ಕೆಲವು ದಿನಗಳ ನಂತರ ಅವನು ತರಗತಿಗೆ ಹಾಜರಾಗುವುದನ್ನು ನಿಲ್ಲಿಸಿದ. ಅವನು ಏಕೆ ತರಗತಿಗೆ ಹಾಜರಾಗುತ್ತಿಲ್ಲ ಎಂದು ಆತನನ್ನು ಕೇಳಿದಾಗ, ಕಾಲೇಜಿಗೆ ನಿರಂತರವಾಗಿ ಬರುವ ಬೋಧಕ ಸಿಬ್ಬಂದಿಯೇ ಅಲ್ಲಿ ಇಲ್ಲ ಎಂದು ಆತ ಹೇಳಿದ. ಕಾಲೇಜಿಗೆ ಹೋಗುವುದು ಎಂದರೆ ಸಮಯ ಹಾಳು ಮಾಡಿದಂತೆ ಎಂದು ಆತ ಭಾವಿಸಿದ್ದ.''' ಈ ಹಿಂದಿನ ವಿಭಾಗದಲ್ಲಿ ಗಮನಿಸಿದಂತೆ, ಕನಿಷ್ಠ ಬೋಧಕ ಸಿಬ್ಬಂದಿಯನ್ನು ಹೊಂದಿರುವ ಖಾಸಗಿ ಸಂಸ್ಥೆಗಳ ಕಾರ್ಯತಂತ್ರಕ್ಕೆ ಪೂರಕವಾಗಿ ಕಲಿಕಾ ಕಾರ್ಯಕ್ರಮಗಳಿಗೆ ಹಾಜರಾಗದಂತೆ ವಿದ್ಯಾರ್ಥಿಗಳಿಗೆ ನೇರವಾಗಿ ಉತ್ತೇಜಿಸಲಾಗುತ್ತದೆ ಅಥವಾ ಪರೋಕ್ಷವಾಗಿ ಸೂಚಿಸಲಾಗುತ್ತದೆ.

ವಿದ್ಯಾರ್ಥಿಗಳ ಜೊತೆ ಹಣಕಾಸಿನ ಏರ್ಪಾಡು ಮಾಡುವ ಮೂಲಕ ಪಠ್ಯಕ್ರಮದ ಅಗತ್ಯತೆಗಳಿಂದ ವಿನಾಯಿತಿ ಪಡೆಯಲು ಖಾಸಗಿ ಸಂಸ್ಥೆಗಳು ಅನುವು ಮಾಡಿಕೊಡುತ್ತಿರುವುದು ವರದಿಯಾಗಿದೆ. ದೆಹ್ರಾದೂನ್ ನಲ್ಲಿ ವಿದ್ಯಾರ್ಥಿಯೊಬ್ಬರು ಮುಕ್ತ ಚರ್ಚೆಯಲ್ಲಿ ಹೇಳಿರುವಂತೆ, ''ಈ ಸಂಸ್ಥೆಗಳು ಪ್ರತಿಯೊಂದಕ್ಕೂ ಪಾವತಿ ಮಾನದಂಡವನ್ನು ರೂಪಿಸಿದ್ದಾರೆ... ಹಾಜರಾಗದವರಿಗೆ, ಇಂಟರ್ನ್‌ಶಿಪ್ ನಲ್ಲಿ ಭಾಗವಹಿಸಿದವರಿಗೆ, ಪ್ರಾಕ್ಟಿಕಂ ಹೀಗೆ ಪಟ್ಟಿ ಮುಂದುವರಿಯುತ್ತದೆ. ಈ ದರವು ಸಂಸ್ಥೆಯಿಂದ ಸಂಸ್ಥೆಗೆ ಬದಲಾಗುತ್ತದೆ. ಇದು ರೂ. 5000-6000 ದಿಂದ ರೂ. 10000-12000 ತನಕ ಇರುತ್ತದೆ.'' ಕಲಬುರ್ಗಿಯಲ್ಲಿ ವಿದ್ಯಾರ್ಥಿಗಳ ಜೊತೆ ನಡೆಸಿದ ಮುಕ್ತ ಚರ್ಚೆಯಲ್ಲೂ ಇದೇ ವಿಚಾರ ಬೆಳಕಿಗೆ ಬಂದಿರುವುದರಿಂದ, ಇಂತಹ ಪಾವತಿ ವ್ಯವಸ್ಥೆಯು ಬೇರೆ ಬೇರೆ ತಾಣಗಳಲ್ಲಿ ಜೀವಂತವಾಗಿದೆ ಎನ್ನುವುದು ತಿಳಿದುಬರುತ್ತದೆ. ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ರೂ. 10000 ದಿಂದ 15,000 ತನಕ ದಂಡವನ್ನು ವಸೂಲಿ ಮಾಡಿ, ಶಾಲೆಗೆ ಗೈರು ಹಾಜರಾಗಲು ಪ್ರಾಂಶುಪಾಲರು ಅವಕಾಶ ನೀಡುತ್ತಾರೆ ಹಾಗೂ ವಿಶ್ವವಿದ್ಯಾಲಯದ ಸಮಿತಿಯು ಭೇಟಿ ನೀಡಿದಾಗ ಮಾತ್ರವೇ ಇವರು ಕಾಲೇಜಿಗೆ ಬರಬೇಕಾಗುತ್ತದೆ ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಮಾತ್ರವಲ್ಲದೆ, ಬೋಧಕ ಸಿಬ್ಬಂದಿಗಳು ಸಹ, ಇಂತಹ ಭ್ರಷ್ಟ ಅಭ್ಯಾಸಗಳು ಜಾರಿಯಲ್ಲಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿ ತಿಳಿಸಿದ್ದಾರೆ. ಯಾದಗಿರಿಯ ಬೋಧಕ ಸಿಬ್ಬಂದಿಯೊಬ್ಬರು ಈ ರೀತಿ ಹೇಳಿದ್ದಾರೆ, ''ಈ ಬಿ.ಎಡ್ ಕಾಲೇಜುಗಳು ಹೆಸರಿಗಷ್ಟೇ ಅಸ್ತಿತ್ವದಲ್ಲಿರುತ್ತವೆ ಎಂದು ನನಗನಿಸುತ್ತದೆ. ಹಣ ಪಾವತಿಸಿ ವಿದ್ಯಾರ್ಥಿಗಳು ಅಂಕಗಳನ್ನು ಪಡೆಯುತ್ತಾರೆ... ಆಂತರಿಕ ಅಂಕಗಳಿಂದ ಮುಖ್ಯ ಪರೀಕ್ಷೆಯ ಅಂಕಗಳ ತನಕ ಭ್ರಷ್ಟಾಚಾರ ನಡೆಯುತ್ತದೆ. ಪರೀಕ್ಷೆಗಳಿಗೆ ಹಾಜರಾಗದಿದ್ದರೂ ವಿದ್ಯಾರ್ಥಿಗಳು 90% ಅಂಕವನ್ನು ಪಡೆಯುತ್ತಾರೆ. ಈ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಶಿಕ್ಷಕರಾಗುವುದನ್ನು ನೀವೊಮ್ಮೆ ಊಹಿಸಿಕೊಳ್ಳಿ. ಅವರು ಏನನ್ನು ಕಲಿಸಬಹುದು! ನಾನೇನೂ ಮಾಡಲು ಆಗುವುದಿಲ್ಲ; ನಾವು ವಿಭಾಗದ ವಿರುದ್ಧ ಹೋಗಲು ಆಗುವುದಿಲ್ಲ. ಕಾಲೇಜಿಗೆ ಬರದೆಯೇ ಹಾಗೂ ತರಗತಿಗಳಿಗೆ ಹಾಜರಾಗದೆಯೇ ವಿದ್ಯಾರ್ಥಿಗಳು 80% ಅಂಕ ಗಳಿಸುತ್ತಾರೆ. ಅವರಿಗೆ ಪಠ್ಯ ಯೋಜನೆ, ಕಲಿಕೆ ಅಥವಾ ಬ್ಲೂಪ್ರಿಂಟ್ ಕುರಿತು ಏನೂ ಗೊತ್ತಿರುವುದಿಲ್ಲ. ಆದರೂ ಅವರು ಬೋಧಕ ಸಿಬ್ಬಂದಿಗೆ ಹಣ ಕೊಟ್ಟು 80% ಅಂಕ ಗಳಿಸುತ್ತಾರೆ. ಇದು ನಿರಂತರವಾಗಿ ತರಗತಿಗೆ ಬರುವ ಹಾಗೂ ಉನ್ನತ ಧ್ಯೇಯ ಹೊಂದಿರುವ ವಿದ್ಯಾರ್ಥಿಗಳ ಮೇಲೆ ನೇತ್ಯಾತ್ಮಕ ಪರಿಣಾಮ ಬೀರುತ್ತದೆ. ಅವರೂ ಸಹ ಬೇಗನೇ ಅದೇ ದಾರಿಯನ್ನು ಹಿಡಿಯುತ್ತಾರೆ.'' ಪ್ರಾಂಶುಪಾಲರು ಸಹ ತಮ್ಮ ಸಂಸ್ಥೆಯಲ್ಲಿ ಇಂತಹ ಅಕ್ರಮಗಳನ್ನು ಒಪ್ಪಿಕೊಂಡು ಬಿಡುತ್ತಾರೆ. ರಾಯ್ ಪುರದ ಪ್ರಾಂಶುಪಾಲರೊಬ್ಬರು ಈ ಕೆಳಗಿನ ಆಸಕ್ತಿಕರ ವಿವರವನ್ನು ನೀಡಿದ್ದಾರೆ, ''ವಿದ್ಯಾರ್ಥಿಗಳಲ್ಲಿ ಎರಡು ವರ್ಗಗಳಿವೆ. ಅವೆಂದರೆ ನಿರಂತರವಾಗಿ ಬರುವವರು ಮತ್ತು ನಿರಂತರವಾಗಿ ಬರದೇ ಇರುವವರು. ನಿರಂತರವಾಗಿ ಬರದ ವಿದ್ಯಾರ್ಥಿಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಈ ಕುರಿತು ನಾನು ಏನನ್ನೂ ಹೇಳುವುದಿಲ್ಲ. ನಿರಂತರವಾಗಿ ಹಾಜರಾಗುವ ವಿದ್ಯಾರ್ಥಿಗಳು ಬೋಧನಾ ಅಭ್ಯಾಸವನ್ನು ಸರಿಯಾಗಿ ಪೂರ್ಣಗೊಳಿಸುತ್ತಾರೆ. ನಿರಂತರವಲ್ಲದ ವಿದ್ಯಾರ್ಥಿಗಳಿಗೂ

ಶಾಲೆಗಳ ಹಾಜರಾತಿ ಅಗತ್ಯವಿರುವುದರಿಂದ ಕನಿಷ್ಠ ಕೆಲವು ದಿನಗಳ ಬೋಧನಾ ಅಭ್ಯಾಸವನ್ನು ನಡೆಸಲು ಸಲಹೆ ನೀಡಲಾಗುತ್ತದೆ. ಅವರು ಕೆಲ ದಿನಗಳ ಕಾಲ ಬರುತ್ತಾರೆ."

ಹೀಗೆ, ಖಾಸಗಿ ಸಂಸ್ಥೆಗಳು ನೇರವಾಗಿ ಪಠ್ಯಕ್ರಮದ ಅಗತ್ಯ ಮಾನದಂಡಗಳನ್ನು ಉಲ್ಲಂಘಿಸುತ್ತಿರುವುದು ಮತ್ತು ಹಣಕಾಸಿನ ಅಕ್ರಮದ ಮೂಲಕ ಕೋರ್ಸ್‌ವರ್ಕ್, ಪ್ರಾಕ್ಟಿಕಂ ಮತ್ತು ಶಾಲಾ ಇಂಟರ್ನ್‌ಶಿಪ್‌ನ ಅಗತ್ಯತೆಗಳಿಂದ ವಿನಾಯಿತಿ ಪಡೆಯಲು ವಿದ್ಯಾರ್ಥಿಗಳಿಗೆ ಉತ್ತೇಜಿಸುವುದು ಇಲ್ಲಿ ಸ್ಪಷ್ಟವಾಗಿದೆ. ಇನ್ನಷ್ಟು ಚಿಂತೆಗೀಡು ಮಾಡುವ ವಿಷಯವೇನೆಂದರೆ, ಪಠ್ಯಕ್ರಮದ ಅಗತ್ಯತೆಗಳನ್ನು ಪೂರೈಸದಿದ್ದರೂ ಪದವಿ ನೀಡುವ ಭರವಸೆಯನ್ನು ಈ ಸಂಸ್ಥೆಗಳು ನೀಡುವುದರಿಂದ ಈ ಸಂಸ್ಥೆಗಳನ್ನೇ ವಿದ್ಯಾರ್ಥಿಗಳು ಆರಿಸುವಂತೆ ಈ ಭ್ರಷ್ಟ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಸೆಳೆಯುತ್ತವೆ (ದೆಸ್ವಾಲ್ 2017 ನೋಡಿ).

## 3.3 ಮೂಲ ಬೋಧನಾ ಸೌಲಭ್ಯಗಳ ಅನುಪಸ್ಥಿತಿ

ಯಾವುದೇ ಶೈಕ್ಷಣಿಕ ಸಂಸ್ಥೆಗಳ ಮೂಲ ಸೌಕರ್ಯಗಳ ಅಂಗವೆನಿಸುವ ತರಗತಿ ಕೋಣೆ, ಅಧ್ಯಾಪಕರ ಕೊಠಡಿ, ಆಡಳಿತ ಕಚೇರಿಯ ಜೊತೆಗೆ, ಪಠ್ಯಕ್ರಮದ ಪ್ರಮುಖ ಭಾಗವೆನಿಸುವ ಬೋಧನಾ ಸೌಲಭ್ಯಗಳನ್ನು ಹೆಚ್ಚುವರಿಯಾಗಿ ಒದಗಿಸಬೇಕು. ಪಠ್ಯಕ್ರಮದ ಪ್ರಯೋಗಾಲಯಗಳು, ಗ್ರಂಥಾಲಯಗಳು, ಕಂಪ್ಯೂಟರ್ ಕೇಂದ್ರಗಳು ಅಥವಾ ಐ.ಸಿ.ಟಿ ಸಂಪನ್ಮೂಲ ಕೇಂದ್ರಗಳು ಮತ್ತು ವಿಚಾರ ಸಂಕಿರಣ ಭವನಗಳು ಇದರಲ್ಲಿ ಒಳಗೊಂಡಿವೆ. ನಮ್ಮ ದತ್ತಾಂಶದಲ್ಲಿರುವ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗಳ ಪ್ರತಿಕ್ರಿಯೆಯು, ಅನೇಕ ಖಾಸಗಿ ಸಂಸ್ಥೆಗಳು ಈ ಅಗತ್ಯ ಬೋಧನಾ ಸೌಲಭ್ಯಗಳನ್ನು ಒದಗಿಸದೇ ಇರುವುದನ್ನು ಬೆಳಕಿಗೆ ತಂದಿದೆ.

ಶಿಕ್ಷಕರ ಶಿಕ್ಷಣದ ಯಾವುದೇ ಕಾರ್ಯಕ್ರಮದಲ್ಲಿ ಅತ್ಯಂತ ಪ್ರಮುಖ ಬೋಧನಾ ಸೌಲಭ್ಯವೆನಿಸುವ ಪಠ್ಯಕ್ರಮ ಪ್ರಯೋಗಾಲಯವು 17ರಲ್ಲಿ 9 ಸಂಸ್ಥೆಗಳಲ್ಲಿ ಇಲ್ಲದೆ ಇರುವುದನ್ನು ಬೋಧಕ ಸಿಬ್ಬಂದಿಯ ಪ್ರತಿಕ್ರಿಯೆಯು ತೋರಿಸಿ ಕೊಟ್ಟಿದೆ. ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಪರಿಗಣಿಸಿದಾಗ 29ರಲ್ಲಿ 19 ಸಂಸ್ಥೆಗಳಲ್ಲಿ ಈ ಪ್ರಯೋಗಾಲಯ ಇಲ್ಲದೆ ಇರುವುದು ಕಂಡು ಬಂದಿದೆ (ಕೋಷ್ಟಕ 9 ನೋಡಿ). ಇತರ ಬೋಧನಾ ಸೌಲಭ್ಯಗಳ ಪರಿಸ್ಥಿತಿಯೂ ಹೇಳಿಕೊಳ್ಳುವಷ್ಟು ಚೆನ್ನಾಗಿಲ್ಲ. ವರದಿಯಾದ ದತ್ತಾಂಶದಲ್ಲಿ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಪರಿಗಣಿಸಿದಾಗ, ಸುಮಾರು ಮೂರನೇ ಒಂದರಷ್ಟು ಅಥವಾ ಅದಕ್ಕಿಂತ ಹೆಚ್ಚು ಸಂಸ್ಥೆಗಳಲ್ಲಿ ಗ್ರಂಥಾಲಯಗಳು, ಕಂಪ್ಯೂಟರ್ ಕೇಂದ್ರ ಮತ್ತು ವಿಚಾರ ಸಂಕಿರಣ (ಅಥವಾ ವಿವಿಧೋದ್ದೇಶ) ಭವನಗಳು ಲಭ್ಯವಿಲ್ಲದೇ ಇರುವುದು ಕಂಡುಬರುತ್ತದೆ.

ಕೋಷ್ಟಕ 9. ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಪ್ರಮುಖ ಮತ್ತು ಇತರ ಬೋಧನಾ ಸೌಲಭ್ಯಗಳ ಸ್ಥಿತಿಗತಿ

| | ಪಠ್ಯಕ್ರಮ ಪ್ರಯೋಗಾಲಯ | | ಗ್ರಂಥಾಲಯಗಳು | | ಕಂಪ್ಯೂಟರ್ ಕೇಂದ್ರಗಳು | | ವಿಚಾರ ಸಂಕಿರಣ ಭವನಗಳು | |
|---|---|---|---|---|---|---|---|---|
| | ಲಭ್ಯವಿಲ್ಲ | | ಲಭ್ಯವಿಲ್ಲ | | ಲಭ್ಯವಿಲ್ಲ | | ಲಭ್ಯವಿಲ್ಲ | |
| | ಬೋಧಕ ವರ್ಗ | ವಿದ್ಯಾರ್ಥಿಗಳು | ಬೋಧಕ ವರ್ಗ | ವಿದ್ಯಾರ್ಥಿಗಳು | ಬೋಧಕ ವರ್ಗ | ವಿದ್ಯಾರ್ಥಿಗಳು | ಬೋಧಕ ವರ್ಗ | ವಿದ್ಯಾರ್ಥಿಗಳು |

| | | | | | | | | |
|---|---|---|---|---|---|---|---|---|
| ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ | 9 | 19 | 3 | 10 | 8 | 14 | 4 | 9 |

ಆಧಾರ (ಈ ದತ್ತಾಂಶ ಲಭ್ಯವಿರುವ  ಶಿಕ್ಷಕರ ತರಬೇತಿ ಸಂಸ್ಥೆಗಳ ಸಂಖ್ಯೆ): 17 (ಪ್ರಶಿಕ್ಷಕರಿಗಾಗಿ) 29 (ವಿದ್ಯಾರ್ಥಿಗಳಿಗಾಗಿ)

ಪ್ರತಿವಾದಿಗಳ ನಿರೂಪಣೆಗಳು ಮತ್ತು ಸಂಶೋಧನಾ ತಂಡದ ಅವಲೋಕನವನ್ನು ವಿಶ್ಲೇಷಿಸಿದಾಗ, ಅಗತ್ಯ ಪ್ರಮಾಣದಲ್ಲಿ ಬೋಧನಾ ಸೌಲಭ್ಯಗಳನ್ನು ನೀಡದೇ ಇರುವ ಹಿಂದೆ ಉದ್ದೇಶಪೂರ್ವಕ ಕಾರ್ಯತಂತ್ರ ಇರುವುದು ಕಂಡುಬರುತ್ತದೆ. ಉದಾಹರಣೆಗೆ, ಖರ್ಗೋನ್ ನಲ್ಲಿರುವ 3 ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳ 9 ವಿದ್ಯಾರ್ಥಿಗಳು ಹೇಳಿರುವ ಪ್ರಕಾರ, ವಿವಿಧೋದ್ದೇಶ ಭವನ, ವಾಚನಾಲಯ ಮತ್ತು ಕಂಪ್ಯೂಟರ್ ಕೇಂದ್ರ ಮುಂತಾದ ಸೌಲಭ್ಯಗಳನ್ನು ಪಕ್ಕದ ಇತರ ಸಂಸ್ಥೆಗಳೊಂದಿಗೆ ಅಥವಾ ಅದೇ ಸಂಸ್ಥೆಯ ಇತರ ಶಾಲೆಗಳೊಂದಿಗೆ ಸಂಯೋಜಿಸಲಾಗುತ್ತದೆ. ಇಂತಹ ಒಂದು ಸಂಸ್ಥೆಯಲ್ಲಿ, ಅದೇ ಕಟ್ಟಡದಿಂದ ಫಾರ್ಮಸಿ ಕಾಲೇಜು ತರಗತಿಗಳನ್ನು ನಡೆಸುತ್ತಿತ್ತು ಹಾಗೂ ಶಿಕ್ಷಕರ ಶಿಕ್ಷಣ ಸಂಸ್ಥೆಯ ಸೌಲಭ್ಯಗಳನ್ನೇ ಈ ಕಾಲೇಜು ಸಹ ಬಳಸಿಕೊಳ್ಳುತ್ತಿತ್ತು. ಇಲ್ಲಿನ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಪ್ರಯೋಗಾಲಯದ ಕುರಿತು ಯಾವುದೇ ಮಾಹಿತಿ ಇರಲಿಲ್ಲ ಮಾತ್ರವಲ್ಲದೆ, ಭಾಷೆ, ವಿಜ್ಞಾನ, ಗಣಿತಶಾಸ್ತ್ರ ಅಥವಾ ಸಾಮಾಜಿಕ ವಿಜ್ಞಾನಕ್ಕೆ ಬೋಧನೆ-ಕಲಿಕೆ ಸಾಮಗ್ರಿಗಳು ಇರುವ ಯಾವುದೇ ಇಂತಹ ಸ್ಥಳದ ಕುರಿತು ಇವರಿಗೆ ತಿಳಿದಿರಲಿಲ್ಲ. ಇದೇ ರೀತಿ, ಉತ್ತರಕಾಶಿಯಲ್ಲಿ ಭೇಟಿ ನೀಡಿದ ಒಂದು ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ, ಸಣ್ಣದಾದ ನಾಲ್ಕು ಕೋಣೆಗಳ ಒಂದು ವಸತಿ ಕಟ್ಟಡದಲ್ಲಿ ತರಗತಿ ನಡೆಯುತ್ತಿತ್ತು ಹಾಗೂ ಇಲ್ಲಿ ಯಾವುದೇ ವಿವಿಧೋದ್ದೇಶ ಭವನ, ವಾಚನಾಲಯ ಅಥವಾ ಪಠ್ಯಕ್ರಮ ಪ್ರಯೋಗಾಲಯವಾಗಲಿ ಇರಲಿಲ್ಲ.

ಕಂಪ್ಯೂಟರ್ ಕೇಂದ್ರ ಎಂದು ಕರೆಯಲಾಗುತ್ತಿದ್ದ ಕೋಣೆಯು ಸಹ ತರಗತಿ ಕೋಣೆಯಾಗಿತ್ತು ಹಾಗೂ ಇಲ್ಲಿ ಕೇವಲ ಒಂದು ಕಂಪ್ಯೂಟರ್ ಇತ್ತು. ಅಲ್ಲದೆ ಪ್ರಾಂಶುಪಾಲರ ಕೊಠಡಿ, ಅಧ್ಯಾಪಕರ ಕೊಠಡಿ ಮತ್ತು ಆಡಳಿತ ಕಚೇರಿಯನ್ನು ಒಂದೇ ಕೋಣೆಯಲ್ಲಿ ಒಟ್ಟುಗೂಡಿಸಲಾಗಿತ್ತು.

ಈ ಸಂಸ್ಥೆಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಹೀನಾಯ ಪರಿಸ್ಥಿತಿಯ ಮೇಲೆ, ಈ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಬೋಧಕ ಸಿಬ್ಬಂದಿಗಳು ನೀಡಿರುವ ಪ್ರತಿಕ್ರಿಯೆಯು ಬೆಳಕು ಹರಿಸುತ್ತದೆ (ಬಾಕ್ಸ್ 2 ನೋಡಿ). ಅಲ್ಲದೆ, ತಪಾಸಣೆಗೆ ಭೇಟಿ ನೀಡುವ ತಂಡದ ಎದುರು ಯಾವ ರೀತಿ ಈ ಸೌಲಭ್ಯಗಳ ಕುರಿತು ಸುಳ್ಳು ಹೇಳಲಾಗುತ್ತದೆ ಹಾಗೂ ತಪ್ಪಾಗಿ ನಿರೂಪಿಸಲಾಗುತ್ತದೆ ಎಂಬುದನ್ನು ಈ ಪ್ರತಿಕ್ರಿಯೆಗಳು ತೋರಿಸಿ ಕೊಡುತ್ತವೆ.

<u>ಬಾಕ್ಸ್ 2. ಮುಕ್ತ ಚರ್ಚೆಯಲ್ಲಿ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳ (ಡೆಹ್ರಾಡೂನ್) ಬೋಧಕ ಸಿಬ್ಬಂದಿಗಳು ನೀಡಿದ ಪ್ರತಿಕ್ರಿಯೆಗಳು</u>

''ವಿದ್ಯಾರ್ಥಿಗಳು ಪ್ರಾಯೋಗಿಕ ಕಲಿಕೆಗಾಗಿ ಹಣ ಪಾವತಿಸಬೇಕಾಗುತ್ತದೆ. ಆದರೆ ಈ ಸಂಸ್ಥೆಗಳಲ್ಲಿ ಅಂತಹ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಪ್ರಾಯೋಗಿಕ ಕಲಿಕೆ ನಡೆಸಲು ಕೋಣೆಗಳಾಗಲಿ ಅಥವಾ ಅಗತ್ಯ ಮೂಲಭೂತ ಸೌಲಭ್ಯಗಳಾಗಲಿ ಇರುವುದಿಲ್ಲ. ಹಾಗೂ ಎಲ್ಲವನ್ನೂ ತಾತ್ಕಾಲಿಕ ವ್ಯವಸ್ಥೆ ಬಳಸಿ ನಡೆಸಲಾಗುತ್ತದೆ.''

''ಹೆಚ್ಚಿನ ಸಂಸ್ಥೆಗಳಲ್ಲಿ, ಬೋಧನೆಗಾಗಿ ಪ್ರೊಜೆಕ್ಟರ್ ಗಳು ಲಭ್ಯವಿಲ್ಲ. ನನ್ನದೇ ಅನುಭವವನ್ನು ಹೇಳುವುದಾದರೆ, ಕಳೆದ 5-7 ವರ್ಷಗಳಲ್ಲಿ ನಾನು ಕಲಿಸಿದ ಎರಡು - ಮೂರು ಸಂಸ್ಥೆಗಳಲ್ಲಿ ನಾನು ಯಾವತ್ತೂ ಪ್ರೊಜೆಕ್ಟರ್ ಅನ್ನು ಬಳಸಿಲ್ಲ. ಏಕೆಂದರೆ ಆ ಸಂಸ್ಥೆಗಳಲ್ಲಿ ಅದು ಇರಲಿಲ್ಲ. ಇದರ ಪರಿಣಾಮವಾಗಿ ನಾವು ನಮ್ಮ ವಿದ್ಯಾರ್ಥಿಗಳನ್ನು 'ಸ್ಮಾರ್ಟ್' ತರಗತಿಗಳಿಗೆ ಸಿದ್ಧಗೊಳಿಸುವುದಿಲ್ಲ.''

''ತಪಾಸಣೆಯ ಸಂದರ್ಭದಲ್ಲಿ ನಾವು ಮಾನದಂಡಗಳಿಗೆ ಅನುಗುಣವಾಗಿ 3000-4000 ಪುಸ್ತಕಗಳನ್ನು (ಸೂಚಿಸಿದ) ವ್ಯವಸ್ಥೆಗೊಳಿಸುತ್ತೇವೆ. ಪಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳು ಲಭ್ಯ. ಆದರೆ ನಿಯತಕಾಲಿಕಗಳು, ದಿನಪತ್ರಿಕೆಗಳು, ವ್ಯಕ್ತಿತ್ವ ವಿಕಸನದ

ಪುಸ್ತಕಗಳು ಮತ್ತು ವ್ಯಕ್ತಿತ್ವ ವಿಕಸನದ ನಿಯತಕಾಲಿಕಗಳು ಲಭ್ಯವಿಲ್ಲ. ನಾನು ಕೆಲಕಾಲ ದುಡಿದ ಸಂಸ್ಥೆಯೊಂದರಲ್ಲಿ ತರಗತಿಯು ಎರಡನೇ ಪಾಳಿಯಲ್ಲಿ ನಡೆಯುತ್ತಿತ್ತು. ಒಂದು ವೇಳೆ ಗ್ರಂಥಾಲಯದ ಅಗತ್ಯತೆ ಉಂಟಾದಲ್ಲಿ, ಗ್ರಂಥಾಲಯವನ್ನು ತೆರೆಯುವುದಕ್ಕಾಗಿ ಗ್ರಂಥಪಾಲಕರಿಗೆ ಕರೆ ಮಾಡಲು ವಿದ್ಯಾರ್ಥಿಗಳಿಗೆ ತಿಳಿಸಲಾಗಿತ್ತು. ನಿಜವಾಗಿ, ಈ ಗ್ರಂಥಪಾಲಕರನ್ನು, ಇದೇ ಕಾಲೇಜು ನಡೆಸುತ್ತಿದ್ದ ಬಿ.ಟೆಕ್ ಕಾರ್ಯಕ್ರಮ ಮತ್ತು ಗ್ರಂಥಾಲಯಕ್ಕಾಗಿ ನೇಮಕಾತಿ ಮಾಡಲಾಗಿತ್ತು. ವಿನಂತಿಯ ಮೇರೆಗೆ ಅವರು ಅರ್ಧ ಗಂಟೆ ಅಥವಾ ಒಂದು ಗಂಟೆಯ ಕಾಲವಷ್ಟೇ ಗ್ರಂಥಾಲಯವನ್ನು ತೆರೆಯಲು ಬರುತ್ತಿದ್ದರು.''

''ತಪಾಸಣೆಯ ಸಂದರ್ಭದಲ್ಲಿ ನಾವು ಗಣಿತಶಾಸ್ತ್ರ, ಭಾಷೆ, ಸಮಾಜ ವಿಜ್ಞಾನ ಮತ್ತು ಕಂಪ್ಯೂಟರ್ ಪ್ರಯೋಗಾಲಯಗಳ ಕುರಿತು ಮಾತನಾಡುತ್ತೇವೆ. ಆದರೆ, ನಾವು ಸುಮ್ಮನೆ ಕಂಪ್ಯೂಟರ್ ಗೆ ಒಂದಷ್ಟು ಸ್ಪೀಕರ್ ಗಳನ್ನು ಜೋಡಿಸುತ್ತೇವೆ, ಕೆಲವೊಂದು ಹೆಡ್ ಫೋನ್ ಗಳು, ಒಂದು ಟೇಪ್ ರೆಕಾರ್ಡರ್ ಮತ್ತು ಕೆಲವೊಂದು ಸಿ.ಡಿ.ಗಳನ್ನು ಪ್ರದರ್ಶನಕ್ಕೆ ಇಡುತ್ತೇವೆ. ಆದರೆ ಹೇಗೆ ಬಳಸಬೇಕು ಎನ್ನುವುದು ನಮಗೆ ಗೊತ್ತಿರುವುದಿಲ್ಲ. ತಾತ್ಕಾಲಿಕವಾಗಿ ನಾವು ಕಂಪ್ಯೂಟರ್ ನಿರ್ವಹಿಸುವ ವ್ಯಕ್ತಿಯನ್ನು ನಿಯೋಜಿಸುತ್ತೇವೆ. ಆದರೆ ಈ ಪ್ರಯೋಗಾಲಯಗಳನ್ನು ಹೇಗೆ ನಡೆಸಬೇಕು ಎನ್ನುವುದು ನಮಗೂ ತಿಳಿದಿರುವುದಿಲ್ಲ. ಹೆಚ್ಚಿನ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಕರನ್ನು ನಿಯೋಜಿಸುವುದೇ ಇಲ್ಲ. ಪವರ್ ಪಾಯಿಂಟ್ ಪ್ರಸ್ತುತಿ, ಇ-ಅಸೈನ್ ಮೆಂಟ್ ಗಳು, ಪೋರ್ಟ್ ಫೋಲಿಯೋ ಮುಂತಾದ ವಿಷಯಗಳನ್ನು ನಾವು ಪಠ್ಯಕ್ರಮದಲ್ಲಿ ಸೇರಿಸಿರುತ್ತೇವೆ. ಆದರೆ ನಮಗೆ ಇವುಗಳ ಕುರಿತು ತರಬೇತಿ ಇಲ್ಲದೆ ಇದ್ದಲ್ಲಿ ಹಾಗೂ ಕಂಪ್ಯೂಟರ್ ನಿರ್ವಹಿಸುವ ವ್ಯಕ್ತಿ ಇಲ್ಲದೆ ಇದ್ದಲ್ಲಿ ಇದನ್ನು ಮಾಡುವುದಾದರೂ ಹೇಗೆ.''

---

ಅಗತ್ಯ ಬೋಧನಾ ಸೌಲಭ್ಯಗಳನ್ನು ಸರಿಯಾಗಿ ನೀಡದ ಈ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳು  ತಪಾಸಣಾ ತಂಡ ಬಂದಾಗ ಅವರ ಹಾದಿ ತಪ್ಪಿಸಲು ಮತ್ತು ಅದನ್ನು ಮುಚ್ಚಿಹಾಕಲು ಹೇಗೆ ಬೇರೆ ಬೇರೆ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುತ್ತವೆ ಎನ್ನುವುದನ್ನು ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯ ಪ್ರತಿಕ್ರಿಯೆಗಳು ತೋರಿಸಿ ಕೊಡುತ್ತವೆ. ಮುಖ್ಯ ಸಾಂಸ್ಥಿಕ ಮತ್ತು ಶಿಕ್ಷಕ ಶಿಕ್ಷಣ ಕಾರ್ಯಕ್ರಮದ ಬೋಧನೆ-ಕಲಿಕೆ ಘಟಕಗಳು (ಬೋಧಕ ವರ್ಗ, ಪಠ್ಯಕ್ರಮದ ಅಗತ್ಯತೆಗಳು ಮತ್ತು ಬೋಧನಾ ಸೌಲಭ್ಯಗಳು) - ಹೀಗೆ ಪ್ರತಿಯೊಂದು ಸೌಲಭ್ಯದಲ್ಲಿಯೂ ಇರುವ ಕೊರತೆಯು ಪರಸ್ಪರ ಪೂರಕವೆನಿಸಿದೆ ಹಾಗೂ ಶಿಕ್ಷಣದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಬದಲಿಗೆ ಯಾವುದೇ ಲಂಗುಲಗಾಮಿಲ್ಲದೆ ಲಾಭಗಳಿಸುವ ತಮ್ಮ ಉದ್ದೇಶವನ್ನು ಈಡೇರಿಸಲು ಖಾಸಗಿ ಸಂಸ್ಥೆಗಳಿಗೆ ಇವು ಅವಕಾಶ ಒದಗಿಸುತ್ತವೆ.

### 3.4 ಆಳವಾಗಿ ಬೇರೂರಿರುವ ಈ ಭ್ರಷ್ಟಾಚಾರವು ಸುಸ್ಥಿರವಾಗಿರುವುದು ಹೇಗೆ?

ಹಿರಿಯ ಅಧಿಕಾರಿಗಳ ಪ್ರತಿಕ್ರಿಯೆಗಳು ಮತ್ತು ಮಾಧ್ಯಮ ಸಂವಾದಗಳ ಪ್ರಕಾರ, ಈ ಕೋರ್ಸುಗಳನ್ನು ಸಂಯೋಜಿಸುವ ವಿಶ್ವವಿದ್ಯಾಲಯಗಳು ಮತ್ತು ವಿಧಾಯಕ ಅಧಿಕಾರಿಗಳು ಮುಂತಾದ ವ್ಯವಸ್ಥೆಯೊಳಗಿನ ಇತರ ಸಂಸ್ಥೆಗಳ ಜೊತೆ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳು ರಾಜಕೀಯ ಮತ್ತು ಆರ್ಥಿಕ ಸಂಪರ್ಕ ಹೊಂದಿರುವುದನ್ನು ಎತ್ತಿ ತೋರಿಸುತ್ತವೆ. ಈ ಅಧ್ಯಯನದ ಅಂಗವಾಗಿ, ಶಿಕ್ಷಕ ಶಿಕ್ಷಣ ವ್ಯವಸ್ಥೆಯಲ್ಲಿ ಗಣನೀಯ ಅನುಭವ ಹೊಂದಿದ್ದ ಮಾಜಿ ಹಿರಿಯ ಅಧಿಕಾರಿಯೊಬ್ಬರ ಸಂದರ್ಶನ ಮಾಡಿದಾಗ, ಅವರು ಈ ಕೆಳಗಿನ ವಿಚಾರಗಳನ್ನು ಹಂಚಿಕೊಂಡರು, ''ಈ [ಖಾಸಗಿ ಶಿಕ್ಷಕ ಶಿಕ್ಷಣ] ಸಂಸ್ಥೆಗಳನ್ನು ಯಾರು ನಡೆಸುತ್ತಾರೆ? ಅವರೆಲ್ಲ ಮುಖ್ಯವಾಗಿ ಮದ್ಯದ ಗುತ್ತಿಗೆದಾರರು, ರಸ್ತೆ ಗುತ್ತಿಗೆದಾರರು, ಸಂಸದರು, ಶಾಸಕರು ಇತ್ಯಾದಿ.'' ತಾವು ಸಂಯೋಜನೆ ಬಯಸುವ ವಿಶ್ವವಿದ್ಯಾಲಯಗಳಿಗೆ ಉಪಕುಲಪತಿಗಳನ್ನು ನೇಮಿಸುವುದರಲ್ಲಿ ಈ ಖಾಸಗಿ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಹೇಗೆ ಭಾಗಿಯಾಗುತ್ತವೆ, ಮತ್ತು ಈ ಸಂಸ್ಥೆಗಳು ವಿಧಾಯಕಗಳು ಮತ್ತು ತಪಾಸಣೆಯಿಂದ ನುಣುಚಿಕೊಳ್ಳುವಂತೆ ಮಾಡಲು, ಲಂಚದ ವ್ಯವಸ್ಥೆಯು ರಾಜಕೀಯ ವ್ಯವಸ್ಥೆ, ವಿಧಾಯಕ ಸಂಸ್ಥೆಗಳು ಮತ್ತು ಈ ಖಾಸಗಿ ಕಾಲೇಜುಗಳ ನಡುವೆ ಹೇಗೆ ಕೊಂಡಿಯನ್ನು ರೂಪಿಸುತ್ತದೆ ಎಂಬುದನ್ನು ಇವರು ವಿವರಿಸಿದರು.

ಅಲ್ಲದೆ, ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿಯೊಬ್ಬರು, ಮಾಧ್ಯಮಕ್ಕೆ ಬರೆದ ಲೇಖನವೊಂದರಲ್ಲಿ, ಶಾಸನಾತ್ಮಕ ಸುಧಾರಣೆ ತರುವ ಯತ್ನಕ್ಕೆ ಈ ಖಾಸಗಿ ಕಾಲೇಜುಗಳು ಹೇಗೆ ಪ್ರತಿರೋಧ ತೋರಿದವು ಎಂಬುದನ್ನು ವಿವರಿಸುತ್ತಾ, ಈ ಮೈತ್ರಿಯು ಹೊಂದಿರುವ ಅಧಿಕಾರವನ್ನು ವಿವರಿಸಿದ್ದಾರೆ. ''ಪ್ರಾಮಾಣಿಕ ಅಧಿಕಾರಿಯಾಗಿದ್ದ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ (ಎನ್.ಸಿ.ಟಿ.ಇ) ಅಂದಿನ ಅಧ್ಯಕ್ಷರು, ಈ ಸಂಸ್ಥೆಗಳು ತಮ್ಮ ಅಸ್ತಿತ್ವದ ಕುರಿತು ವಿವರಗಳನ್ನು ಆಫಿಡೇವಿಟ್ ನಲ್ಲಿ ಸಲ್ಲಿಸುವಂತೆ ಎಲ್ಲಾ ಕಾಲೇಜುಗಳಿಗೆ ನೋಟೀಸ್ ನೀಡುವ ಮೂಲಕ ಕ್ರಮಕ್ಕೆ ಚಾಲನೆ ನೀಡಿದ್ದರು. ಅಸ್ತಿತ್ವದಲ್ಲಿರುವ ಸಂಸ್ಥೆಗಳಿಗೆ ಮಾತ್ರವೇ ಮಾನ್ಯತೆ ನೀಡುವುದು ಮತ್ತು ತಪ್ಪು ಮಾಹಿತಿ ನೀಡಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳುವುದು ಇದರ ಉದ್ದೇಶವಾಗಿತ್ತು. ಆರಂಭದಲ್ಲಿ ಇದು ಕೆಲಸ ಮಾಡಿತು. ಆದರೆ, ತಾವು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಬೀಳುವುದಾಗಿ ಅನೇಕ ಕಾಲೇಜುಗಳಿಗೆ ಮನವರಿಕೆಯಾಯಿತು. ಉನ್ನತ ಮಟ್ಟದ ರಾಜಕಾರಣಿಗಳು ಹಾಗೂ ಅನೇಕ ರಾಜ್ಯಗಳಿಂದ ಈ ಮಹನೀಯರು ಬೆಂಬಲವನ್ನು ಪಡೆದರೂ, ಮಾಫಿಯಾಗಳು ಅವರ ಮೇಲೆ ವಿಪರೀತ ಒತ್ತಡ ಹೇರಿದವು. ಈ ಅಧ್ಯಕ್ಷರ ಕೈ ಕಟ್ಟಿ ಹಾಕಲು ಅವರು 'ನ್ಯಾಯಾಂಗ'ದ ಹಾದಿಯನ್ನು ಬಳಸಿಕೊಂಡರು. ಅಂತಿಮವಾಗಿ ಅವರು ಹುದ್ದೆಯನ್ನು ತ್ಯಜಿಸಬೇಕಾಯಿತು.'' (ದಿ ಫೈನಾನ್ಶಿಯಲ್ ಎಕ್ಸ್‌ಪ್ರೆಸ್ 15ನೇ ನವೆಂಬರ್ 2018)

ಹೀಗೆ, ವ್ಯಾಪಕವಾದ ಮತ್ತು ಆಳವಾಗಿ ಬೇರೂರಿರುವ ಭ್ರಷ್ಟಾಚಾರ ವ್ಯವಸ್ಥೆಯಿಂದಾಗಿಯೇ ಈ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳು ವಿಧಾಯಕ ಅಧಿಕಾರಿಗಳ ಭೀತಿ ಇಲ್ಲದೆಯೇ ಕಾರ್ಯಾಚರಿಸುತ್ತಿವೆ ಹಾಗೂ ಗುಣಮಟ್ಟದ ಶಿಕ್ಷಣ ನೀಡದೆ ಇರಲು ಉದ್ದೇಶಪೂರ್ವಕವಾಗಿಯೇ ಕಾರ್ಯತಂತ್ರವನ್ನು ಅನುಸರಿಸುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿಯ ಕಸ್ತೂರಿ ರಂಗನ್ ಸಮಿತಿಯ ಕರಡು ವರದಿಯು (2019, ಪು. 283) ಈ ರೀತಿ ಹೇಳುತ್ತದೆ:

ಬೇಸರದ ವಿಷಯವೇನೆಂದರೆ, ಶಿಕ್ಷಕರ ಶಿಕ್ಷಣ ಕ್ಷೇತ್ರವು ಕಳಪೆ ಗುಣಮಟ್ಟದಿಂದಾಗಿ ತೊಂದರೆಗೆ ಒಳಗಾಗಿದೆ ಮತ್ತು ವಾಣಿಜ್ಯೀಕರಣದಿಂದಾಗಿ ವ್ಯಾಪಕ ಭ್ರಷ್ಟಾಚಾರಕ್ಕೆ ತುತ್ತಾಗಿದೆ. ಶಿಕ್ಷಕರ ಶಿಕ್ಷಣ ಒದಗಿಸುವ ಇಂದಿನ ಹೆಚ್ಚಿನ ಸಂಸ್ಥೆಗಳು ಖಾಸಗಿ ಕ್ಷೇತ್ರದ ಸಣ್ಣ ಕಾಲೇಜುಗಳಾಗಿದ್ದು, ಸಂಕುಚಿತವಾದ ಒಂದೇ ಕಾರ್ಯಕ್ರಮವನ್ನಷ್ಟೇ ಒದಗಿಸುತ್ತವೆ ಹಾಗೂ ಶಿಕ್ಷಕರನ್ನು ಸಿದ್ಧಪಡಿಸುವಲ್ಲಿ ತೋರಬೇಕಾದ ನಿಷ್ಠುರತೆ ಮತ್ತು ಗುಣಮಟ್ಟದ ವಿಚಾರದಲ್ಲಿ ಬದ್ಧತೆಯ ಕೊರತೆ ಎದ್ದು ಕಾಣುತ್ತದೆ. ಅಲ್ಲದೆ, 2015-16ರ ಎ.ಐ.ಎಸ್.ಎಚ್.ಇ ದತ್ತಾಂಶದ ಪ್ರಕಾರ, ಒಂದೇ ಕೋರ್ಸ್ ನ್ನಷ್ಟೇ ಕಲಿಸುವ ಭಾರತದ 17,000+ ಕಾಲೇಜುಗಳ ಪೈಕಿ 90 ಶೇಕಡಾದಷ್ಟು ಕಾಲೇಜುಗಳು ಶಿಕ್ಷಕರ ತರಬೇತಿ ಸಂಸ್ಥೆಗಳಾಗಿವೆ! ಸುಪ್ರೀಂ ಕೋರ್ಟು ರೂಪಿಸಿದ ಜಸ್ಟಿಸ್ ಜೆ.ಸ್ ವರ್ಮಾ ಆಯೋಗದ (2012) ಪ್ರಕಾರ, ಇವುಗಳಲ್ಲಿ ಹೆಚ್ಚಿನವು (ಅಂದರೆ ಸುಮಾರು 10,000 ಕ್ಕಿಂತಲೂ ಹೆಚ್ಚು) ನಿರ್ದಿಷ್ಟ ಪ್ರದೇಶಕ್ಕೆ ಹೊಂದಿಕೆಯಾಗುವ ಒಂದೇ ಕೋರ್ಸನ್ನು ಒಂಟಿಯಾಗಿ

ನಡೆಸುವ ಸಂಸ್ಥೆಗಳಾಗಿದ್ದು (standalone teaching institutes) ಗಂಭೀರವಾಗಿ ಶಿಕ್ಷಕರ ಶಿಕ್ಷಣ ಒದಗಿಸಲು ಯಾವುದೇ ರೀತಿಯಲ್ಲಿಯೂ ಪ್ರಯತ್ನಿಸುವುದಿಲ್ಲ, ಬದಲಾಗಿ ಹಣಕ್ಕಾಗಿ ಪದವಿಗಳನ್ನಷ್ಟೇ ಮಾರುತ್ತಿವೆ.

ಈ ನೆಲಕಚ್ಚಿರುವ ಸನ್ನಿವೇಶವನ್ನು ಟೋಂಕ್‌ನಲ್ಲಿರುವ ಖಾಸಗಿ ಸಂಸ್ಥೆಯೊಂದರ ಬೋಧಕ ಸಿಬ್ಬಂದಿಯೊಬ್ಬರು ಚೆನ್ನಾಗಿಯೇ ವರ್ಣಿಸಿದ್ದಾರೆ, ''[ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳ] ಮಾಲೀಕರು, ಉದ್ಯಮಿಗಳು ಅಥವಾ ರಾಜಕೀಯ ನಾಯಕರಾಗಿರುತ್ತಾರೆ. ವಾಸ್ತವವಾಗಿ ಅವರಿಗೆ ಶಿಕ್ಷಣದ ಬಗ್ಗೆ ಹೆಚ್ಚೇನೂ ತಿಳಿದಿರುವುದಿಲ್ಲ, ಅಲ್ಲದೆ ಗುಣಮಟ್ಟದ ಬಗ್ಗೆ ಅವರಿಗೆ ಆಸಕ್ತಿಯೇ ಇರುವುದಿಲ್ಲ. ಹಣ ಗಳಿಸುವುದಷ್ಟೇ ಅವರ ಅಂತಿಮ ಉದ್ದೇಶವಾಗಿರುತ್ತದೆ.''

## ಉಪಸಂಹಾರ

ಈ ಅಧ್ಯಯನವು, ಭಾರತದಲ್ಲಿ ಶಿಕ್ಷಕರ ಶಿಕ್ಷಣವನ್ನು ಕಾಡುತ್ತಿರುವ ಗಂಭೀರ ವಿಚಾರಗಳ ಮೇಲೆ ತೀಕ್ಷ್ಣ ಗಮನ ಹರಿಸುತ್ತದೆ. ಸುಮಾರು ೧೯೯೦ರಿಂದ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳ ಮೂಲಕ ಶಿಕ್ಷಕರ ಶಿಕ್ಷಣವು ವಾಣಿಜ್ಯೀಕರಣಗೊಂಡಿರುವುದರ ಮೇಲೆ ಶೈಕ್ಷಣಿಕ ನೀತಿಗೆ ಸಂಬಂಧಿಸಿದ ಇತ್ತೀಚಿನ ಕೆಲವು ದಾಖಲೆಗಳು ಬೆಳಕು ಚೆಲ್ಲಿವೆ. ಆದರೆ ನೀತಿ ನಿಯಮಗಳನ್ನು ಕಾರ್ಯರೂಪಕ್ಕೆ ತರುವಾಗ, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಪ್ರಯತ್ನ ನಡೆದಿಲ್ಲ. ಆದರೆ, ಉತ್ತಮವಾಗಿ ಕಾರ್ಯನಿರ್ವಹಿಸಬೇಕಿದ್ದ ಶಿಕ್ಷಕರ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡಹಿರುವ ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವ್ಯಾಪಕವೆನಿಸಿರುವ, ಉದ್ದೇಶಪೂರ್ವಕ ಮತ್ತು ಆಳವಾಗಿ ಬೇರೂರಿರುವ ಭ್ರಷ್ಟಾಚಾರದ ಕುರಿತು ಸಂಶೋಧನಾ ಅಧ್ಯಯನಗಳು ಮತ್ತು ನೀತಿ ನಿಮಯಗಳೆರಡೂ ಹೆಚ್ಚೇನೂ ಹೇಳುತ್ತಿಲ್ಲ. ಈ ಅಧ್ಯಯನವು, ಈ ಸಮಸ್ಯೆಯ ಹರವು ಮತ್ತು ಆಳಗಳೆರಡನ್ನೂ ಒತ್ತಿ ಹೇಳುತ್ತದೆ.

ಈ ಅಧ್ಯಯನದ ಫಲಿತವು, ಬೋಧಕ ಸಿಬ್ಬಂದಿ, ಪಠ್ಯಕ್ರಮದ ಅಗತ್ಯತೆಗಳು ಮತ್ತು ಬೋಧನಾ ಸೌಲಭ್ಯಗಳನ್ನು ಸರಿಯಾಗಿ ಒದಗಿಸದೆ ಇರುವುದು ಹಾಗೂ ನಿಯಂತ್ರಣ ಸಂಸ್ಥೆಗಳ ಎದುರು ಇದನ್ನು ತಪ್ಪಾಗಿ ನಿರೂಪಿಸಲು ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳು ಅಳವಡಿಸಿಕೊಳ್ಳುವ ಭ್ರಷ್ಟ ಕಾರ್ಯತಂತ್ರಗಳನ್ನು ಹೊರಗೆಡಹುತ್ತದೆ. ಅಗತ್ಯ ಪ್ರಮಾಣದಲ್ಲಿ ಬೋಧಕ ಸಿಬ್ಬಂದಿಯನ್ನು ನೇಮಿಸದೆ ಇರುವುದು, ವೇತನ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಕಡಿಮೆ ಸಂಬಳವನ್ನು ಬೋಧಕ ಸಿಬ್ಬಂದಿಗೆ ಪಾವತಿಸುವುದು, ಕೋರ್ಸ್ ವರ್ಕ್ ಅಥವಾ ಶಾಲಾ ಇಂಟರ್ನ್‌ಶಿಪ್ ಗಳಿಗೆ ಹಾಜರಾಗದಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸುವುದು, ಪಠ್ಯಕ್ರಮ ಪ್ರಯೋಗಾಲಯ ಮುಂತಾದ ಅಗತ್ಯ ಬೋಧನಾ ಸೌಲಭ್ಯಗಳನ್ನು ಒದಗಿಸದೆ ಇರುವುದು - ಇವು ಇಂತಹ ಕೆಲವು ಕಾರ್ಯತಂತ್ರಗಳಾಗಿವೆ. ಈ ಕಾರ್ಯತಂತ್ರಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಿದ್ದು, ಲಾಭ ಗಳಿಸುವ ಅಂತಿಮ ಉದ್ದೇಶದಿಂದ ಇವು ಒಂದನ್ನೊಂದು ಜಾರಿಗೊಳಿಸುತ್ತಿವೆ. ಈ ಭ್ರಷ್ಟಾಚಾರ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ ಎಂಬುದನ್ನು ಸಹ ಸಾಬೀತುಪಡಿಸಿದೆ. ಬದಲಾಗಿ, ಬೇರೆ ಬೇರೆ ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ ಇದು ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳ ಸಾರ್ವತ್ರಿಕ ಗುಣಲಕ್ಷಣವಾಗಿದ್ದು, ಶಾಲಾ ಶಿಕ್ಷಣ ವ್ಯವಸ್ಥೆಯ ಒಳಗೆ ಕೆಲಸ ಮಾಡಿರುವ ಹಿರಿಯ ಅಧಿಕಾರಿಗಳು ಮತ್ತು ಈ ಸಂಸ್ಥೆಗಳ ಕುರಿತು ನಡೆದಿರುವ ಮಾಧ್ಯಮ ಸಂವಾದಗಳಲ್ಲಿಯೂ ಇದು ಕಂಡುಬಂದಿದೆ. ಆದರೆ ಇದೆಲ್ಲವೂ ಭಾರತದ ಶಿಕ್ಷಕರ ಶಿಕ್ಷಣದ ಗುಣಮಟ್ಟದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಲಿದೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಅಲ್ಲದೆ, ಇಂತಹ ವ್ಯವಸ್ಥೆಯಲ್ಲಿ ರೂಪಿಸಲಾದ ಶಿಕ್ಷಕರು ನಿರೀಕ್ಷಿತ ಗುಣಮಟ್ಟವನ್ನು ಹೊಂದಿರುತ್ತಾರೆ ಅಥವಾ ಉತ್ತಮ ಗುಣಮಟ್ಟದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ನಿರೀಕ್ಷಿಸಿದರೆ ತಪ್ಪಾದೀತು.

ಇಂತಹ ಸನ್ನಿವೇಶದಲ್ಲಿ, ಆಗಾಗ್ಗೆ ಬದಲಾವಣೆಯ ಸಂಕೇತವನ್ನು ತೋರಿದರೂ, ಅಂಕೆಯಿಲ್ಲದ ಭ್ರಷ್ಟಾಚಾರ ಮತ್ತು ವಾಣಿಜ್ಯೀಕರಣದ ಕಾರಣ ದಾರಿ ತಪ್ಪಿರುವ ಶಿಕ್ಷಕರ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಲು ಹೆಚ್ಚಿನ ಪ್ರಯತ್ನ ನಡೆಯದೆ ಇರುವುದು ಅಚ್ಚರಿಯ ವಿಷಯವಾಗಿದೆ. ಖಾಸಗಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳು ನುಸುಳಿಕೊಂಡಿರುವುದನ್ನು ಮಾಧ್ಯಮಗಳು ಮತ್ತು ಹಿರಿಯ

ಅಧಿಕಾರಿಗಳು ಪ್ರಚುರಪಡಿಸಿದ್ದಾರೆ. ಹೀಗಾಗಿ, ಈ ಅಧ್ಯಯನವು, ನಮ್ಮ ಶೈಕ್ಷಣಿಕ ನೀತಿಯ ಗಮನವನ್ನು ಶಾಲಾ ಶಿಕ್ಷಣ ವ್ಯವಸ್ಥೆಯ ಮೂಲಾಧಾರ ಎನಿಸಿರುವ ಶಿಕ್ಷಕರ ಶಿಕ್ಷಣ ವ್ಯವಸ್ಥೆಯತ್ತ ಕೇಂದ್ರೀಕರಿಸಬೇಕಾದ ಅಗತ್ಯತೆಯನ್ನು ಎತ್ತಿ ತೋರಿಸಿದೆ. ಈ ಕಾರಣಕ್ಕಾಗಿ, ಈ ಕ್ಷೇತ್ರದಲ್ಲಿ ಹೆಚ್ಚಿನ ಸರ್ಕಾರಿ ಹೂಡಿಕೆ ಮಾಡುವುದು ಮತ್ತು ಎಗ್ಗಿಲ್ಲದೆ ಕಾರ್ಯಾಚರಿಸುತ್ತಿರುವ ಹಾಗೂ ಈ ವ್ಯವಸ್ಥೆಯ ತಳಪಾಯವನ್ನೇ ಅಲುಗಾಡುತ್ತಿರುವ ನಿಷ್ಕ್ರಿಯ ಖಾಸಗಿ ಸಂಸ್ಥೆಗಳನ್ನು ತೊಲಗಿಸುವುದಕ್ಕಾಗಿ ನಿಯಂತ್ರಕ ಸಂಸ್ಥೆಗಳ ಮೂಲಸೌಕರ್ಯ ವ್ಯವಸ್ಥೆಯನ್ನು ಬಲಪಡಿಸಬೇಕಾದ ಅಗತ್ಯವಿದೆ.

## ಪರಾಮರ್ಶನೆಗಳು


1. Deswal, A. (2017). Business of Teacher Education in Haryana. Economic and Political Weekly, 52(11), 62-66.
2. MHRD. (2012). Vision of Teacher Education in India: Quality and Regulatory Perspective. Report of the High-powered Commission on Teacher Education Constituted by the Hon'ble Supreme Court of India, Vol. I, II, and III.
3. Ministry of Human Resource Development (MHRD). (2019). Draft National Education Policy 2019. Government of India. Retrieved from: https://mhrd.gov.in/sites/upload_files/mhrd/files/Draft_NEP_2019_EN_Revised.pdf on 25 July 2019.
4. Tierney, W. G., & Sabharwal, N. S. (2017). Academic corruption: Culture and trust in Indian higher education. International Journal of Educational Development, 55, 30-40.


# ಪ್ರಬಂಧ 3: ಶಿಕ್ಷಕರಿಗೆ ಬೆಂಬಲವನ್ನು ನಿರ್ಲಕ್ಷಿಸುವುದು: ನಮ್ಮ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಶಾಪ

ಸಂಶೋಧನಾ ತಂಡ, ಅಜೀಂ ಪ್ರೇಮ್ ಜಿ ಫೌಂಡೇಷನ್

## ಪ್ರಮುಖ ಸಾರಾಂಶ

ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ನಡೆದ ಅಧ್ಯಯನಗಳು, ಶಿಕ್ಷಕರ ಪರಿಣಾಮಕಾರಿತ್ವವು ಯಾವ ರೀತಿಯಲ್ಲಿ ಯಾವುದೇ ಶಾಲಾ ಶಿಕ್ಷಣ ವ್ಯವಸ್ಥೆಯ ಗುಣಮಟ್ಟದ ಪ್ರಮುಖ ಮುನ್ಸೂಚಕ ಎನಿಸುತ್ತದೆ ಎಂಬುದನ್ನು ತೋರಿಸಿಕೊಟ್ಟಿವೆ. ಭಾರತದಲ್ಲಿಯೂ ಶಾಲಾ ಶಿಕ್ಷಣ ವ್ಯವಸ್ಥೆಗೆ ಪ್ರಬಲ ಶಿಕ್ಷಕ ವರ್ಗದ ಅಗತ್ಯವಿದೆ ಎಂದು ತೋರಿಸಿದ ಇತ್ತೀಚಿನ ರಾಷ್ಟ್ರೀಯ ಶಿಕ್ಷಣ ನೀತಿ 2019 ರ ಕಸ್ತೂರಿ ರಂಗನ್ ಸಮಿತಿಯ ಕರಡು ವರದಿಯು, ಶಿಕ್ಷಕರ ಕಾರ್ಯಕ್ಕೆ ಸಂಬಂಧಿಸಿದಂತೆ ಸುಧಾರಣೆ ಕಾಣಬೇಕಾದ ನಿರ್ದಿಷ್ಟ ಕ್ಷೇತ್ರಗಳನ್ನು ಪಟ್ಟಿ ಮಾಡಿದೆ. ಈ ದಿಸೆಯಲ್ಲಿ ಹೆಚ್ಚು ಪ್ರಬಲವಾದ ಮತ್ತು ಸಂಯೋಜಿತ ನೀತಿ ನಿರೂಪಣೆಯ ಪ್ರಯತ್ನ ನಡೆಯಬೇಕು ಎಂದು ಇವರು ಹೇಳಿದ್ದಾರೆ. ಸಂಕ್ಷಿಪ್ತವಾಗಿ, ಈ ಪ್ರಮುಖ ಕ್ಷೇತ್ರಗಳು ಯಾವುವು ಎಂದರೆ: (a) ಶಿಕ್ಷಕರ ನಿಯೋಜನೆಯಲ್ಲಿ ಇರುವ ಗಂಭೀರ ನ್ಯೂನತೆಗಳು ಮತ್ತು ಕಳಪೆ ಮಾನದಂಡದ ವಿಧಾನಗಳನ್ನು ತೊಲಗಿಸುವುದು; (b) ಶಿಕ್ಷಣ ಹೊರತುಪಡಿಸಿ ಬೇರೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳದೆ ಸಂಪೂರ್ಣ ಸಮರ್ಪಣಾ ಭಾವದೊಂದಿಗೆ ಮತ್ತು ಪೂರ್ಣ ಸಾಮರ್ಥ್ಯದೊಂದಿಗೆ ಶಿಕ್ಷಕರು ಕಲಿಸಲು ಸಾಧ್ಯವಾಗುವಂತಹ ವಾತಾವರಣವನ್ನು ಕಲ್ಪಿಸುವುದು; (c) ಶಾಲಾ ಆಧರಿತ ಶಿಕ್ಷಕ ನೆರವು ಮತ್ತು ಮಾರ್ಗದರ್ಶನ ನೀಡುವುದಕ್ಕಾಗಿ ನಿರಂತರ ವೃತ್ತಿಪರ ಅಭಿವೃದ್ಧಿಯನ್ನು ಪುನರುಜ್ಜೀವನಗೊಳಿಸುವುದು ಮತ್ತು ಶೈಕ್ಷಣಿಕ ನೆರವು ಸಂಸ್ಥೆಗಳಿಗೆ ಶಕ್ತಿ ತುಂಬುವುದು, ಮತ್ತು; (d) ಶಾಲಾ ಶಿಕ್ಷಕರ ಬಳಕೆಗಾಗಿ ಉನ್ನತ ಗುಣಮಟ್ಟದ ಪಠ್ಯಪುಸ್ತಕಗಳು ಮತ್ತು ಬೋಧನೆ-ಕಲಿಕೆ ಸಂಪನ್ಮೂಲಗಳ ಲಭ್ಯತೆ ಮತ್ತು ಪೂರೈಕೆಯನ್ನು ಖಾತರಿಪಡಿಸುವುದು.

ಅಜೀಂ ಪ್ರೇಮ್ ಜಿ ಫೌಂಡೇಷನ್ ಕಳೆದ ಎರಡು ದಶಕಗಳ ಕಾಲ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಸಿದ ಕಾರ್ಯವನ್ನು ಆಧರಿಸಿ ಹೇಳುವುದಾದರೆ, ಈ ವಿಚಾರಗಳು ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖ ಕಳಕಳಿಯ ವಿಚಾರವಾಗಿವೆ.

ಈ ಕ್ಷೇತ್ರ ಅಧ್ಯಯನವನ್ನು, ಭಾರತದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಶಿಕ್ಷಕರ ಧ್ವನಿಯ ಮೂಲಕ, ಅವರ ಪ್ರತಿ ನಿತ್ಯದ ಉದ್ಯೋಗದ ಜೀವನದಲ್ಲಿ ಈ ಮೇಲಿನ ಕಳಕಳಿಗಳು ಎಷ್ಟರ ಮಟ್ಟಿಗೆ ನಿಜವೆನಿಸಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಡೆಸಲಾಗಿದೆ. ಒಟ್ಟು 5 ರಾಜ್ಯಗಳ 27 ಜಿಲ್ಲೆಗಳಲ್ಲಿ 322 ಶಿಕ್ಷಕರನ್ನು ಈ ಉದ್ದೇಶಕ್ಕಾಗಿ ಒಳಗೊಳ್ಳಲಾಯಿತು. ಪ್ರತಿ ಜಿಲ್ಲೆಯಲ್ಲಿ, ಸುಲಭಗಮ್ಯತೆ ಇರುವ ಹಾಗೂ ಸುಲಭಗಮ್ಯತೆ ಇಲ್ಲದ ಶಾಲೆಗಳ ನಡುವೆ ಸಮಾನ ಪ್ರಮಾಣಾನುಪಾತ ಇರುವಂತೆ 12 ಶಾಲೆಗಳು; ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಲಾಯಿತು. ಸಂಶೋಧನಾ ತಂಡವು, ಕನಿಷ್ಠ ಐದು ವರ್ಷಗಳ ಕಾಲ ಶಾಲೆಯಲ್ಲಿ ಖಾಯಂ ಶಿಕ್ಷಕರಾಗಿ ದುಡಿದ ಹಾಗೂ ಭೇಟಿಯ ಸಂದರ್ಭದಲ್ಲಿ ಉಪಸ್ಥಿತರಿದ್ದ ಮತ್ತು ಲಭ್ಯರಿದ್ದ, ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕರಿಗೆ ಸಮೀಕ್ಷೆಯ ಪ್ರಶ್ನಾವಳಿಯನ್ನು ಒದಗಿಸಿತು.

ಎಲ್ಲಾ ಐದು ರಾಜ್ಯಗಳ ಶಿಕ್ಷಕರ ಧ್ವನಿಯು, ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕಸ್ತೂರಿ ರಂಗನ್ ಕರಡು ವರದಿಯಲ್ಲಿ ಶಿಕ್ಷಕರ ಕೆಲಸಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಲಾದ ಪ್ರಮುಖ ಕಳವಳಗಳ ಪ್ರಸ್ತುತತೆಯನ್ನು ಪುನರುಚ್ಚರಿಸಿದೆ. ಈ ಅಧ್ಯಯನದ ಪ್ರಮುಖ ಫಲಿತಾಂಶಗಳನ್ನು ಬಾಕ್ಸ್ 1 ಸಂಕ್ಷೇಪಿಸುತ್ತದೆ.

---

ಬಾಕ್ಸ್ 1 ಪ್ರಮುಖ ಫಲಿತಗಳು

**ಸಮಸ್ಯೆ 1: ಶಿಕ್ಷಕರ ನಿಯೋಜನೆಯಲ್ಲಿ ಗಂಭೀರವಾದ ನ್ಯೂನತೆಗಳಿವೆ.**

- ಪ್ರತಿ ವಿಷಯದಲ್ಲಿ (ವಿಜ್ಞಾನ ಮತ್ತು ಗಣಿತಶಾಸ್ತ್ರ, ಸಾಮಾಜಿಕ ವಿಜ್ಞಾನ, ಮತ್ತು ಭಾಷೆ) ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ಮೂರರಲ್ಲಿ ಒಂದು ಶಾಲೆಯು ನಿರ್ದಿಷ್ಟ ವಿದ್ಯಾರ್ಹತೆ ಪಡೆದ ಶಿಕ್ಷಕರನ್ನು ಹೊಂದಿರಲಿಲ್ಲ.
- ಪ್ರತಿ ಐದರಲ್ಲಿ ಎರಡು ಶಾಲೆಗಳಲ್ಲಿ ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಅಥವಾ ವಿದ್ಯಾರ್ಥಿ - ಶಿಕ್ಷಕ ಅನುಪಾತಕ್ಕೆ (ಪಿ.ಟಿ.ಆರ್) ಸಂಬಂಧಿಸಿದ ಆರ್.ಟಿ.ಇ ಆದೇಶದ ಪ್ರಕಾರ ಸಾಕಷ್ಟು ಶಿಕ್ಷಕರ ಲಭ್ಯತೆ ಇರಲಿಲ್ಲ.
- ಐದರಲ್ಲಿ ಮೂರು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು, ಅಧಿಕಾರಿಗಳು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

**ಸಮಸ್ಯೆ 2: ಬೋಧಕೇತರ ಚಟುವಟಿಕೆಗಳು ಶಿಕ್ಷಕರು ಮಕ್ಕಳಿಗೆ ನೀಡಬೇಕಾದ ಸಮಯದ ಬಹುತೇಕ ಪಾಲನ್ನು ಕಸಿದುಕೊಳ್ಳುತ್ತವೆ.**

- ಒಂದು ವರ್ಷದಲ್ಲಿ, ಸರಿಸುಮಾರು ಒಂದು ತಿಂಗಳಿನಷ್ಟು ಸಮಯವನ್ನು (ಸರಾಸರಿ 25 ದಿನಗಳು) ಶಿಕ್ಷಕರು ಬೋಧಕೇತರ ಚಟುವಟಿಕೆಗಳಲ್ಲಿ ಕಳೆಯುತ್ತಾರೆ.
- ಒಂದು ವಾರದಲ್ಲಿ, ಶಿಕ್ಷಕರು ಸರಿಸುಮಾರು ಐದು ಗಂಟೆಗಳನ್ನು ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ಕಳೆಯುತ್ತಾರೆ.

**ಸಮಸ್ಯೆ 3: ಗುಣಮಟ್ಟ, ನಿರಂತರ, ವೃತ್ತಿಪರ ಅಭಿವೃದ್ಧಿ ವಿಚಾರದಲ್ಲಿ ಶಿಕ್ಷಕರು ಸೂಕ್ತ ದಾರಿ ಮತ್ತು ಅವಕಾಶಗಳ ಕೊರತೆಯನ್ನು ಎದುರಿಸುತ್ತಿದ್ದಾರೆ.**

- ಹತ್ತರಲ್ಲಿ ಒಂಬತ್ತು ಶಿಕ್ಷಕರು, ಶೈಕ್ಷಣಿಕ ವರ್ಷದ ಆರಂಭದಲ್ಲಿ ಹಿರಿಯ ಅಧಿಕಾರಿಗಳು ತಮಗೆ ರಚನಾತ್ಮಕ ತರಬೇತಿಯ ಯಾವುದೇ ಕ್ಯಾಲೆಂಡರ್ ಅನ್ನು ನೀಡಿಲ್ಲ ಎಂದು ಹೇಳಿದ್ದಾರೆ.
- ಐದರಲ್ಲಿ ನಾಲ್ಕು ಶಿಕ್ಷಕರ ಪ್ರಕಾರ, ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಅಗತ್ಯತೆಯನ್ನು ಅರ್ಥ ಮಾಡಿಕೊಳ್ಳಲು ಹಿರಿಯ ಅಧಿಕಾರಿಗಳು ಯಾವುದೇ ಮೌಲ್ಯಮಾಪನ ನಡೆಸಿಲ್ಲ.
- ಸುಮಾರು ಮೂರನೇ ಎರಡರಷ್ಟು ಸೇವಾನಿರತ ತರಬೇತಿಯು, ಮೊದಲು ಅಥವಾ ನಂತರ ಪಡೆದ ಇತರ ಸೇವಾನಿರತ ತರಬೇತಿಯ ಜೊತೆ ಯಾವುದೇ ರೀತಿಯ ತಾರ್ಕಿಕ ಸಂಬಂಧವನ್ನು ಹೊಂದಿರದೆ ಇದ್ದುದು ವರದಿಯಾಗಿದೆ. ಐದನೇ ನಾಲ್ಕಕ್ಕಿಂತ ಹೆಚ್ಚಿನ ತರಬೇತಿಗಳಲ್ಲಿ, ಶಿಕ್ಷಕರು ಶಾಲಾ ಮಟ್ಟದ ಹಿರಿಯ ಅಧಿಕಾರಿಗಳಿಂದ ಯಾವುದೇ ಅನುಸರಣೆ (follow-up) ನೆರವನ್ನು ಪಡೆದಿಲ್ಲ.
- ಮೂರನೇ ಎರಡರಷ್ಟು ಶಿಕ್ಷಕರು, ತಮ್ಮ ತರಗತಿಯ ಅಭ್ಯಾಸದ ಜೊತೆ ಸೇವಾನಿರತ ತರಬೇತಿಗಳು ಸಂಬಂಧ ಕಲ್ಪಿಸುವ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ, ಸಂಪನ್ಮೂಲ ವ್ಯಕ್ತಿಗಳ ಜ್ಞಾನ ಮತ್ತು ತರಬೇತಿಯ ಸಂದರ್ಭದಲ್ಲಿ ಬಳಸಿದ ಸಂಪನ್ಮೂಲ ಸಾಮಗ್ರಿಗಳ ಗುಣಮಟ್ಟದ ವಿಚಾರದಲ್ಲಿ ಸಾಧಾರಣ ತೃಪ್ತಿ ಅಥವಾ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

**ಸಮಸ್ಯೆ 4: ಶಿಕ್ಷಕರಿಗೆ ಶಾಲಾ ಆಧರಿತ ನೆರವು ಅಥವಾ ಮಾರ್ಗದರ್ಶನ ಸಮರ್ಪಕವಾಗಿ ದೊರೆಯುತ್ತಿಲ್ಲ.**

- ಪ್ರತಿ ಐದರಲ್ಲಿ ಒಂದು ಶಾಲೆಗೆ ಕಳೆದ ಒಂದೂವರೆ ವರ್ಷಗಳಲ್ಲಿ ವಿಭಾಗೀಯ (cluster) ಮಟ್ಟದ ಯಾವುದೇ ಅಧಿಕಾರಿ ಭೇಟಿ ನೀಡಿಲ್ಲ. ಬ್ಲಾಕ್ (block) ಮಟ್ಟದ ಅಧಿಕಾರಿಯ ಭೇಟಿಯ ವಿಚಾರದಲ್ಲಿಯೂ ಇದೇ ಅಂಕಿ ಅಂಶ ಲಭ್ಯವಾಗಿದೆ. ಐದರಲ್ಲಿ ಮೂರು ಶಾಲೆಗಳಿಗೆ ಜಿಲ್ಲಾ ಮಟ್ಟದ ಯಾವುದೇ ಅಧಿಕಾರಿಯು ಭೇಟಿ ನೀಡಿಲ್ಲ.
- ಈ ಅಧಿಕಾರಿಗಳ 80 ಶೇಕಡಾಕ್ಕಿಂತಲೂ ಹೆಚ್ಚು ಭೇಟಿಗಳು (ವಿಭಾಗೀಯ ಮಟ್ಟ, ಬ್ಲಾಕ್ ಮಟ್ಟ ಅಥವಾ ಜಿಲ್ಲಾ ಮಟ್ಟ) ತಪಾಸಣೆಯ ರೂಪದಲ್ಲಿರುತ್ತದೆಯೇ ಹೊರತು ಅವರಿಂದ ಯಾವುದೇ ಮಾರ್ಗದರ್ಶನ ದೊರೆಯುವುದಿಲ್ಲ.

**ಸಮಸ್ಯೆ 5: ಪಠ್ಯಪುಸ್ತಕಗಳ ಸಕಾಲಿಕ ಪೂರೈಕೆ ಮತ್ತು ಬೋಧನೆ – ಕಲಿಕೆ ಸಾಮಗ್ರಿಗಳ ನೆರವಿನ ವಿಚಾರದಲ್ಲಿ ಶಿಕ್ಷಕರು ಗಂಭೀರ ಸವಾಲುಗಳನ್ನು ಎದುರಿಸುತ್ತಾರೆ.**

- ಸಮೀಕ್ಷೆಗೆ ಒಳಪಡಿಸಿದ ಪ್ರತಿ ಎರಡು ಶಾಲೆಗಳಲ್ಲಿ ಒಂದರಲ್ಲಿ, ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಪಠ್ಯಪುಸ್ತಕಗಳ ಸರಬರಾಜಿನಲ್ಲಿ ಕೊರತೆ ಉಂಟಾಗಿತ್ತು.
- ಐದರಲ್ಲಿ ಮೂವರು ಶಿಕ್ಷಕರಿಗೆ, ಶಾಲೆಗಳಲ್ಲಿ ಬೋಧನೆ-ಕಲಿಕೆ ಸಾಮಗ್ರಿಗಳ (ಟಿ.ಎಲ್.ಎಂ) ವಿಚಾರದಲ್ಲಿ ಯಾವುದೇ ನೆರವು ದೊರೆತಿಲ್ಲ.

---

ಒಟ್ಟಾರೆ, ಈ ಅಧ್ಯಯನವು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕಸ್ತೂರಿ ರಂಗನ್ ಕರಡು ವರದಿಯಲ್ಲಿ ಶಿಕ್ಷಕರ ಕೆಲಸದ ಕುರಿತು ವ್ಯಕ್ತವಾಗಿರುವ ಪ್ರಮುಖ ಕಳವಳಕಾರಿ ವಿಚಾರಗಳು ಮತ್ತು ಶಿಫಾರಸ್ಸುಗಳ ಜೊತೆ ಸರಿದೂಗುತ್ತದೆ. ಶಿಕ್ಷಕರ ಪರಿಣಾಮಕಾರಿತ್ವ ಮತ್ತು ಶಾಲಾ ವ್ಯವಸ್ಥೆಗಾಗಿ ಬಲಿಷ್ಠ ಶಿಕ್ಷಕ ಸಮೂಹವನ್ನು ರೂಪಿಸುವುದಕ್ಕೆ ಒತ್ತು ನೀಡುವ ಮೊದಲು, ಸಾಕಷ್ಟು ಸಂಖ್ಯೆಯ ಶಿಕ್ಷಕರ ನಿಯೋಜನೆ, ಅಡೆತಡೆ ಇಲ್ಲದ ಬೋಧನಾ ಸಮಯ, ಅರ್ಥಪೂರ್ಣ ಮತ್ತು ನಿರಂತರವಾಗಿ ವೃತ್ತಿಪರ ಅಭಿವೃದ್ಧಿಯ ಅವಕಾಶಗಳ ಲಭ್ಯತೆ, ಮಾರ್ಗದರ್ಶನದ ನೆರವು, ಮತ್ತು ಸಕಾಲದಲ್ಲಿ ಪಠ್ಯಕ್ರಮ ಸಾಮಗ್ರಿಗಳ ಪೂರೈಕೆ ಮುಂತಾದ ಮೂಲಭೂತ ಅಗತ್ಯತೆಗಳನ್ನು ಪೂರೈಸಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳು ಸಾರ್ವಜನಿಕ ಶಾಲೆಗಳಲ್ಲಿ ತಮ್ಮ ಮೂಲಭೂತ ಬೋಧನೆ-ಕಲಿಕೆ ಜವಾಬ್ದಾರಿಗಳನ್ನು ಪೂರ್ಣಗೊಳಿಸುವುದಕ್ಕಾಗಿ ಬೇಕಾಗುವ ಅಗತ್ಯ ನೆರವನ್ನು ವ್ಯವಸ್ಥಿತವಾಗಿ ಕಡೆಗಣಿಸಿರುವುದನ್ನು ಈ ಅಧ್ಯಯನವು ಬೆಳಕಿಗೆ ತಂದಿದೆ. ಒಂದು ಹಂತದಲ್ಲಿ, ಈ ಅಧ್ಯಯನದ ಫಲಿತಾಂಶವು, ಶಿಕ್ಷಕರು ವ್ಯಕ್ತಪಡಿಸಿರುವ ಕಳವಳಕ್ಕೆ ಪರಿಹಾರ ಕಂಡುಕೊಳ್ಳಬೇಕಾದರೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮತ್ತು ಈ ಕ್ಷೇತ್ರಕ್ಕೆ ಸಂಬಂಧಿಸಿದ ಇತರ ಪಾಲುದಾರರು ಸೇರಿ ಸಮಗ್ರ ಮತ್ತು ನಿರಂತರ ಪ್ರಯತ್ನಗಳನ್ನು ನಡೆಸಬೇಕಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಇನ್ನೊಂದು ಹಂತದಲ್ಲಿ, ಸಾಂಸ್ಥಿಕ ಸನ್ನಿವೇಶದಲ್ಲಿ ಶಿಕ್ಷಕರು ಮಾಡುವ ಕೆಲಸ ಮತ್ತು ಸಾಂಸ್ಥಿಕ ಸನ್ನಿವೇಶದ ಚೌಕಟ್ಟಿನಲ್ಲಿ ಅವರು ಪ್ರತಿ ದಿನ ಎದುರಿಸುವ ಸವಾಲುಗಳನ್ನು ನಿರ್ಲಕ್ಷಿಸುವ ಶಿಕ್ಷಕ ಕೇಂದ್ರಿತ ಹೊಣೆಗಾರಿಕೆ ವ್ಯವಸ್ಥೆಯ ಸರಳೀಕೃತ ಕಲ್ಪನೆಯನ್ನು ಈ ಫಲಿತಾಂಶಗಳು ಆಕ್ಷೇಪಿಸುತ್ತವೆ.

## 1. ಪೀಠಿಕೆ

ಇತ್ತೀಚಿನ ದಿನಗಳಲ್ಲಿ, ಭಾರತದಲ್ಲಿ ಶಾಲಾ ಶಿಕ್ಷಣದ ಸುಧಾರಣೆಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಶಿಕ್ಷಕರ ಕೆಲಸವು ಸಾಕಷ್ಟು ಗಮನ ಸೆಳೆದಿದೆ. ಆದರೆ, ಈ ಹೆಚ್ಚಿನ ನೀತಿ ನಿರೂಪಣೆಯ ಪರಿಕಲ್ಪನೆಗಳು ಸುಧಾರಣೆಗಳನ್ನು ಶಿಕ್ಷಕರ ಹೊಣೆಗಾರಿಕೆಯ ಸಂಕುಚಿತ ದೃಷ್ಟಿಕೋನದಲ್ಲಿ ನೋಡಿವೆ ಹಾಗೂ ಗುತ್ತಿಗೆಯಾಧರಿತ ಶಿಕ್ಷಕರ ನೇಮಕ, ಶಿಕ್ಷಕರಿಗೆ ಸಾಧನೆ ಆಧರಿತ ಪ್ರೋತ್ಸಾಹಕಗಳನ್ನು ನೀಡುವುದು, ಮತ್ತು ಶಿಕ್ಷಕರ ಕಾರ್ಯ ವಿಂಗಡಣೆ(ಪ್ಯಾರಾ ಸ್ಕಿಲ್ಲಿಂಗ್) ಮುಂತಾದ ಪರಿಹಾರಗಳನ್ನು ಸೂಚಿಸಿವೆ. ಈ ಸುಧಾರಣೆಗಳನ್ನು ಮುಂದಿಡುವವರ ದೃಷ್ಟಿಯಲ್ಲಿ, ಶಿಕ್ಷಕರನ್ನು, ಇತರ ಘಟಕಗಳಂತೆ, ಶಾಲಾ ವ್ಯವಸ್ಥೆಯಲ್ಲಿ ದಕ್ಷತೆಯಿಂದ ನಿರ್ವಹಿಸಬಹುದಾದ ಒಂದು ಸಾಮಾನ್ಯ ಘಟಕವಾಗಿ ಮಾತ್ರವೇ ಪರಿಗಣಿಸಲಾಗುತ್ತದೆ. ನೀತಿ ನಿರೂಪಣೆಯ ಕುರಿತ ಚಿಂತನೆಯ ಈ ಎಳೆಯು, ಇತರ ವಿಷಯಗಳ ಜೊತೆಗೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಶಿಕ್ಷಕರು ಕಾರ್ಯನಿರ್ವಹಿಸುವ ಸಾಂಸ್ಥಿಕ ಸನ್ನಿವೇಶವನ್ನು ನಿರ್ಲಕ್ಷಿಸುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕಸ್ತೂರಿ ರಂಗನ್ ಸಮಿತಿಯ ಕರಡು ವರದಿಯು, ಶಿಕ್ಷಕರ ಕಾರ್ಯನಿರ್ವಹಣೆಯ ಸುತ್ತ ವ್ಯಾಪಿಸಿರುವ ಈ ಸಾಂಸ್ಥಿಕ ಸವಾಲುಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದೆ. ಇದು, ಪ್ರತಿ ಶಾಲೆಯಲ್ಲಿ ಸರಿಯಾದ ರೀತಿಯಲ್ಲಿ ಶಿಕ್ಷಕರ ನಿಯೋಜನೆ ಮತ್ತು ಶಿಕ್ಷಕರಿಗೆ ಸೂಕ್ತ ಪರಿಸರವನ್ನು ಕಲ್ಪಿಸಿ ಕೊಡುವುದು; ಬೋಧಕೇತರ ಚಟುವಟಿಕೆಗಳ ಜವಾಬ್ದಾರಿಯನ್ನು ನೀಡಿ ಅಥವಾ ತಮ್ಮ ಪರಿಣತಿಯ ವ್ಯಾಪ್ತಿಯೊಳಗೆ ಬರದ ವಿಷಯಗಳನ್ನು ಕಲಿಸಲು ಹೇಳಿ ಶಿಕ್ಷಕರ ಮೇಲೆ ಅಧಿಕ ಹೊರೆ ಹಾಕದೆ ಇರುವುದು; ಬೋಧನಾ

ವಿಧಾನ ಮತ್ತು ವಿಷಯ ವಸ್ತುವಿನಲ್ಲಿ ಎರಡರಲ್ಲೂ ಉಂಟಾಗುವ ಇತ್ತೀಚಿನ ಬೆಳವಣಿಗೆಗಳು ಮತ್ತು ಪರಿಕಲ್ಪನೆಯನ್ನು ಕಲಿಯಲು ಅವಕಾಶ ನೀಡುವ ಜೊತೆಗೆ ನಿರಂತರ ವೃತ್ತಿಪರ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳು; ಶಾಲೆಯಾಧರಿತ ಶಿಕ್ಷಕ ಬೆಂಬಲ ಮತ್ತು ಮಾರ್ಗದರ್ಶನ; ಶಿಕ್ಷಕರಿಗೆ ಪಠ್ಯಪುಸ್ತಕಗಳು ಮತ್ತು ಬೋಧನೆ-ಕಲಿಕೆ ಸಂಪನ್ಮೂಲಗಳ ಒದಗಣೆ ಹಾಗೂ ಸಕಾಲಿಕ ಪೂರೈಕೆ ಮುಂತಾದುವುದನ್ನು ಖಾತರಿಪಡಿಸಲು ಕರೆ ನೀಡಿದೆ.

ಅಜೀಂ ಪ್ರೇಮ್ ಜಿ ಫೌಂಡೇಷನ್ನು ಸುಮಾರು ಎರಡು ದಶಕಗಳಿಂದ ಶಾಲಾ ಶಿಕ್ಷಣ ವ್ಯವಸ್ಥೆಯೊಂದಿಗೆ ಕೆಲಸಮಾಡುತ್ತಿರುವುದಿಂದ, ಈ ಸಾಂಸ್ಥಿಕ ಸವಾಲುಗಳು ಶಿಕ್ಷಕರ ಕೆಲಸದ ಮೇಲೆ ಮತ್ತು ಅಂತಿಮವಾಗಿ ಶಾಲಾ ಶಿಕ್ಷಣದ ಗುಣಮಟ್ಟದ ಮೇಲೆ ಗಂಭೀರವಾದ ಪರಿಣಾಮಗಳನ್ನು ಬಿರುತ್ತವೆನ್ನುವುದನ್ನು ಕಂಡುಕೊಂಡಿದೆ.

ಈ ಕ್ಷೇತ್ರ ಅಧ್ಯಯನವನ್ನು, ಭಾರತದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಶಿಕ್ಷಕರ ಧ್ವನಿಯ ಮೂಲಕ, ಅವರ ಪ್ರತಿ ನಿತ್ಯದ ಉದ್ಯೋಗದ ಜೀವನದಲ್ಲಿ ಶಿಕ್ಷಕರ ಕೆಲಸ ಕಾರ್ಯದಲ್ಲಿರುವ ಪ್ರಮುಖ ಸಾಂಸ್ಥಿಕ ಸಮಸ್ಯೆಗಳು ಎಷ್ಟರ ಮಟ್ಟಿಗೆ ಸವಾಲನ್ನು ಒಡ್ಡುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಡೆಸಲಾಗಿದೆ. ಈ ಅಧ್ಯಯನದಲ್ಲಿ, ಒಟ್ಟು 5 ರಾಜ್ಯಗಳ 27 ಜಿಲ್ಲೆಗಳಲ್ಲಿ 322 ಶಿಕ್ಷಕರನ್ನು ಒಳಗೊಳ್ಳಲಾಯಿತು. ಪ್ರತಿ ಜಿಲ್ಲೆಯಲ್ಲಿ, ಸಮಾನ ಪ್ರಮಾಣಾನುಪಾತದಲ್ಲಿ, ಸುಲಭಗಮ್ಯತೆ ಇರುವ ಹಾಗೂ ಸುಲಭಗಮ್ಯತೆ ಇಲ್ಲದ ಶಾಲೆಗಳು ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಹೀಗೆ ಒಟ್ಟು 12 ಶಾಲೆಗಳಿಗೆ ಭೇಟಿ ನೀಡಲಾಯಿತು. ಸಂಶೋಧನಾ ತಂಡವು, ಕನಿಷ್ಠ ಐದು ವರ್ಷಗಳ ಕಾಲ ಶಾಲೆಯಲ್ಲಿ ಖಾಯಂ ಶಿಕ್ಷಕರಾಗಿ ದುಡಿದ ಹಾಗೂ ಭೇಟಿಯ ಸಂದರ್ಭದಲ್ಲಿ ಉಪಸ್ಥಿತರಿದ್ದ ಮತ್ತು ಸಂದರ್ಶನಕ್ಕೆ ಲಭ್ಯರಿದ್ದ, ಪ್ರತಿ ಶಾಲೆಯಲ್ಲಿ ಒಬ್ಬ ಶಿಕ್ಷಕರಿಗೆ ಸಮೀಕ್ಷೆಯ ಪ್ರಶ್ನಾವಳಿಯನ್ನು ಒದಗಿಸಿತು.

ಆರ್.ಟಿ.ಇ ಜಾರಿಗೆ ಬಂದ ಸುಮಾರು ಒಂದು ದಶಕದ ನಂತರವೂ, ಶಿಕ್ಷಕರ ನಿಯೋಜನೆಯಲ್ಲಿ ಗಣನೀಯ ಪ್ರಮಾಣದ ನ್ಯೂನತೆಗಳು ಇರುವುದನ್ನು ಅಧ್ಯಯನವು ತೋರಿಸಿಕೊಟ್ಟಿದೆ. ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಸೇರಿದಂತೆ ಸಮೀಕ್ಷೆಗೆ ಒಳಪಡಿಸಿದ ಎಲ್ಲಾ ಶಾಲೆಗಳಲ್ಲಿ ಪ್ರತಿ ಐದು ಶಾಲೆಗಳಲ್ಲಿ ಎರಡರಲ್ಲಿ, ಮಂಜೂರಾದ ಹುದ್ದೆಗಳ ಪ್ರಕಾರ ಅಥವಾ ಆರ್.ಟಿ.ಇ ಆದೇಶಿಸಿರುವ ಪಿ.ಟಿ.ಆರ್. ನಂತೆ ಬೇಕಾಗುವಷ್ಟು ಪ್ರಮಾಣದಲ್ಲಿ ಶಿಕ್ಷಕರು ಲಭ್ಯವಿಲ್ಲ. ಅಲ್ಲದೆ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರ್.ಟಿ.ಇ ಆದೇಶವನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ. ಪ್ರತಿ ಮೂರು ಶಾಲೆಗಳಲ್ಲಿ ಒಂದರಲ್ಲಿ ವಿಜ್ಞಾನ ಮತ್ತು ಗಣಿತ, ಸಾಮಾಜಿಕ ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ವಿಶೇಷ ಅರ್ಹತೆ ಪಡೆದ ಶಿಕ್ಷಕರು ಇರಲಿಲ್ಲ. ಪ್ರತಿ ಐದು ಶಾಲೆಗಳಲ್ಲಿ ಮೂರರಲ್ಲಿ ಶಿಕ್ಷಕರ ಕೊರತೆ ಇದ್ದು, ಇಂತಹ ಕೊರತೆಗೆ ಪರಿಹಾರ ಕಂಡುಕೊಳ್ಳಲು ವಿನಂತಿಸಿದ್ದರೂ, ಈ ವಿಚಾರದಲ್ಲಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಶಿಕ್ಷಕರು ಹೇಳಿದ್ದಾರೆ.

ಈ ಸಮೀಕ್ಷೆಯ ದತ್ತಾಂಶವನ್ನು ವಿಶ್ಲೇಷಿಸಿದಾಗ, ಬೋಧಕೇತರ ಚಟುವಟಿಕೆಗಳು, ಶಿಕ್ಷಕರ ಒಟ್ಟು ಕೆಲಸದ ಸಮಯದ ಗಮನಾರ್ಹ ಭಾಗವೆನಿಸುವ ಅವರ ತರಗತಿಯೊಳಗಿನ ಮೂಲ ಬೋಧನೆ-ಕಲಿಕೆಯ ತೊಡಗಿಸಿಕೊಳ್ಳುವಿಕೆಯಿಂದ ದೂರವಿಡುವುದು ಕಂಡುಬಂದಿದೆ. ಸರಾಸರಿಯಾಗಿ, ಅವರ ಒಟ್ಟು ಕೆಲಸದ ದಿನಗಳಲ್ಲಿ ಸುಮಾರು ಒಂದು ತಿಂಗಳುಗಳ ಕಾಲವು ಕಲಿಕೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ಕಳೆದು ಹೋಗುತ್ತದೆ ಎಂದು ಶಿಕ್ಷಕರು ಹೇಳಿದ್ದಾರೆ. ವಿವಿಧ ಬೋಧಕೇತರ ಚಟುವಟಿಕೆಗಳ ಪೈಕಿ, ಗರಿಷ್ಠ ಸಮಯವು ಚುನಾವಣಾ ಕರ್ತವ್ಯದ ಮೇಲೆ ಕಳೆದು ಹೋದರೆ ಉಳಿದಂತೆ ಆಡಳಿತಾತ್ಮಕ ಸಭೆಗಳು ಮತ್ತು ಶೈಕ್ಷಣಿಕೇತರ ತರಬೇತಿಗಳಲ್ಲಿ ಸಮಯವು ಕಳೆದುಹೋಗುತ್ತದೆ. ನಿರಂತರ ಒಂದು ವಾರದ ಕೆಲಸದಲ್ಲಿ, ಶಿಕ್ಷಕರು ಪ್ರತಿ ವಾರವೂ ಸರಾಸರಿ ಸುಮಾರು ಐದು ಗಂಟೆಗಳನ್ನು ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ಕಳೆಯುವುದಾಗಿ ತಿಳಿಸಿದ್ದಾರೆ.

ಗುಣಮಟ್ಟ ಮತ್ತು ನಿರಂತರ ವೃತ್ತಿಪರ ಅಭಿವೃದ್ಧಿಯ ವಿಚಾರ ಬಂದಾಗ, ಇವುಗಳ ಕುರಿತ ಯೋಜನೆ ಮತ್ತು ಅವಕಾಶಗಳ ಕೊರತೆ ಇರುವುದು ಈ ಅಧ್ಯಯನದಲ್ಲಿ ಕಂಡುಬಂದಿದೆ. ಸಂಬಂಧಪಟ್ಟ ಶೈಕ್ಷಣಿಕ ನೆರವು ಸಂಸ್ಥೆಗಳಿಂದ ಶಿಕ್ಷಕರಿಗೆ ಬೇಕಾಗುವ ವೃತ್ತಿಪರ ಅಭಿವೃದ್ಧಿ ಅಗತ್ಯತೆಗಳ ಕುರಿತು ಯಾವುದೇ ಯೋಜಿತ ಮೌಲ್ಯಾಂಕನ ನಡೆಯುವುದಿಲ್ಲ ಹಾಗೂ ಲಭ್ಯವಿರುವ ಅವಕಾಶಗಳ ಕುರಿತು ಪೂರ್ವಯೋಜಿತವಾಗಿ ಮಾಹಿತಿ ನೀಡುವುದಕ್ಕಾಗಿ ರಚನಾತ್ಮಕ ತರಬೇತಿಯ ಕ್ಯಾಲೆಂಡರ್ ಅನ್ನು ಅವರ ಜೊತೆ ಹಂಚಿಕೊಳ್ಳುವುದಿಲ್ಲ

ಎಂದು ಬಹುಪಾಲು ಶಿಕ್ಷಕರು ಹೇಳಿದ್ದಾರೆ. ಸೇವಾನಿರತ ತರಬೇತಿ ನಡೆಸಿರುವ ಕುರಿತು ಶಿಕ್ಷಕರಲ್ಲಿ ಪ್ರತಿಕ್ರಿಯೆಯನ್ನು ಕೇಳಿದಾಗ, ಇಂತಹ ತರಬೇತಿಗಳು ಮತ್ತು ಮೊದಲು ಅಥವಾ ನಂತರ ನಡೆಸಿದ ತರಬೇತಿಗಳ ನಡುವೆ ಯಾವುದೇ ಸಂಬಂಧ ಇಲ್ಲದೆ ಇರುವುದನ್ನು ಬಹುಪಾಲು ಶಿಕ್ಷಕರು ಹೇಳಿದ್ದಾರೆ. ಈ ತರಬೇತಿಗಳ ಉಪಯುಕ್ತತೆಯ ಕುರಿತು ಅವರ ಗ್ರಹಿಕೆಯನ್ನು ಕೇಳಿದಾಗ, ಅವರ ತರಗತಿ ಕೋಣೆಯ ಅಭ್ಯಾಸ, ಸಂಪನ್ಮೂಲ ವ್ಯಕ್ತಿಗಳ ಜ್ಞಾನ, ಮತ್ತು ತರಬೇತಿಯ ವೇಳೆ ಬಳಸಿದ ಸಂಪನ್ಮೂಲ ಸಾಮಗ್ರಿಗಳ ಗುಣಮಟ್ಟದ ಕುರಿತು ಸಾಧಾರಣ ತೃಪ್ತಿ ದೊರೆತಿದೆ ಅಥವಾ ಅತೃಪ್ತಿಕರವಾಗಿತ್ತು ಎಂದು ಬಹುಪಾಲು ಶಿಕ್ಷಕರು ಹೇಳಿದ್ದಾರೆ.

ಇದೇ ರೀತಿಯಲ್ಲಿ, ಶಾಲಾ ಮಟ್ಟದಲ್ಲಿ ಶಿಕ್ಷಕರಿಗೆ ನೀಡಬೇಕಾದ ನೆರವು ಮತ್ತು ಮಾರ್ಗದರ್ಶನದಲ್ಲಿಯೂ ಆಶಯದ ಕೊರತೆ (intent) ಎದ್ದು ಕಾಣುತ್ತಿತ್ತು. ಕಳೆದ ಒಂದೂವರೆ ವರ್ಷಗಳಲ್ಲಿ ಹೆಚ್ಚಿನ ಪ್ರಮಾಣದ ಶಾಲೆಗಳಿಗೆ ವಿಭಾಗೀಯ, ಕ್ಷೇತ್ರ ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿಯೇ ಇಲ್ಲ. ಅಲ್ಲದೆ, ಭೇಟಿ ನೀಡಿದ ಸಂದರ್ಭದಲ್ಲಿಯೂ, ಎಲ್ಲಾ ಹಂತದ ಅಧಿಕಾರಿಗಳು ಮಾಡುವ ಹೆಚ್ಚಿನ ಈ ಭೇಟಿಗಳು, ಶಿಕ್ಷಕರನ್ನು ಸಶಕ್ತಗೊಳಿಸುವ ಮತ್ತು ಪ್ರೇರೇಪಿಸುವ ಮಾರ್ಗದರ್ಶಕ ವಿಧಾನಕ್ಕಿಂತಲೂ, ಮೇಲ್ವಿಚಾರಣೆ ಮತ್ತು ತಪಾಸಣಾ ವಿಧಾನಕ್ಕೆ ಸೀಮಿತವಾಗಿರುತ್ತಿದ್ದವು. ಈ ಅಧ್ಯಯನದ ವಿಷಯ ವಸ್ತು ಅಲ್ಲದಿದ್ದರೂ, ಅನೇಕ ಅಧ್ಯಯನಗಳು ಮತ್ತು ಇತ್ತೀಚಿನ ನೀತಿನಿಯಮಗಳ ದಾಖಲೆಗಳು ಅಸಮರ್ಪಕ ಸಾಮರ್ಥ್ಯದ ಕುರಿತು ಪ್ರತಿಕ್ರಿಯೆ ನೀಡಿವೆ ಹಾಗೂ ವ್ಯವಸ್ಥೆಯಲ್ಲಿರುವ ಶೈಕ್ಷಣಿಕ ಬೆಂಬಲ ಸಂರಚನೆಗಳು ಕಳಚಿ ಬೀಳುತ್ತಿರುವ ಕುರಿತು ಮಾತನಾಡಿವೆ. ಅಲ್ಲದೆ ಈ ಸಂರಚನೆಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯತೆಯನ್ನು ಒತ್ತಿ ಹೇಳಿವೆ. ಅಂತಿಮವಾಗಿ, ಪಠ್ಯಪುಸ್ತಕದ ಸರಬರಾಜು ಮತ್ತು ತಮ್ಮ ಶಾಲೆಗಳಿಗೆ ಶಿಕ್ಷಕರಿಗೆ ಬೋಧನೆ-ಕಲಿಕೆ ಸಾಮಗ್ರಿಗಳ ಮೂಲಕ ಶಿಕ್ಷಕರಿಗೆ ನೆರವು ನೀಡುವ ವಿಚಾರದಲ್ಲಿ, ಪಠ್ಯಪುಸ್ತಕದ ಸರಬರಾಜಿನಲ್ಲಿ ಕೊರತೆ ಮತ್ತು ವಿಳಂಬ ಮತ್ತು ಬೋಧನೆ-ಕಲಿಕೆ ಸಾಮಗ್ರಿಯಲ್ಲಿ ಸಾಕಷ್ಟು ಬೆಂಬಲ ದೊರೆಯದೆ ಇರುವುದನ್ನು ನಮ್ಮ ವಿಶ್ಲೇಷಣೆಯು ತೋರಿಸಿಕೊಟ್ಟಿದೆ.

ಈ ಫಲಿತಗಳು, ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕಸ್ತೂರಿ ರಂಗನ್ ಸಮಿತಿಯಲ್ಲಿ ಶಿಕ್ಷಕರ ಕೆಲಸದ ಕುರಿತು ವ್ಯಕ್ತಪಡಿಸಲಾದ ಕಾಳಜಿಯನ್ನು ಪ್ರತಿಧ್ವನಿಸುತ್ತವೆ. ಈ ಕಾಳಜಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಈ ನೀತಿ ದಾಖಲೆಯಲ್ಲೇ ಸ್ಪಷ್ಟವಾಗಿ ಶಿಫಾರಸ್ಸುಗಳನ್ನು ನೀಡಲಾಗಿದೆ ಹಾಗೂ ಒಟ್ಟಾರೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆಯಾಗಬೇಕು ಎನ್ನುವುದನ್ನು ಹಾಗೂ ಈ ವ್ಯವಸ್ಥೆಯ ವಿವಿಧ ಘಟಕಗಳ ಸಾಂಸ್ಥಿಕ ಸಾಮರ್ಥ್ಯ ರೂಪಿಸುವ ಕೆಲಸವೂ ನಡೆಯಬೇಕು ಎನ್ನುವುದನ್ನು ಒತ್ತಿ ಹೇಳಲಾಗಿದೆ. ಇದರ ಜೊತೆಯಲ್ಲಿ, ಈ ಅಧ್ಯಯನವು, ಶಿಕ್ಷಕರು ತಮ್ಮ ದಿನನಿತ್ಯದ ಕೆಲಸದಲ್ಲಿ ಎದುರಿಸುತ್ತಿರುವ ವ್ಯವಸ್ಥೆಯ ಮತ್ತು ಸಾಂಸ್ಥಿಕ ಸವಾಲುಗಳನ್ನು ನಿರ್ಲಕ್ಷಿಸುವ, ಶಿಕ್ಷಕರ ಕೆಲಸದ ಹೊಣೆಗಾರಿಕೆಗೆ ಮಾತ್ರವೇ ಒತ್ತು ನೀಡುವ ಮೌಲ್ಯಮಾಪನದ ದೋಷವನ್ನು ಒತ್ತಿ ಹೇಳುತ್ತದೆ.

## 1. ಸಂಶೋಧನಾ ವಿಧಾನ

ಈ ಅಧ್ಯಯನವನ್ನು ಐದು (ಛತ್ತೀಸ್ ಗಢ, ಕರ್ನಾಟಕ, ಮಧ್ಯಪ್ರದೇಶ, ರಾಜಾಸ್ತಾನ, ಮತ್ತು ಉತ್ತರಾಖಂಡ) ರಾಜ್ಯಗಳ 27 ಜಿಲ್ಲೆಗಳಲ್ಲಿ ನಡೆಸಲಾಯಿತು. ಎಲ್ಲಿ ಸಾಧ್ಯವೋ ಅಲ್ಲಿ, ಪ್ರಾದೇಶಿಕತೆ, ದುರ್ಬಲ ವರ್ಗಗಳು ಮತ್ತು ಶಾಲಾ ಶಿಕ್ಷಣ ಸೌಲಭ್ಯವನ್ನು ಒದಗಿಸುವ ವಿಚಾರದಲ್ಲಿ ಇರುವ ಸವಾಲುಗಳು ಮುಂತಾದ ವಿಷಯಗಳಲ್ಲಿ ರಾಜ್ಯದೊಳಗಿನ ವಿವಿಧತೆಗಳನ್ನು ವ್ಯಾಪಕವಾಗಿ ಒಳಗೊಳ್ಳುವಂತೆ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿ ಜಿಲ್ಲೆಯಲ್ಲಿಯೂ, ಸುಲಭಗಮ್ಯತೆಯ ಹಾಗೂ ಸುಲಭಗಮ್ಯತೆ ಇಲ್ಲದ ಶಾಲೆಗಳು, ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು - ಹೀಗೆ ಸಮಾನ ಪ್ರಮಾಣಾನುಪಾತದಲ್ಲಿ ಸುಮಾರು 12 ಶಾಲೆಗಳಿಗೆ ಭೇಟಿ ನೀಡಲಾಗಿದೆ. ಈ ಸಂಶೋಧನಾ ತಂಡವು, ಪ್ರತಿ ಶಾಲೆಯಲ್ಲಿ, ಕನಿಷ್ಠ ಕಳೆದ ಐದು ವರ್ಷಗಳಿಂದ ಶಾಲೆಯಲ್ಲಿ ಖಾಯಂ ಶಿಕ್ಷಕರಾಗಿ ಕೆಲಸ ಮಾಡುತ್ತಿರುವ ಹಾಗೂ ಭೇಟಿಯ ಸಂದರ್ಭದಲ್ಲಿ ಉಪಸ್ಥಿತರಿದ್ದ ಹಾಗೂ ಲಭ್ಯರಿದ್ದ ಒಬ್ಬ ಶಿಕ್ಷಕರಿಂದ ಸಮೀಕ್ಷೆಯ ಪ್ರಶ್ನಾವಳಿಗೆ ಉತ್ತರವನ್ನು ಬಯಸಿತು. ಒಟ್ಟಾರೆಯಾಗಿ 322

ಶಿಕ್ಷಕರನ್ನು ಒಳಗೊಳ್ಳಲಾಗಿದೆ (ಚಿತ್ರ 1 ನೋಡಿ). ಈ ಸಮೀಕ್ಷೆಗಾಗಿ 2019ರ ಜುಲೈಯಿಂದ ಸೆಪ್ಟೆಂಬರ್ ತನಕ ಕ್ಷೇತ್ರ ಕಾರ್ಯವನ್ನು ಮಾಡಲಾಗಿದೆ.

ಕೋಷ್ಠಕ 1. ಸಮೀಕ್ಷೆಗೊಳಪಡಿಸಿದ ರಾಜ್ಯವಾರು ಶಿಕ್ಷಕರು

| ರಾಜ್ಯಗಳು | ಜಿಲ್ಲೆಗಳ ಸಂಖ್ಯೆ | ಶಿಕ್ಷಕರ ಸಂಖ್ಯೆ |
|---|---|---|
| ಛತ್ತೀಸ್ ಗಢ | 6 | 72 |
| ಕರ್ನಾಟಕ | 6 | 72 |
| ಮಧ್ಯಪ್ರದೇಶ | 3 | 36 |
| ರಾಜಾಸ್ತಾನ | 6 | 72 |
| ಉತ್ತರಾಖಂಡ | 6 | 70 |
| ಒಟ್ಟು | 27 | 322 |

ಈ ಸಮೀಕ್ಷೆಯ ಪ್ರಶ್ನಾವಳಿಯನ್ನು, ಶಾಲೆಯಲ್ಲಿ ತಮ್ಮ ಬೋಧನೆ-ಕಲಿಕೆಯ ಮೂಲ ಕೆಲಸವನ್ನು ಸಮರ್ಪಕವಾಗಿ ಮಾಡಲು ಶಿಕ್ಷಕರಿಗೆ ಅಗತ್ಯವಿರುವ ಹಾಗೂ ಅವರು ಬಯಸುವ ವಿವಿಧ ರೀತಿಯ ನೆರವನ್ನು ವ್ಯಾಪಕವಾಗಿ ದಾಖಲಿಸಲು ಸಾಧ್ಯವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಅವೆಂದರೆ: ಸಾಕಷ್ಟು ಸಂಖ್ಯೆಯ ಶಿಕ್ಷಕರ ಲಭ್ಯತೆ; ಕೆಲಸದ ಗಮನವು ಕಲಿಕೆಯ ಚಟುವಟಿಕೆಗೆ ಮಾತ್ರವೇ ಸೀಮಿತವಾಗುವಂತೆ ಖಚಿತಪಡಿಸುವುದು; ನಿರಂತರ ವೃತ್ತಿಪರ ಬೆಳವಣಿಗೆಗೆ ನೆರವು ಒದಗಿಸುವುದು; ಮತ್ತು ಪಠ್ಯ ಸಾಮಗ್ರಿಗಳನ್ನು ಸಕಾಲದಲ್ಲಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವುದು.


## 2. ಫಲಿತಗಳು

### 3.1 ಶಿಕ್ಷಕರ ಕೊರತೆ

ಆರ್.ಟಿ.ಇ ಮಾನದಂಡಕ್ಕೆ ಅನುಗುಣವಾಗಿ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರ ನಿಯೋಜನೆಯಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು, ಸಾರ್ವಜನಿಕ ಶಾಲಾ ಶಿಕ್ಷಕರಲ್ಲಿ ತಮ್ಮ ಶಾಲೆಯಲ್ಲಿರುವ ಶಿಕ್ಷಕರ ಸಂಖ್ಯೆಯ ಕುರಿತು ಕೇಳಿದೆವು. ಆರ್.ಟಿ.ಇ ಆದೇಶದ ಪ್ರಕಾರ, ಮಾಧ್ಯಮಿಕ ಶಾಲೆಯಲ್ಲಿ (6ರಿಂದ 8ನೇ ತರಗತಿಗಳು) ವಿಜ್ಞಾನ ಮತ್ತು ಗಣಿತಶಾಸ್ತ್ರ, ಸಾಮಾಜಿಕ ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಪ್ರತಿ ವಿಷಯಕ್ಕೂ ಒಬ್ಬ ಶಿಕ್ಷಕರು ಇರಬೇಕು. ಶಿಕ್ಷಕರು ನೀಡಿದ ಪ್ರತಿಕ್ರಿಯೆಯ ಪ್ರಕಾರ, ಮೂರನೇ ಒಂದರಷ್ಟು ಶಾಲೆಗಳಲ್ಲಿ ಮುಖ್ಯವಾಗಿ ವಿಜ್ಞಾನ ಮತ್ತು ಗಣಿತಶಾಸ್ತ್ರದ ವಿಷಯಗಳಿಗೆ ಶಿಕ್ಷಕರಿಲ್ಲ. ಇದೇ ರೀತಿ, ಸರಿಸುಮಾರು ಮೂರನೇ ಒಂದಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ಸಮಾಜ ವಿಜ್ಞಾನಕ್ಕೆ ಹಾಗೂ ಮೂರನೇ ಒಂದರಷ್ಟು ಶಾಲೆಗಳಲ್ಲಿ ಭಾಷಾ ವಿಷಯಗಳಿಗೆ ಶಿಕ್ಷಕರೇ ಇಲ್ಲ (ಚಿತ್ರ 1 ನೋಡಿ).

ಚಿತ್ರ 1. ನಿರ್ದಿಷ್ಟ ವಿಷಯಗಳಲ್ಲಿ ಶಿಕ್ಷಕರ ಅಲಭ್ಯತೆ ಇರುವ ಹಿರಿಯ ಪ್ರಾಥಮಿಕ ಶಾಲೆಗಳು

*Figure 1. Upper primary schools with no teachers for specific subject areas*




ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ


ಸಾಕಾಗುವಷ್ಟಿದೆ

ಸಾಕಾಗುವಷ್ಟಿಲ್ಲ

32% ದಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಮತ್ತು ಗಣಿತಶಾಸ್ತ್ರಕ್ಕೆ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರಿಲ್ಲ
36%ದಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಮಾಜ ವಿಜ್ಞಾನಕ್ಕೆ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರಿಲ್ಲ
33% ದಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ವಿಷಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರಿಲ್ಲ

ಮಂಜೂರಾದ ಶಿಕ್ಷಕರ ಹುದ್ದೆಗಳು ಅಥವಾ ಆರ್.ಟಿ.ಐ ಸೂಚಿಸಿರುವ ಪಿ.ಟಿ.ಆರ್ ಪ್ರಕಾರ ತಮ್ಮ ಶಾಲೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಇದ್ದಾರೆಯೇ ಎಂದು ಕೇಳಿದಾಗ, ಪ್ರತಿ ಐವರು ಶಿಕ್ಷಕರಲ್ಲಿ ಇಬ್ಬರು, ತಮ್ಮ ಶಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಇಲ್ಲ ಎಂದು ಹೇಳಿದ್ದಾರೆ (ಚಿತ್ರ 3 ನೋಡಿ).

*Figure 2. Schools without adequate number of teachers as per sanctioned positions or RTE*




ಚಿತ್ರ 2. ಮಂಜೂರಾದ ಆರ್.ಟಿ.ಇ ಹುದ್ದೆಗಳು ಅಥವಾ ಆರ್.ಟಿ.ಇ ಪ್ರಕಾರ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಇಲ್ಲದ ಶಾಲೆಗಳು

ಶಾಲೆಗಳ ಸಂಖ್ಯೆ

ಇಲ್ಲ

ಹೌದು

ಒಟ್ಟು: 322

ಕೋಷ್ಟಕ 3. ಮಂಜೂರಾದ ಆರ್.ಟಿ.ಇ ಹುದ್ದೆಗಳು ಅಥವಾ ಆರ್.ಟಿ.ಇ ಪ್ರಕಾರ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಇಲ್ಲದ ಶಾಲೆಗಳು

| | ಹೌದು | ಇಲ್ಲ | ಒಟ್ಟು |
|---|---|---|---|
| ಸಂಖ್ಯೆಗಳು | 196 | 126 | 322 |
| % | 61 | 39 | 100 |

ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರು ಇಲ್ಲ ಎಂದು ಹೇಳಿದ ಶಿಕ್ಷಕರಲ್ಲಿ, ತಮ್ಮ ಶಾಲೆಯಲ್ಲಿ ಶಿಕ್ಷಕರ ಕೊರತೆ ಇರುವ ಕುರಿತು ಅವರು (ಶಾಲೆ ಅಥವಾ ಶಾಲಾ ಆಡಳಿತ ಸಮಿತಿ) ಹಿರಿಯ ಅಧಿಕಾರಿಗಳಿಗೆ ಯಾವುದೇ ವಿನಂತಿಯನ್ನು ಮಾಡಿದ್ದಾರೆಯೇ ಎಂದು ಕೇಳಲಾಯಿತು. ಹಿರಿಯ ಅಧಿಕಾರಿಗಳಿಗೆ ಯಾವುದೇ ವಿನಂತಿಯನ್ನು ಮಾಡದ ಶಿಕ್ಷಕರ ಪ್ರಮಾಣವು 35 ಶೇಕಡಾ ಆಗಿತ್ತು (ಕೋಷ್ಟಕ 4 ನೋಡಿ). ಈ ರೀತಿ ವಿನಂತಿ ಮಾಡದಿರಲು ಕಾರಣವೇನೆಂದು ಕೇಳಿದಾಗ, ಹಿರಿಯ ಅಧಿಕಾರಿಗಳು ಶಿಕ್ಷಕರ ಕೊರತೆಯಂತಹ ವಿಚಾರವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಅಥವಾ ಈ ಪರಿಸ್ಥಿತಿಯ ಕುರಿತು ಅರಿವು ಇದ್ದರೂ ಅವರೇನೂ ಮಾಡುವುದಿಲ್ಲ ಎಂದು ಬಹುಪಾಲು ಶಿಕ್ಷಕರು ಹೇಳಿದ್ದಾರೆ.

ಕೋಷ್ಟಕ 2. ಶಾಲೆಗಳಿಂದ ಹೆಚ್ಚಿನ ಶಿಕ್ಷಕರುಗಳಿಗಾಗಿ ಮನವಿ

| | ಹೌದು | ಇಲ್ಲ | ಒಟ್ಟು |
|---|---|---|---|
| ಸಂಖ್ಯೆಗಳು | 82 | 44 | 126 |
| % | 65 | 35 | 100 |

ಶಿಕ್ಷಕರ ಕೊರತೆಯ ಸಮಸ್ಯೆಯನ್ನು ಪರಿಹರಿಸುವಂತೆ ತಮ್ಮ ಶಾಲೆಗಳು ಹಿರಿಯ ಅಧಿಕಾರಿಗಳಿಗೆ ವಿನಂತಿ ಮಾಡಿವೆ ಎಂದು ತಿಳಿಸಿದ 82 ಶಿಕ್ಷಕರ ಪೈಕಿ, 51 ಶಿಕ್ಷಕರು (62%), ಈ ವಿನಂತಿಗೆ ಪ್ರತಿಯಾಗಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದ್ದಾರೆ (ಕೋಷ್ಟಕ 3 ನೋಡಿ).

ಕೋಷ್ಟಕ 3. ಶಿಕ್ಷಕರ ಕೊರತೆಯ ಬಗ್ಗೆ ಹಿರಿಯ ಅಧಿಕಾರಿಗಳು ತೆಗೆದುಕೊಂಡ ಕ್ರಮ

| | ಹೌದು | ಇಲ್ಲ | ಒಟ್ಟು |
|---|---|---|---|
| ಸಂಖ್ಯೆಗಳು | 31 | 51 | 82 |

| | | | |
|---|---|---|---|
| % | 38 | 62 | 100 |

ಯಾವ ಶಾಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆಯೋ, ಅಂತಹ ಶಾಲೆಗಳಲ್ಲಿ, ಶಿಕ್ಷಕರ ಕೊರತೆಗೆ ಸಂಬಂಧಿಸಿದ ಪ್ರತಿಕ್ರಿಯೆಯು, ಗುತ್ತಿಗೆ ಆಧಾರಿತ ಶಿಕ್ಷಕರ ನೇಮಕ ಮತ್ತು ಶಿಕ್ಷಕರ ಪ್ರತಿನಿಯೋಜನೆ ಮುಂತಾದ ತಾತ್ಕಾಲಿಕ ಪರಿಹಾರಗಳಿಗೆ ಸೀಮಿತವಾಗಿತ್ತೇ ಹೊರತು, ಹೊಸ ಶಿಕ್ಷಕರ ನಿಯೋಜನೆಯಂತಹ ದೀರ್ಘಕಾಲೀನ ಪರಿಹಾರವನ್ನು ಹೊಂದಿರಲಿಲ್ಲ (ಕೋಷ್ಟಕ 6 ನೋಡಿ).

ಕೋಷ್ಟಕ 4. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವ ಕುರಿತು ಅಧಿಕಾರಿಗಳ ಪ್ರತಿಕ್ರಿಯೆಗಳು

| | ಸಂಖ್ಯೆಗಳು | ಪ್ರತಿ ಪ್ರತಿಕ್ರಿಯೆಯ % | ಒಟ್ಟು ಪ್ರತಿಕ್ರಿಯೆಯ % |
|---|---|---|---|
| ಶಿಕ್ಷಕರ ನಿಯೋಜನೆ | 11 | 35 | 30 |
| ಗುತ್ತಿಗೆ ಆಧರಿತ ಶಿಕ್ಷಕರ ತಾತ್ಕಾಲಿಕ ನೇಮಕ | 13 | 42 | 35 |
| ಹೊಸ ಶಿಕ್ಷಕರ ನಿಯೋಜನೆ | 6 | 19 | 16 |
| ಇತರ ಯಾವುದಾದರೂ | 7 | 23 | 19 |
| ಆಧಾರ | 37 | 31 | 100 |

(ವಿಭಿನ್ನಪ್ರತಿಕ್ರಿಯೆಗಳಿಗೆ ಅವಕಾಶ ನೀಡಲಾಯಿತು)

## 3.2 ಬೋಧಕೇತರ ಚಟುವಟಿಕೆಗಳು

ಶಿಕ್ಷಕರನ್ನು ಬೋಧಕೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವ ವಿಚಾರವು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ದೀರ್ಘಕಾಲದ ಸಮಸ್ಯೆಯಾಗಿ ಉಳಿದಿದೆ. ಆರ್.ಟಿ.ಇ ಸಹ ಇದನ್ನು ಪರಿಗಣನೆಗೆ ತೆಗೆದುಕೊಂಡಿದೆ ಹಾಗೂ ಜನಗಣತಿಯ ಕೆಲಸ, ವಿಪತ್ತು ಪರಿಹಾರ ಕರ್ತವ್ಯ, ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಚುನಾವಣಾ ಕರ್ತವ್ಯಗಳನ್ನು ಹೊರತುಪಡಿಸಿ ಬೇರೆ ಯಾವುದೇ ಶೈಕ್ಷಣಿಕೇತರ ಕೆಲಸಗಳಲ್ಲಿ ಶಿಕ್ಷಕರನ್ನು ನಿಯೋಜಿಸುವುದನ್ನು ನಿಷೇಧಿಸಿದೆ. ನಮ್ಮ ಅಧ್ಯಯನದಲ್ಲಿ ನಾವು, ಕಳೆದ ಶೈಕ್ಷಣಿಕ ವರ್ಷದಲ್ಲಿ ಎಷ್ಟು ದಿನಗಳ ಕಾಲ ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರು ತೊಡಗಿಸಿಕೊಂಡಿದ್ದರು ಎಂದು ಕೇಳಿದೆವು. ವಿವಿಧ ಬೋಧಕೇತರ ಚಟುವಟಿಕೆಗಳ ಕುರಿತು ಶಿಕ್ಷಕರನ್ನು ಪ್ರತ್ಯೇಕವಾಗಿ ಕೇಳಿದ್ದು ಮಾತ್ರವಲ್ಲದೆ, ಕಳೆದ ವರ್ಷ ಯಾವುದೇ ಬೋಧಕೇತರ ಚಟುವಟಿಕೆಯಲ್ಲಿ ಒಟ್ಟು ಎಷ್ಟು ದಿನಗಳ ಕಾಲ ತೊಡಗಿಸಿಕೊಂಡಿದ್ದರು ಎಂದು ಶಿಕ್ಷಕರನ್ನು ಕೇಳಲಾಗಿತ್ತು.

ಜನಗಣತಿಯ ಕೆಲಸ, ಚುನಾವಣೆ ಮತ್ತು ಸಭೆ ಮುಂತಾದ ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರು ಕಳೆದ ಸರಾಸರಿ ದಿನಗಳ ಸಂಖ್ಯೆಯು ಅಧಿಕವಾಗಿತ್ತು. ವಿವಿಧ ಬೋಧಕೇತರ ಚಟುವಟಿಕೆಗಳ ಕುರಿತು ಬಂದ ಪ್ರತಿಕ್ರಿಯೆಗಳನ್ನು ಸಂಕಲಿಸಿದಾಗ, ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರು ಸುಮಾರು 75-80 ದಿನಗಳು ಸರಾಸರಿಯಾಗಿ ಕಳೆದಿರುವುದು ಕಂಡುಬಂತು. ಬೋಧಕೇತರ ಚಟುವಟಿಕೆಗಳಲ್ಲಿ

ವರ್ಷವೊಂದರಲ್ಲಿ ತೊಡಗಿಕೊಂಡ ದಿನಗಳ ಕುರಿತು ದೊರೆತ ವೈಯಕ್ತಿಕ ಪ್ರತಿಕ್ರಿಯೆಯನ್ನು ಲೆಕ್ಕ ಹಾಕಿದಾಗ, ಅವರು ಸುಮಾರು 25 ದಿನಗಳನ್ನು ಕಳೆದಿರುವುದು ಕಂಡುಬರುತ್ತದೆ (ಕೋಷ್ಟಕ 5 ನೋಡಿ).[12]

ಕೋಷ್ಟಕ 5. ವರ್ಷವೊಂದರಲ್ಲಿ, ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರು ವ್ಯಯಿಸಿದ ದಿನಗಳು

| ಬೋಧಕೇತರ ಚಟುವಟಿಕೆಯ ಪ್ರಕಾರ | ಸರಾಸರಿ ದಿನಗಳು | ದಿನಗಳ ಸಂಖ್ಯೆಯ ಮಧ್ಯಾಂಕ | ಆಧಾರ |
|---|---|---|---|
| ಜನಗಣತಿ ಕೆಲಸ | 16 | 15 | 48 |
| ಚುನಾವಣೆಗಳು (ಚುನಾವಣೆ ಕೆಲಸ/ಬಿ.ಎಲ್.ಒ) | 12 | 6 | 193 |
| ಆರೋಗ್ಯ ಯೋಜನೆ ಸಂಬಂಧಿತ ಕೆಲಸ | 2 | 2 | 81 |
| ತರಬೇತಿಗಳು | 8 | 6 | 153 |
| ಸಭೆಗಳು (ನಿಯತಕಾಲಿಕ - ವಿಭಾಗೀಯ, ಕ್ಷೇತ್ರ ಮಟ್ಟದ, ಶಿಕ್ಷಕರ ಸಂಘದ ಕೆಲಸ, ಸಮುದಾಯ ಭೇಟಿ) | 9 | 10 | 123 |
| ಬ್ಯಾಂಕು ಸಂಬಂಧಿತ ಕೆಲಸ | 6 | 5 | 91 |
| ಹಿರಿಯ ಅಧಿಕಾರಿಗಳ ಅಗತ್ಯತೆಗಳು (ದತ್ತಾಂಶಗಳಿಗಾಗಿ ದಿಢೀರ್ ಆಗಿ ವಿನಂತಿ ಮತ್ತು ಆದೇಶಗಳ ಸಂವಹನ) | 8 | 7 | 94 |
| ಪರೀಕ್ಷೆಯ ಕರ್ತವ್ಯ | 8 | 6 | 97 |
| ಇತರೆ | 7 | 6 | 54 |
| ವರ್ಷವೊಂದರಲ್ಲಿ ಬೋಧಕೇತರ ಚಟುವಟಿಕೆಗಳಲ್ಲಿ ಕಳೆದ ದಿನಗಳ ವೈಯಕ್ತಿಕ ಲೆಕ್ಕಾಚಾರ | 25 | 23 | 251 |

ವಿವಿಧ ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರು ವ್ಯಯಿಸಿದ ಒಟ್ಟು ಸಮಯವನ್ನು ಆಧರಿಸಿ, ಗರಿಷ್ಠ ಸಮಯವನ್ನು ಇವರು ಚುನಾವಣಾ ಕರ್ತವ್ಯದ ಮೇಲೆ (29%), ಹಾಗೂ ನಂತರ ಶೈಕ್ಷಣಿಕೇತರ ತರಬೇತಿಗಳು (15%) ಮತ್ತು ಆಡಳಿತಾತ್ಮಕ ಸಭೆಗಳಲ್ಲಿ (13%) ವ್ಯಯಿಸಿದ್ದಾರೆ ಎಂದು ಹೇಳಬಹುದು (ಕೋಷ್ಟಕ 6 ನೋಡಿ).

ಕೋಷ್ಟಕ 6. ಶಿಕ್ಷಕರು ವಿವಿಧ ಬೋಧಕೇತರ ಚಟುವಟಿಕೆಗಳಲ್ಲಿ ವ್ಯಯಿಸಿರುವ ಸಮಯದ ಪ್ರಮಾಣಾನುಪಾತ

[12] ಈ ಲೆಕ್ಕಾಚಾರವು ಇತರ ಅಧ್ಯಯನಗಳೊಂದಿಗೆ ಹೊಂದಿಕೆಯಾಗುತ್ತದೆ (ಉದಾ: ಶಂಕರ್, ಡಿ, ಮತ್ತು ಲಿಂಡನ್, ಟಿ (2014). ಹೌ ಮಚ್ ಅಂಡ್ ವಾಟ್ ಕೈಂಡ್ ಆಫ್ ಟೀಚಿಂಗ್ ಇಸ್ ದೇರ್ ಇನ್ ಎಲಿಮೆಂಟರಿ ಎಜುಕೇಶನ್ ಇನ್ ಇಂಡಿಯಾ? ಎವಿಡೆನ್ಸ್ ಫ್ರಂ ತ್ರೀ ಸ್ಟೇಟ್ಸ್. ಸೌತ್ ಏಷ್ಯಾ: ಹ್ಯೂಮನ್ ಡೆವೆಲಪ್ಮೆಂಟ್ ಸೆಕ್ಟರ್; ನಂ. 67., ವರ್ಲ್ಡ್ ಬ್ಯಾಂಕ್ ಗ್ರೂಪ್., ವಾಷಿಂಗ್ಟನ್, ಡಿಸಿ.). ಶಂಕರ್ ಮತ್ತು ಲಿಂಡನ್ ಅವರು (2014, ಪು. 26), ''ಸಂಕ್ಷಿಪ್ತವಾಗಿ, 3 ರಾಜ್ಯಗಳ (ಯು.ಪಿ, ಎ.ಪಿ, ಎಂ.ಪಿ) ಅಧಿಕೃತ ಕ್ಯಾಲೆಂಡರ್ ವರ್ಷವೊಂದರಲ್ಲಿ 222ರಿಂದ 224 ದಿನಗಳನ್ನು ಗೊತ್ತುಮಾಡಿದರೆ, ಶಿಕ್ಷಕರು ನಿಜವಾಗಿಯೂ ಉಪಸ್ಥಿತರಿದ್ದ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಲಭ್ಯರಿದ್ದ ದಿನಗಳ ಸಂಖ್ಯೆಯು ಯು.ಪಿ.ಯಲ್ಲಿ 195, ಎ.ಪಿ.ಯಲ್ಲಿ 194, ಮತ್ತು ಎಂ.ಪಿ.ಯಲ್ಲಿ ಕೇವಲ 187 ಆಗಿತ್ತು. ಇದು, ಪ್ರತಿ ಏಳು ಕಚೇರಿಯ ದಿನಗಳಲ್ಲಿ ಒಂದು ದಿನದ ನಷ್ಟವನ್ನು ಪ್ರತಿನಿಧಿಸುತ್ತದೆ' ಎಂದು ಹೇಳಿದ್ದಾರೆ.

| ಬೋಧಕೇತರ ಚಟುವಟಿಕೆಯ ವಿಧ | % ಸಮಯ |
| --- | --- |
| ಜನಗಣತಿ ಕೆಲಸ | 9 |
| ಚುನಾವಣೆಗಳು (ಚುನಾವಣಾ ಕೆಲಸ/ಬಿ.ಎಲ್.ಒ) | 29 |
| ಆರೋಗ್ಯ ಯೋಜನೆಗಳಿಗೆ ಸಂಬಂಧಿಸಿದ ಕೆಲಸ | 2 |
| ತರಬೇತಿಗಳು | 15 |
| ಸಭೆಗಳು (ನಿಯತಕಾಲಿಕ - ವಿಭಾಗೀಯ, ಕ್ಷೇತ್ರ ಮಟ್ಟ, ಶಿಕ್ಷಕರ ಸಂಘದ ಕೆಲಸ, ಸಮುದಾಯ ಭೇಟಿ) | 13 |
| ಬ್ಯಾಂಕು ಸಂಬಂಧಿಸಿದ ಕೆಲಸ | 7 |
| ಹಿರಿಯ ಅಧಿಕಾರಿಗಳ ಅಗತ್ಯತೆಗಳು (ದತ್ತಾಂಶಗಳಿಗಾಗಿ ದಿಢೀರ್ ಆಗಿ ವಿನಂತಿ ಮತ್ತು ಆದೇಶಗಳ ಸಂವಹನ) | 9 |
| ಪರೀಕ್ಷೆಯ ಕರ್ತವ್ಯ | 10 |
| ಇತರೆ | 5 |
| ಒಟ್ಟು | 100 |

ಪ್ರತಿ ವಾರವೂ ಶಿಕ್ಷಕರು ಸರಾಸರಿ ಎಷ್ಟು ಗಂಟೆಗಳನ್ನು ತರಗತಿಯೇತರ ಚಟುವಟಿಕೆಗಳಲ್ಲಿ ಕಳೆಯುತ್ತಿದ್ದಾರೆಂದು ಕೇಳಲಾಯಿತು. ಅವರ ಪ್ರತಿಕ್ರಿಯೆಯ ಪ್ರಕಾರ, ವಿವಿಧ ಚಟುವಟಿಕೆಗಳಲ್ಲಿ ಹೆಚ್ಚು ಕಡಿಮೆ ಒಂದೇ ಪ್ರಕಾರದಲ್ಲಿ ಇವರು ಸಮಯವನ್ನು ವ್ಯಯಮಾಡುತ್ತಿದ್ದಾರೆ. ಹಾಗೂ ತರಗತಿ ಕೋಣೆಗೆ ಸಂಬಂಧಿಸದ ವಿವಿಧ ಚಟುವಟಿಕೆಗಳನ್ನು ಸಂಕಲಿಸಿದಾಗ, ಇದು ಸುಮಾರು 13 ಗಂಟೆ ಆಗಿತ್ತು. ವಾರವೊಂದರಲ್ಲಿ ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ವ್ಯಯಿಸಿದ ಗಂಟೆಗಳ ವೈಯಕ್ತಿಕ ಲೆಕ್ಕಾಚಾರ ಮಾಡಿದಾಗ ಇದು ಸುಮಾರು ಐದು ಗಂಟೆ ಆಗಿತ್ತು (ಕೋಷ್ಟಕ 9 ನೋಡಿ).[13]

ಕೋಷ್ಟಕ 7. ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ಶಿಕ್ಷಕರು ಪ್ರತಿ ವಾರ ವ್ಯಯಿಸಿದ ಗಂಟೆಗಳು

| ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಯ ವಿಧ | ವಾರಕ್ಕೆ ಸರಾಸರಿ ಗಂಟೆಗಳು | ಪ್ರತಿ ವಾರದ ಗಂಟೆಗಳ ಮಧ್ಯಾಂಕ | ಒಟ್ಟು |
| --- | --- | --- | --- |
| ದಾಖಲೆಗಳು ಮತ್ತು ನೋಂದಣಿಗಳ ನಿರ್ವಹಣೆ | 3 | 2 | 267 |
| ಮಧ್ಯಾಹ್ನದ ಬಿಸಿಯೂಟದ (ಎಂ.ಡಿ.ಎಂ) ನಿರ್ವಹಣೆ | 2 | 2 | 235 |
| ಪೋಷಕರು/ಸಮುದಾಯದ ಜೊತೆ ಸಂವಾದ | 2 | 1 | 201 |
| ಕಾರ್ಯಕ್ರಮಗಳು ಮತ್ತು ಸಂಭ್ರಮಾಚರಣೆಗಳು | 2 | 2 | 121 |
| ಇತರ ಯಾವುದೇ | 4 | 6 | 38 |


[13] ಈ ಲೆಕ್ಕಾಚಾರವು, ಇತರ ಅಧ್ಯಯನಗಳ ಟೈಂ-ಆನ್-ಟಾಸ್ಕ್ ಲೆಕ್ಕಾಚಾರಗಳ ಜೊತೆ ಹೊಂದಿಕೆಯಾಗುತ್ತದೆ, ಉದಾಹರಣೆಗೆ, *ಶಂಕರ್ ಮತ್ತು ಲಿಂಡನ್*(2014, ಪು. 34

| | | | |
|---|---|---|---|
| ವಾರವೊಂದರಲ್ಲಿ ತರಗತಿ ಕೋಣೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ವ್ಯಯ ಮಾಡಿದ ಗಂಟೆಗಳ ವೈಯಕ್ತಿಕ ಲೆಕ್ಕಾಚಾರ | 5 | 5 | 276 |

## 3.3 ನಿರಂತರ ವೃತ್ತಿಕೌಶಲಾಭಿವೃದ್ಧಿಯೆಡೆಗೆ ಗಮನ ಹರಿಸಿರದಿರುವುದು (Inattention to continuous professional development )

ಸಾರ್ವಜನಿಕ ಶಾಲಾ ವ್ಯವಸ್ಥೆಯ ಒಂದು ಪ್ರಮುಖ ಅಂಶವೇನೆಂದರೆ ಅದು ಶಿಕ್ಷಕರ ನಿರಂತರ ವೃತ್ತಿಪರ ಬೆಳವಣಿಗೆ. ಹಾಗೂ ಇದಕ್ಕೆ ತಕ್ಷಣದ ಮತ್ತು ತೀವ್ರ ಗಮನದ ಅಗತ್ಯವೂ ಇದೆ. ನಮ್ಮ ಸಮೀಕ್ಷೆಯಲ್ಲಿ, ಶಿಕ್ಷಕರಿಗೆ ನಿರಂತರ ವೃತ್ತಿಪರ ಬೆಳವಣಿಗೆಗೆ ಲಭ್ಯವಿರುವ ಅವಕಾಶಗಳು ಮತ್ತು ಇತರ ಕಾರ್ಯಕ್ರಮಗಳ ಕುರಿತು ನಾವು ಅನೇಕ ಪ್ರಶ್ನೆಗಳನ್ನು ಹೊಂದಿದ್ದೆವು. ತೀರಾ ಪ್ರಾಥಮಿಕ ಹಂತದಲ್ಲಿ, ವರ್ಷವೊಂದರಲ್ಲಿ ರಚನಾತ್ಮಕ ತರಬೇತಿ ಕ್ಯಾಲೆಂಡರ್ ನ ಲಭ್ಯತೆಯ ಕುರಿತು ಕೇಳಿದಾಗ, 92 ಶೇಕಡಾದಷ್ಟು ಶಿಕ್ಷಕರು, ಹಿರಿಯ ಅಧಿಕಾರಿಗಳು ಇಂತಹ ಯಾವುದೇ ತರಬೇತಿ ಕ್ಯಾಲೆಂಡರ್ ಅನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿ ಅವರಿಗೆ ನೀಡಿಲ್ಲ ಎಂದು ಹೇಳಿದ್ದಾರೆ (ಚಿತ್ರ 3 ನೋಡಿ). ಇದೇ ರೀತಿ, 83 ಶೇಕಡಾದಷ್ಟು ಶಿಕ್ಷಕರು, ಶಿಕ್ಷಕರ ವೃತ್ತಿಪರ ಬೆಳವಣಿಗೆಯ ಅಗತ್ಯತೆಯನ್ನು ಅರಿತುಕೊಳ್ಳಲು ಹಿರಿಯ ಅಧಿಕಾರಿಗಳು ಯಾವುದೇ ಮೌಲ್ಯಮಾಪನವನ್ನು ನಡೆಸಿಲ್ಲ ಎಂದು ಹೇಳಿದ್ದಾರೆ.

*Figure 3. Availability of training calendar and assessment of training needs of teachers*




ಶಿಕ್ಷಕರ ಸಂಖ್ಯೆ

ಲಭ್ಯವಿಲ್ಲ/ ಮಾಡಿಲ್ಲ

ಲಭ್ಯ/ ಮಾಡಲಾಗಿದೆ


ಒಟ್ಟು: 322

92% ಶಿಕ್ಷಕರು, ತರಬೇತಿಯ ಕ್ಯಾಲೆಂಡರ್ ಲಭ್ಯವಿಲ್ಲ ಎಂದು ಹೇಳಿದ್ದಾರೆ

83% ಶಿಕ್ಷಕರು, ತರಬೇತಿಯ ಅಗತ್ಯತೆಯ ಮೌಲ್ಯಾಂಕನವನ್ನು ಮಾಡಿಲ್ಲ ಎಂದು ಹೇಳಿದ್ದಾರೆ

ಶಿಕ್ಷಕರು ಕಳೆದ ಶೈಕ್ಷಣಿಕ ವರ್ಷದಲ್ಲಿ ಪಡೆದ ಸೇವಾನಿರತ ತರಬೇತಿ ಮತ್ತು ಅದಕ್ಕಿಂತ ಮೊದಲು ಅಥವಾ ನಂತರ ಪಡೆದ ಸೇವಾನಿರತ ತರಬೇತಿಯ ನಡುವೆ ಏನಾದರೂ ತಾರ್ಕಿಕ ಸಂಬಂಧವಿದೆಯೇ ಎಂದು ಕೇಳಿದಾಗ, ಬಹುಪಾಲು ಶಿಕ್ಷಕರು (70%), ತಾವು ಪಡೆದ ತರಬೇತಿಗಳ ನಡುವೆ ಇಂತಹ ಯಾವುದೇ ಸಂಬಂಧ ಇರಲಿಲ್ಲ ಎಂದು ಹೇಳಿದ್ದಾರೆ. ಇದೇ ರೀತಿ, 89% ತರಬೇತಿಗಳಲ್ಲಿ, ಚಾಲ್ತಿಯಲ್ಲಿರುವ ಶಿಕ್ಷಕರ ಬೆಂಬಲ ವ್ಯವಸ್ಥೆಯ ಯಾವುದೇ ಅನುಪಾಲನೆಯ (ಫಾಲೋ-ಅಪ್) ಬೆಂಬಲವನ್ನು ಪಡೆದಿಲ್ಲ (ಚಿತ್ರ 4 ನೋಡಿ).

*Figure 4. Structured linkages of in-service trainings for teachers*





ಹಿಂದಿನ ತರಬೇತಿಗಳ ಜೊತೆ ಯಾವುದೇ ಸಂಬಂಧ ಹೊಂದಿರಲಿಲ್ಲ ಎಂದು 70% ಶಿಕ್ಷಕರು ಹೇಳಿದ್ದಾರೆ.

ಯಾವುದೇ ಅನುಸರಣೆ ನೆರವು ದೊರೆತಿಲ್ಲ ಎಂದು 89% ಶಿಕ್ಷಕರು ಹೇಳಿದ್ದಾರೆ.

ತಾವು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಪಡೆದ ಸೇವಾನಿರತ ತರಬೇತಿಗಳ ಗುಣಮಟ್ಟದ ಕುರಿತು ಕೇಳಿದಾಗ, ತಮ್ಮ ತರಗತಿಯ ಅಭ್ಯಾಸಗಳ ಜೊತೆ ಸಂಬಂಧ ಕಲ್ಪಿಸುವಲ್ಲಿ ಈ ತರಬೇತಿಯ ಸಾಮರ್ಥ್ಯ, ಸಂಪನ್ಮೂಲ ವ್ಯಕ್ತಿಗಳ ಜ್ಞಾನ, ಮತ್ತು ತರಬೇತಿಗಳಲ್ಲಿ ಬಳಸಿದ ಸಂಪನ್ಮೂಲ ಸಾಮಗ್ರಿಗಳ ಗುಣಮಟ್ಟ ಮುಂತಾದ ಗುಣಮಟ್ಟಕ್ಕೆ ಸಂಬಂಧಿಸಿದ ಮಾನದಂಡಗಳಿಗೆ ಪ್ರತಿಯಾಗಿ ಹೆಚ್ಚಿನ ಶಿಕ್ಷಕರು, ಸಾಧಾರಣ ಪ್ರಮಾಣದ ತೃಪ್ತಿ ಪಡೆದಿರುವುದಾಗಿ ಅಥವಾ ಅತೃಪ್ತಿ ಹೊಂದಿರುವುದಾಗಿ ತಿಳಿಸಿದ್ದಾರೆ (ಚಿತ್ರ 5 ನೋಡಿ).

*Figure 5. Teachers' experience of in-service teacher trainings (%)*




## 3.4 ಶಾಲಾ ಆಧರಿತ ನೆರವು ಮತ್ತು ಮಾರ್ಗದರ್ಶನ ಸಾಲದಿರುವುದು

ಶಿಕ್ಷಕರಿಗೆ ಶಾಲಾ ಆಧರಿತ ನೆರವು ನೀಡಲು ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಮತ್ತು ವಿಭಾಗೀಯ ಸಂಪನ್ಮೂಲ ಕೇಂದ್ರಗಳು - ಹೀಗೆ ವಿಶಾಲವಾದ ಉಪಜಿಲ್ಲಾ ವ್ಯವಸ್ಥೆ ಚಾಲ್ತಿಯಲ್ಲಿದೆ. ಆದಾಗ್ಯೂ, ಈ ಸಂರಚನೆಗಳ ಪರಿಣಾಮಕಾರಿ ಬಳಕೆಯ ಕುರಿತು ಆಗಾಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ. ಈ ಅಧ್ಯಯನದಲ್ಲಿ, ಕಳೆದ ಒಂದೂವರೆ ವರ್ಷಗಳಲ್ಲಿ ಹಿರಿಯ ಅಧಿಕಾರಿಗಳು ಮಾಡಿರುವ ಶಾಲಾ ಭೇಟಿಗಳ ಪುನರಾವರ್ತನೆ, ಅವಧಿ ಮತ್ತು ಗುಣಲಕ್ಷಣದ ಕುರಿತು ಶಿಕ್ಷಕರಿಗೆ ಪ್ರಶ್ನೆಯನ್ನು ಕೇಳಲಾಯಿತು. ಈ ಅವಧಿಯಲ್ಲಿ, 22 ಶೇಕಡಾದಷ್ಟು ಶಾಲೆಗಳಿಗೆ ಕ್ಲಸ್ಟರ್ ಮಟ್ಟದ ಅಧಿಕಾರಿಗಳು ಭೇಟಿ ನೀಡಿಲ್ಲ ಹಾಗೂ 22 ಶೇಕಡಾದಷ್ಟು ಶಾಲೆಗಳಿಗೆ ಬ್ಲಾಕ್ ಮಟ್ಟದ ಅಧಿಕಾರಿಗಳು ಭೇಟಿ ನೀಡಿಲ್ಲ ಹಾಗೂ 60 ಶೇಕಡಾದಷ್ಟು ಶಾಲೆಗಳಿಗೆ ಜಿಲ್ಲಾ ಮಟ್ಟದ ಯಾವುದೇ ಅಧಿಕಾರಿಯು ಭೇಟಿ ನೀಡಿಲ್ಲ ಎಂಬುದು ಕಂಡುಬಂದಿತು (ಕೋಷ್ಟಕ 8 ನೋಡಿ).

ಕೋಷ್ಟಕ 8. ಹಿರಿಯ ಅಧಿಕಾರಿಗಳು ಭೇಟಿ ನೀಡದ ಶಾಲೆಗಳು


| | ಕ್ಲಸ್ಟರ್ ಮಟ್ಟ | ಬ್ಲಾಕ್ ಮಟ್ಟ | ಜಿಲ್ಲಾ ಮಟ್ಟ | ಒಟ್ಟು |
|---|---|---|---|---|
| ಸಂಖ್ಯೆಗಳು | 71 | 72 | 194 | 322 |

| | | | |
|---|---|---|---|
| ಒಟ್ಟು ಶಾಲೆಗಳ % | 22 | 22 | 60 |

ಹಿರಿಯ ಅಧಿಕಾರಿಗಳ ಭೇಟಿಗಳ ಸ್ವರೂಪದ ಕುರಿತು ಶಿಕ್ಷಕರನ್ನು ಕೇಳಲಾಯಿತು. ಭೇಟಿಗಳ ಸ್ವರೂಪವನ್ನು ಎರಡು ವಿಸ್ತೃತ ವರ್ಗಗಳಾಗಿ (ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ) ವರ್ಗೀಕರಿಸುವುದಕ್ಕಾಗಿ ಪ್ರತಿಕ್ರಿಯೆಗಳನ್ನು ಅಕ್ಷರಶಃ ದಾಖಲಿಸಲಾಯಿತು ಮತ್ತು ಸಂಕೇತಿಸಲಾಯಿತು. ದಾಖಲೆಗಳು ಮತ್ತು ನೋಂದಣಿಗಳ ತಪಾಸಣೆ ಮತ್ತು ತರಗತಿ ಕೋಣೆಗಳ ವೀಕ್ಷಣೆ ಮುಂತಾದ ವಿಚಾರಗಳ ಮೇಲೆ ಬೆಳಕು ಹರಿಸುವ ಅಲ್ಪಕಾಲೀನ ಭೇಟಿಗಳನ್ನು ಮೇಲ್ವಿಚಾರಣೆ ಎಂಬುದಾಗಿ ವರ್ಗೀಕರಿಸಲಾಯಿತು. ಇನ್ನೊಂದೆಡೆ, ಪ್ರಾತ್ಯಕ್ಷಿಕೆಯ ಪಾಠಗಳು, ಬೋಧನೆ-ಕಲಿಕೆ ಮತ್ತು ತರಗತಿಯ ಪ್ರಕ್ರಿಯೆಯ ಕುರಿತು ಸಾಕಷ್ಟು ಪ್ರತಿಕ್ರಿಯೆ ಮುಂತಾದ ಕ್ರಮಗಳ ಮೂಲಕ ಶಿಕ್ಷಕರಿಗೆ ನೆರವನ್ನು ಒದಗಿಸುವ ಅಧಿಕಾರಿಗಳ ಸಕ್ರಿಯ ಪ್ರಯತ್ನಗಳನ್ನು ಮಾರ್ಗದರ್ಶನವೆಂದು ವರ್ಗೀಕರಿಸಲಾಯಿತು.

ಶಿಕ್ಷಕರು ತಿಳಿಸಿದಂತೆ, ವಿವಿಧ ಅಧಿಕಾರಿಗಳು ನೀಡಿದ ಎಲ್ಲಾ ಭೇಟಿಗಳ ಪೈಕಿ, ಹೆಚ್ಚಿನವು ಮೇಲ್ವಿಚಾರಣೆಗೆ ಸಂಬಂಧಿಸಿದ್ದವು. ಅಂದರೆ ಅಧಿಕಾರಿಗಳ (ವಿಭಾಗೀಯ, ಕ್ಷೇತ್ರ ಅಥವಾ ಜಿಲ್ಲಾ ಮಟ್ಟ) ೮೦ ಶೇಕಡಾ ಅಥವಾ ಅಧಿಕ ಭೇಟಿಗಳು ತಪಾಸಣೆಯ ರೂಪದಲ್ಲಿದ್ದವು, ಹಾಗೂ ಮೇಲ್ವಿಚಾರಣೆಯು ಮೂಲ ಉದ್ದೇಶವಾಗಿತ್ತು (ಚಿತ್ರ ೬ ನೋಡಿ).

*Figure 6. Nature of visits by senior officials*





## 3.5 ಬೋಧನೆ-ಕಲಿಕೆ ಸಾಮಗ್ರಿಗಳ ಪೂರೈಕೆಗೆ ಸಂಬಂಧಿಸಿದ ಸವಾಲುಗಳು

ಯಾವುದೇ ಒಬ್ಬ ಶಿಕ್ಷಕರು ಮೂಲ ಬೋಧನೆ-ಕಲಿಕೆಯ ಕಾರ್ಯವನ್ನು ಮುಂದುವರಿಸಬೇಕಾದರೆ ಪಠ್ಯಪುಸ್ತಕಗಳು ಮತ್ತು ಇತರ ಬೋಧನೆ-ಕಲಿಕೆ ಸಾಮಗ್ರಿಗಳು ಮುಂತಾದ ಅಗತ್ಯ ಪಠ್ಯಕ್ರಮ ಸಾಮಗ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಮತ್ತು ಸಕಾಲಕ್ಕೆ

ದೊರೆಯಬೇಕಾದುದು ತೀರಾ ಅತ್ಯಗತ್ಯ. ನಾವು ಶಿಕ್ಷಕರಲ್ಲಿ, ಪಠ್ಯಪುಸ್ತಕಗಳು ಅವರ ಶಾಲೆಗೆ ಅಗತ್ಯ ಪ್ರಮಾಣದಲ್ಲಿ ಮತ್ತು ಸಕಾಲದಲ್ಲಿ ತಲುಪುತ್ತವೆಯೇ ಎಂದು ಕೇಳಿದೆವು. ಕಳೆದ ಶೈಕ್ಷಣಿಕ ವರ್ಷದಲ್ಲಿ ಪಠ್ಯಪುಸ್ತಕಗಳ ಪೂರೈಕೆಯಲ್ಲಿ ಕೊರತೆ ಇತ್ತು ಎಂದು ಹೇಳಿದ ಶಿಕ್ಷಕರ ಪ್ರಮಾಣವು 56 ಶೇಕಡಾ ಆಗಿತ್ತು. ಸಕಾಲದಲ್ಲಿ ಪೂರೈಸುವ ಕುರಿತು, ಮಕ್ಕಳು ತಮ್ಮ ಪಠ್ಯಪುಸ್ತಕ ಪಡೆಯುವಾಗ ವಿಳಂಬವಾಗಿತ್ತು ಎಂದು 34 ಶೇಕಡಾದಷ್ಟು ಶಾಲೆಗಳ ಶಿಕ್ಷಕರು ಹೇಳಿದ್ದಾರೆ (ಚಿತ್ರ 7 ನೋಡಿ).

*Figure 7. Adequate supply of textbooks in schools*




ಒಟ್ಟು (ಶಾಲೆಗಳ ಸಂಖ್ಯೆ): 322

ಇಲ್ಲ

ಹೌದು

56% ಶಾಲೆಗಳು ಪಠ್ಯಪುಸ್ತಕಗಳ ಕೊರತೆಯನ್ನು ವರದಿ ಮಾಡಿವೆ

34% ಶಾಲೆಗಳು ಪಠ್ಯಪುಸ್ತಕಗಳ ವಿಳಂಬವನ್ನು ವರದಿ ಮಾಡಿವೆ

ಶಾಲೆಗಳಲ್ಲಿನ ಟಿ.ಎಲ್.ಎಂ ಗಳ ಕುರಿತು ವ್ಯವಸ್ಥೆಯಲ್ಲಿರುವ ಹಿರಿಯ ಮಟ್ಟದ ಅಧಿಕಾರಿಗಳಿಂದ ಏನಾದರೂ ನೆರವು ದೊರೆತಿದೆಯೇ ಎಂದು ಶಿಕ್ಷಕರನ್ನು ಕೇಳಿದಾಗ, 61 ಶೇಕಡಾದಷ್ಟು ಶಿಕ್ಷಕರು, ತಮಗೆ ಯಾವುದೇ ನೆರವು ದೊರೆತಿಲ್ಲ ಎಂದು ಹೇಳಿದ್ದಾರೆ (ಕೋಷ್ಟಕ 9 ನೋಡಿ). ಟಿ.ಎಲ್.ಎಂ. ಗಳಿಗಾಗಿ ಅವರು ಪಡೆಯುವ ಮುಖ್ಯ ನೆರವು ಯಾವುದೆಂದರೆ, ಅದು ಟಿ.ಎಲ್.ಎಂ ಗಳಿಸಲು/ರಚಿಸಲು ದೊರೆಯುವ ಹಣಕಾಸಿನ ರೂಪದ ನೆರವು. ಇವರಿಗೆ ಟಿ.ಎಲ್.ಎಂ. ಗಾಗಿ ಅಗತ್ಯ ಪ್ರಮಾಣದಲ್ಲಿ ಹಣಕಾಸು ನೆರವು ಸಹ ದೊರೆತಿಲ್ಲ. ಅಂದರೆ, ಹಿರಿಯ ಅಧಿಕಾರಿಗಳಿಂದ ಹಣಕಾಸು ದೊರೆತಿದೆ (ಸಂಖ್ಯೆ = 117) ಎಂದು ಹೇಳಿದ ಶಿಕ್ಷಕರ ಪೈಕಿ 68 ಶೇಕಡಾದಷ್ಟು ಮಂದಿ, ಅಗತ್ಯ ಪ್ರಮಾಣದಲ್ಲಿ ಈ ಮೊತ್ತವನ್ನು ಪಾವತಿಸಲಾಗಿಲ್ಲ ಎಂದು ಹೇಳಿದ್ದಾರೆ (ಕೋಷ್ಟಕ ಲಭ್ಯವಿಲ್ಲ).

ಕೋಷ್ಟಕ 9. ಟಿ.ಎಲ್.ಎಂ ಗಾಗಿ ಶಿಕ್ಷಕರು ಪಡೆದ ನೆರವು ಮತ್ತು ನೆರವಿನ ಪ್ರಕಾರ

| **ಟಿ.ಎಲ್.ಎಂ. ಗಾಗಿ ಪಡೆದ ನೆರವು** | ಹೌದು | ಇಲ್ಲ | ಒಟ್ಟು |
|---|---|---|---|
| ಸಂಖ್ಯೆಗಳು | 125 | 197 | 322 |
| % | 39 | 61 | 100 |

| **ಟಿ.ಎಲ್.ಎಂ ಗಾಗಿ ದೊರೆತ ನೆರವಿನ ಪ್ರಕಾರ** | ಸಂಖ್ಯೆಗಳು | ಪ್ರತಿ ಪ್ರತಿಕ್ರಿಯೆಯ % | ಒಟ್ಟು ಪ್ರತಿಕ್ರಿಯೆಯ % |
|---|---|---|---|
| ಇಲಾಖೆಯಿಂದ ಟಿ.ಎಲ್.ಎಂ ಗಳ ನೇರ ಸರಬರಾಜು | 10 | 8 | 8 |
| ಟಿ.ಎಲ್.ಎಂ ಗಳನ್ನು ಗಳಿಸಲು/ ತಯಾರಿಸಲು ಹಣದ ಪೂರೈಕೆ | 117 | 94 | 90 |
| ಟಿ.ಎಲ್.ಎಂ ಗಳನ್ನು ರಚಿಸಲು ಶಿಕ್ಷಕರ ಜೊತೆ ಕೆಲಸ ಮಾಡಿದ ಅಧಿಕಾರಿಗಳು | 3 | 2 | 2 |
| ಒಟ್ಟು | 130 | 125 | 100 |

## 4. ಉಪಸಂಹಾರ

ಈ ಅಧ್ಯಯನವು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ, ಸಾರ್ವಜನಿಕ ಶಾಲಾ ಶಿಕ್ಷಕರು ತಮ್ಮ ಅಗತ್ಯ ಬೋಧನೆ-ಕಲಿಕೆ ಕೆಲಸದಲ್ಲಿ ಸಾಕಷ್ಟು ನೆರವು ಪಡೆಯದೆ ಇರುವುದನ್ನು ಎತ್ತಿ ತೋರಿಸುತ್ತದೆ. ವಿಸ್ತೃತವಾಗಿ ಹೇಳುವುದಾದರೆ, ಈ ಅಧ್ಯಯನವು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕಸ್ತೂರಿ ರಂಗನ್ ಕರಡು ಸಮಿತಿಯಲ್ಲಿ ಶಿಕ್ಷಕರ ಕಾರ್ಯನಿರ್ವಹಣೆಯ ಕುರಿತು ವ್ಯಕ್ತಪಡಿಸಲಾದ ಪ್ರಮುಖ ಕಳವಳಗಳನ್ನು ತೀಕ್ಷ್ಣವಾಗಿ ವಿಶದಪಡಿಸುತ್ತದೆ. ಇದು, ಅನೇಕ ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ; ಬೋಧಕೇತರ ಚಟುವಟಿಕೆಗಳಿಗೆ ಬೇಡಿಕೆ ಇರುವ ಕಾರಣ ಶಿಕ್ಷಕರು ತರಗತಿ ಕೋಣೆಯ ಬೋಧನೆ-ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಸಿಗುವ ಸಮಯದ ನಷ್ಟ, ಶಿಕ್ಷಕರ ನಿರಂತರ ವೃತ್ತಿಪರ ಬೆಳವಣಿಗೆಗಾಗಿ ಇರಬೇಕಾದ ಪ್ರಕ್ರಿಯೆಗಳು ಮತ್ತು ಅವಕಾಶಗಳ ಅಲಭ್ಯತೆ, ಶಾಲಾ ಆಧರಿತ ನೆರವು ಮತ್ತು ಮಾರ್ಗದರ್ಶನಕ್ಕೆ ಇರಬೇಕಾದ ಸಾಂಸ್ಥಿಕ ವ್ಯವಸ್ಥೆಯು ನಿಷ್ಪರಿಣಾಮಕಾರಿಯಾಗಿರುವುದು; ಮತ್ತು ಪಠ್ಯಪುಸ್ತಕಗಳು ಅಗತ್ಯ ಪ್ರಮಾಣದಲ್ಲಿ ಮತ್ತು ಸಕಾಲದಲ್ಲಿ ಪೂರೈಕೆಯಾಗದೆ ಇರುವುದು ಮುಂತಾದುವುಗಳನ್ನು ಒಳಗೊಂಡಿದೆ. ಶಿಕ್ಷಕ ವರ್ಗಕ್ಕೆ ಇಂತಹ ಅಗತ್ಯ ಅಂಶಗಳ ವ್ಯವಸ್ಥೆ ಮಾಡುವಲ್ಲಿ ಕೊರತೆ ಉಂಟಾದಲ್ಲಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅತ್ಯಂತ ಪರಿಣಾಮಕಾರಿ ಶಿಕ್ಷಕರನ್ನು ರೂಪಿಸುವುದು ಕಷ್ಟಸಾಧ್ಯದ ಮಾತು ಎನ್ನುವುದರಲ್ಲಿ ಯಾವುದೇ ಅಚ್ಚರಿಯಿಲ್ಲ.

ಈ ಅಧ್ಯಯನದ ಫಲಿತಾಂಶವು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ಸಮಸ್ಯೆಗಳಿಗೆ 'ಕೇವಲ ಶಿಕ್ಷಕರನ್ನು ದೂರುವ' ಸಂಕುಚಿತ ದೃಷ್ಟಿಕೋನವನ್ನು ವಿಮರ್ಶಿಸಿ, ಗುತ್ತಿಗೆ ಆಧರಿತ ಶಿಕ್ಷಕರ ನೇಮಕ, ಸಾಧನೆ ಆಧರಿತ ವೇತನ ಪಾವತಿ ಮತ್ತು ಶಿಕ್ಷಕರು ಒಂದೇ ರೀತಿ ಫಲಿತಾಂಶ ನೀಡುವಂತೆ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದು ಮುಂತಾದ ಪರಿಹಾರವನ್ನು ಒದಗಿಸುವ, ಸಂಪೂರ್ಣವಾಗಿ ಶಿಕ್ಷಕರನ್ನೇ ಹೊಣೆಗಾರರನ್ನಾಗಿಸುವ ನೀತಿ ಸುಧಾರಣೆಗಳ ಪರಿಕಲ್ಪನೆಯನ್ನು ಪ್ರಶ್ನಿಸುತ್ತದೆ. ನಮ್ಮ ಅಧ್ಯಯನವು, ಶಿಕ್ಷಕರ ಕಾರ್ಯನಿರ್ವಹಣೆಯ ಮುಖ್ಯ ಕ್ಷೇತ್ರವಾದ ಬೋಧನೆ-ಕಲಿಕೆಯ ಸುತ್ತ ನಿರಂತರವಾಗಿ ವ್ಯವಸ್ಥೆಯನ್ನು ಬಲಪಡಿಸಲು ಬೇಕಾದ ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಸಾಂಸ್ಥಿಕ ಸನ್ನಿವೇಶ ಮತ್ತು ದೊಡ್ಡ ಪ್ರಮಾಣದ ಸಾರ್ವಜನಿಕ ಹೂಡಿಕೆ-ಹಣಕಾಸು ಮತ್ತು ರಾಜಕೀಯ ಇಚ್ಛಾಶಕ್ತಿ ಇವೆರಡೂ ರೂಪದಲ್ಲಿ - ಇವೆರಡೂ ವಿಚಾರಗಳ ಮೇಲೆ ಗಮನ ಹರಿಸುತ್ತದೆ.

ಭಾರತದ ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಸುತ್ತ ನಡೆಯುವ ನೀತಿ ಸಂವಾದಗಳಲ್ಲಿ, ಶಿಕ್ಷಕರು ತಮ್ಮ ಪ್ರತಿನಿತ್ಯದ ಕೆಲಸದ ವಿಚಾರಗಳಲ್ಲಿ ಎದುರಿಸುತ್ತಿರುವ ಸವಾಲುಗಳ ಪ್ರಾಮುಖ್ಯತೆಯನ್ನು ತಗ್ಗಿಸಲಾಗಿದೆ ಮತ್ತು ಸರಿಯಾಗಿ ವರದಿ ಮಾಡಿಲ್ಲ. ಈ ಅಧ್ಯಯನವು ಇಂತಹ ಸವಾಲುಗಳನ್ನು ಸಂಪೂರ್ಣವಾಗಿ ಎತ್ತಿ ತೋರಿಸುತ್ತದೆ ಹಾಗೂ ಈ ಸವಾಲುಗಳನ್ನು ಪರಿಹರಿಸಲು ಬೇಕಾದ ನೀತಿ ಸುಧಾರಣೆಗಳಿಗಾಗಿ ಕರೆ ನೀಡುತ್ತದೆ. ಇದೇ ರೀತಿಯಲ್ಲಿ ನಿರ್ಲಕ್ಷ್ಯವು ಮುಂದುವರಿದಲ್ಲಿ, ದೇಶದ ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಬೆನ್ನೆಲುಬು ಎನಿಸಿರುವ ಶಿಕ್ಷಕರ ಆತ್ಮಸ್ಥೈರ್ಯ ಮತ್ತು ಪ್ರೇರಣೆಯನ್ನು ದುರ್ಬಲಗೊಳಿಸುವ ಪರಿಣಾಮ ಉಂಟು ಮಾಡುವಲ್ಲಿ ಯಾವುದೇ ಸಂದೇಹವಿಲ್ಲ.

# ಪ್ರಬಂಧ 4:

# ಭಾರತದಲ್ಲಿ ಗುತ್ತಿಗೆ/ಹಂಗಾಮಿ ಶಿಕ್ಷಕರು- ಪ್ರಸ್ತುತ ಸ್ಥಿತಿಗತಿ, ಸಮಸ್ಯೆಗಳು ಮತ್ತು ಸವಾಲುಗಳು

ವಿಮಲಾ ರಾಮಚಂದ್ರನ್ ಮತ್ತು ದೀಪಾ ದಾಸ್[14]

## ಪ್ರಮುಖ ಸಾರಾಂಶ

ಕಳೆದ ಮೂರು ದಶಕಗಳಿಂದ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಪದ್ಧತಿಯು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಭಾಗವೇ ಆಗಿಹೋಗಿದೆ. ಇದನ್ನು ದೃಢೀಕರಿಸುವ ಯಾವುದೇ ಅಧಿಕೃತ ನೀತಿನಿಯಮಗಳಿಲ್ಲ. ಹೆಚ್ಚಿನ ಶಿಕ್ಷಕರ ಅಗತ್ಯವಿರುವುದರಿಂದ ಹಾಗೂ ಪ್ರಸ್ತುತ ಸನ್ನಿವೇಶದಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವುದಕ್ಕಾಗಿ ಕಡಿಮೆ ವೆಚ್ಚದ ಈ ಅನುಕೂಲಕರ ಪರಿಹಾರೋಪಾಯವನ್ನು ಅವಲಂಬಿಸಲಾಗಿದೆ.

ಸರ್ಕಾರೀ ಮೂಲದ ಆನುಷಂಗಿಕ ದತ್ತಾಂಶಗಳನ್ನು (Secondary Data) ಆಧರಿಸಿದ ಈ ಪ್ರಬಂಧವು, ಶಿಕ್ಷಣದ ರೀತಿ ಮತ್ತು ಹಂತ, ಗ್ರಾಮೀಣ/ನಗರ ಪ್ರದೇಶಗಳು ಲಿಂಗಾಧಾರಿತ ವಿಂಗಡಣೆ, ಅವರ ವೃತ್ತಿಪರ ಅರ್ಹತೆ, ಅವರ ವೃತ್ತಿಪರ ಅಭಿವೃದ್ಧಿಗೆ ಇರುವ ಅವಕಾಶಗಳು/ಸೇವಾನಿರತ ತರಬೇತಿ ಹಾಗೂ ಶಾಲೆಗಳಲ್ಲಿ ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುವುದರಿಂದ ಉದ್ಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಚರ್ಚಿಸುವುದರ ಮೂಲಕ ಸಾರ್ವಜನಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರಿತ ಶಿಕ್ಷಕರ ಪ್ರಸ್ತುತ ಸ್ಥಾನಮಾನದ ಚಿತ್ರಣವನ್ನು ನೀಡುತ್ತದೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ಗುತ್ತಿಗೆ ಆಧಾರಿತ ಶಿಕ್ಷಕರಿಗೆ ಸಂಬಂಧಿಸಿದಂತೆ ದತ್ತಾಂಶವು ಚಿಂತಾಜನಕವಾದ ಸಂಗತಿಗಳನ್ನು ಮುಂದಿಡುತ್ತದೆ.

- ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು 5,62,504 ರಿಂದ (2012-13) ಒಂದೇ ಸಮನೆ ಏರುತ್ತಲೇ ಇದ್ದು 6,32,316 ನ್ನು (2017-18) ತಲುಪಿದೆ. 2017-18 ರಲ್ಲಿ ಪ್ರಾಥಮಿಕ ಹಂತದಲ್ಲಿ ಶೇ. 13.8 ಹಾಗೂ ಪ್ರೌಢಶಾಲಾ ಹಂತದಲ್ಲಿ ಶೇ. 8.4 ಶಿಕ್ಷಕರು ಗುತ್ತಿಗೆ ಆಧಾರದಲ್ಲಿ ನೇಮಿಸಲ್ಪಟ್ಟವರಾಗಿದ್ದರು.
- ಭಾರತದಲ್ಲಿ ಪ್ರತಿ ನಾಲ್ಕರಲ್ಲಿ ಒಂದು ಶಾಲೆಯು ಕನಿಷ್ಠ ಒಬ್ಬ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿದ್ದು, ಇಂತಹ ಶಾಲೆಗಳ ಅನುಪಾತವು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ.
- 2017-18 ರಲ್ಲಿ ಕೇವಲ ಒಬ್ಬ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿರುವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 5,33,882 ಮಕ್ಕಳು ದಾಖಲಾತಿ ಪಡೆದಿದ್ದರು. ಉಳಿದಂತೆ, ಕೇವಲ ಇಬ್ಬರೇ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿದ್ದ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 17,11,455 ಮಕ್ಕಳು ದಾಖಲಾತಿ ಪಡೆದಿದ್ದರು.

[14] ಈ ಲೇಖನವು ವಿಮಲಾ ರಾಮಚಂದ್ರನ್, ದೀಪಾ ದಾಸ್, ಗಣೇಶ್ ನಿಗಮ್ ಮತ್ತು ಅಂಜಲಿ ಶಾಂಡಿಲ್ಯ ಅವರು 2020 ರಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು ಇವರ ಬೆಂಬಲದೊಂದಿಗೆ ಕೈಗೊಂಡ, 'ಭಾರತದಲ್ಲಿ ಗುತ್ತಿಗೆ ಶಿಕ್ಷಕರು-ಪ್ರಸ್ತುತ ಸ್ಥಿತಿಗತಿ ಸಮಸ್ಯೆಗಳು ಮತ್ತು ಸವಾಲುಗಳು' ಎಂಬ ಅಧ್ಯಯನದ ಪೂರ್ಣ ವರದಿಯನ್ನು ಆಧರಿಸಿದೆ. https://azimpremjiuniversity.edu.in/SitePages/pdf/ContractTeachersReport.pdf

- ಶೇ. 79.2 ರಷ್ಟು 'ಚಿಕ್ಕ ಶಾಲೆಗಳಲ್ಲಿ' ಎಲ್ಲ ಶಿಕ್ಷಕರೂ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಹೊಂದಿರುವವರಾಗಿದ್ದು, ಇದರಿಂದಾಗಿ ಆ ಶಾಲೆಗಳು ಅತ್ಯಂತ ಹಿಂದುಳಿದ ಶಾಲೆಗಳ ಪಟ್ಟಿಗೆ ಸೇರುವಂತಾಗಿದೆ.
- ಗುತ್ತಿಗೆ ಆಧಾರಿತ ಶಿಕ್ಷಕರಿರುವ ಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿದ್ದು ಶೇ 95.83 ರಷ್ಟು ಮಕ್ಕಳು ದಾಖಲಾತಿ ಪಡೆಯುವುದು ಹೆಚ್ಚಾಗಿ ಈ ಭಾಗಗಳಲ್ಲಿಯೇ ಕಂಡುಬರುತ್ತದೆ.
- ಕಾರ್ಮಿಕ ಸಚಿವಾಲಯ (ಬಾಲ ಕಾರ್ಮಿಕರು) ಹಾಗೂ ಸಮಾಜ ಕಲ್ಯಾಣ ಇಲಾಖೆಗಳು ಅತಿ ಹೆಚ್ಚು ವಂಚಿತ ಮಕ್ಕಳಿಗೆಂದೇ ನಡೆಸುವ ಶಾಲೆಗಳಲ್ಲಿ ಅನುಕ್ರಮವಾಗಿ ಶೇ. 41.6 ಮತ್ತು ಶೇ. 22.5 ಶಿಕ್ಷಕರು ಗುತ್ತಿಗೆ ಆಧಾರಿತ ಶಿಕ್ಷಕರಾಗಿದ್ದಾರೆ.
- ಹಲವಾರು ರಾಜ್ಯಗಳಲ್ಲಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಪ್ರಮಾಣಿತ ಮಾನದಂಡಗಳು ಕಳಪೆ ಗುಣಮಟ್ಟದ್ದಾಗಿವೆ ಎನ್ನುವುದು ನೇರವಾಗಿಯೇ ಕಂಡುಬರುತ್ತದೆ. ವಿಶೇಷವಾಗಿ, ವಿಷಯ ಬೋಧಕರಿಗೆ ಸಂಬಂಧಿಸಿದಂತೆ ಶಿಕ್ಷಕರ ಹುದ್ದೆಗಳು ಖಾಲಿಬಿದ್ದಿದ್ದು ಅದರ ಜೊತೆಜೊತೆಗೇ ವ್ಯವಸ್ಥೆಯಲ್ಲಿ ಶಿಕ್ಷಕರ ಸಂಖ್ಯೆಯಲ್ಲಿಯೂ ಹೆಚ್ಚಳ ಕಂಡುಬರುತ್ತಿದೆ.
- 2017-18 ರಲ್ಲಿ ಶೇ. 30 ರಷ್ಟು ಗುತ್ತಿಗೆ ಆಧಾರಿತ ಶಿಕ್ಷಕರು ಯಾವುದೇ ವೃತ್ತಿಪರ ಅರ್ಹತೆಗಳನ್ನು ಹೊಂದಿರಲಿಲ್ಲ. ದೇಶದಲ್ಲಿನ ಗುತ್ತಿಗೆ ಆಧಾರಿತ ಶಿಕ್ಷಕರಲ್ಲಿ ಕೇವಲ ಶೇ. 22.9 ಶಿಕ್ಷಕರಿಗೆ ಮಾತ್ರ ಸೇವಾನಿರತ ತರಬೇತಿಯ ಮೂಲಕ ವೃತ್ತಿಪರ ಅಭಿವೃದ್ಧಿಯ ಅವಕಾಶ ದೊರೆತಿತ್ತು.

ಗುತ್ತಿಗೆ ಆಧಾರಿತ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವು ಒಟ್ಟಾರೆ ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಪರಿಣಾಮಕಾರಿತ್ವದ ಮೇಲೆ ಆಳವಾದ ಹಾಗೂ ಹಾನಿಕಾರಕ ಪರಿಣಾಮವನ್ನುಂಟುಮಾಡುತ್ತದೆ ಎನ್ನುವುದನ್ನು ಅಧ್ಯಯನವು ಸ್ಪಷ್ಟವಾಗಿ ತೋರಿಸುತ್ತದೆ. ಆದ್ದರಿಂದ ಇದು ಕೊನೆಗೊಳ್ಳಲೇಬೇಕು. ಇದರ ಬದಲಾಗಿ, ವ್ಯವಸ್ಥೆಯಲ್ಲಿರುವ ಎಲ್ಲ ಶಿಕ್ಷಕರಿಗೂ ಅನ್ವಯವಾಗುವಂತೆ ಸಮಗ್ರ ರೀತಿಯಲ್ಲಿ ವಿನ್ಯಾಸಗೊಳಿಸಿದ ಶಿಕ್ಷಕ ನೇಮಕಾತಿ ಹಾಗೂ ಸೇವಾವಧಿ ವ್ಯವಸ್ಥೆಯನ್ನು ತರಬೇಕೆಂದು 2019 ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಮೇಲೆ ವರದಿ ಸಲ್ಲಿಸಿದ ಕಸ್ತೂರಿರಂಗನ್ ಕರಡು ಸಮಿತಿ ಹಾಗೂ 2020 ರ ರಾಷ್ಟ್ರೀಯ ಶಿಕ್ಷಣ ನೀತಿಗಳೆರಡೂ ಸಲಹೆ ನೀಡಿವೆ.

## 1. ಗುತ್ತಿಗೆ ಆಧಾರಿತ ಶಿಕ್ಷಕರ ಉಗಮ

ಸ್ವತಂತ್ರ ಭಾರತದ ಎಲ್ಲಾ ಶಿಕ್ಷಣ ನೀತಿಗಳೂ - 1968[15], 1986[16] ಹಾಗೂ 2020 ರ ರಾಷ್ಟ್ರೀಯ ಶಿಕ್ಷಣ ನೀತಿ (NEP)[17] -ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷಕರ ಪಾತ್ರದ ಪ್ರಾಮುಖ್ಯವನ್ನು ಒತ್ತಿ ಹೇಳುತ್ತವೆ. ಆದರೆ ಈ ಮೂರೂ ನೀತಿಗಳೂ 'ಗುತ್ತಿಗೆ ಆಧಾರಿತ ಶಿಕ್ಷಕರು' ಅಥವಾ 'ಅರೆ ಶಿಕ್ಷಕ' ರನ್ನು ಕುರಿತಂತೆ ಉಲ್ಲೇಖಿಸದಿರುವುದು ಕುತೂಹಲಕಾರಿಯಾಗಿದೆ. ಜೊತೆಗೆ, ನಿರ್ದಿಷ್ಟ ಉದ್ದೇಶಗಳಿಗಾಗಿ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದನ್ನು ಅಥವಾ ಸಾಮಾನ್ಯ ಶಿಕ್ಷಕರ ಪಾತ್ರವನ್ನು ನಿರ್ವಹಿಸಲು ಗುತ್ತಿಗೆ ಆಧಾರಿತ ಶಿಕ್ಷಕರನ್ನು ನೇಮಕಾತಿ ಮಾಡುವುದನ್ನು ದೃಢೀಕರಿಸುವ ಯಾವುದೇ ನೀತಿನಿಯಮಗಳಿರುವುದಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಗುತ್ತಿಗೆ ಆಧಾರಿತ/ ಅರೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವು 1990 ರ ದಶಕದಲ್ಲಿ ನುಸುಳಿಕೊಂಡಿತು. 1987 ರಲ್ಲಿ ರಾಜಸ್ತಾನದಲ್ಲಿ ಶಿಕ್ಷಣ ಕರ್ಮಿ ಕಾರ್ಯಕ್ರಮವನ್ನು (ಶಿಕ್ಷಾ ಕರ್ಮಿ ಪ್ರೊಗ್ರಾಮ್- SKP) ಹಮ್ಮಿಕೊಳ್ಳಲಾಗಿತ್ತು. ಇದು ಶಿಕ್ಷಕರ ಕೊರತೆಯಿರುವ ಶಾಲೆಗಳಲ್ಲಿ ಸಮುದಾಯ ಶಿಕ್ಷಕರನ್ನು ನಿಯೋಜಿಸಿತು. ಇದರ ಅನುಭವದ ಆಧಾರದ ಮೇಲೆ ಒಡಿಶಾದಂತಹ ರಾಜ್ಯಗಳು ಶಿಕ್ಷಕರ ತೀವ್ರ ಕೊರತೆಯನ್ನು ನೀಗಿಸಲು ಈ ಮಾದರಿಯನ್ನು ಅಳವಡಿಸಿಕೊಂಡವು. 1994 ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು (DPEP) ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವನ್ನು ವಿಸ್ತರಿಸಿತು. ಗುತ್ತಿಗೆ ಆಧಾರಿತ ಶಿಕ್ಷಕರಿಗೆ ಹಣಕಾಸಿನ ಸೌಲಭ್ಯವನ್ನು ಒದಗಿಸುವ ಮೂಲಕ ಈ ಪರಿಪಾಠವು ಸರ್ವ ಶಿಕ್ಷಣ ಅಭಿಯಾನ (SSA) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (RMSA) ಹಾಗೂ ಸಮಗ್ರ ಶಿಕ್ಷಣ (SS) ಗಳಡಿಯಲ್ಲಿಯೂ ಮುಂದುವರೆಯಿತು. ಇದರಿಂದಾಗಿ, ನೇಮಕಾತಿ ಪ್ರಕ್ರಿಯೆಗಳು, ಸೇವಾ ನಿಯಮಗಳು, ಸೇವಾವಧಿ ಹಾಗೂ ವೇತನಗಳಲ್ಲಿ ಅಸಮಾನತೆ ಕಂಡುಬರತೊಡಗಿತು.

ತುಂಬಾ ಸರಳವಾದ ನೇಮಕಾತಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಬಲ್ಲ ತತ್‌ಕ್ಷಣದ ಕ್ರಮವಾಗಿರುವ ಕಾರಣ, ಗುತ್ತಿಗೆ ಆಧಾರಿತ ಶಿಕ್ಷಕರ ನೇಮಕಾತಿಯು ಜನಪ್ರಿಯವಾಯಿತು. ಶಿಕ್ಷಕರ ಹುದ್ದೆಗೆ ಮಂಜೂರಾತಿ ಪಡೆಯುವಂತಹ ಪ್ರಯಾಸಕರ ಪ್ರಕ್ರಿಯೆಯೂ ಬೇಕಾಗಿರಲಿಲ್ಲ ಮತ್ತು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಮೇಲೆ ಇದು ಆರ್ಥಿಕ ಹೊರೆಯನ್ನೂ ಹೊರಿಸುತ್ತಿರಲಿಲ್ಲ.

ಪರಿಣಾಮವಾಗಿ, ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು ನಿರಂತರವಾಗಿ ಏರುತ್ತಲೇ ಹೋಯಿತು. 2010-11 ರಲ್ಲಿ ಪ್ರಾಥಮಿಕ ಮಟ್ಟದಲ್ಲಿ 3,16,091 ರಷ್ಟಿದ್ದ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು 2017-18 ರ ಹೊತ್ತಿಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟಗಳೆರಡೂ ಸೇರಿ 6,32,316 ನ್ನು ತಲುಪಿತು (UDISE, ವಿವಿಧ ವರ್ಷಗಳು)2009 ರಲ್ಲಿ ಜಾರಿಗೆ ಬಂದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯು (RTE) ವಿದ್ಯಾರ್ಥಿ-ಶಿಕ್ಷಕ ಅನುಪಾತದ (PTR) ನಿಯಮಗಳನ್ನು ಸ್ಪಷ್ಟವಾಗಿ ನಿರ್ದೇಶಿಸಿತು.

---

[15] 1968 ರ ನೀತಿ [ಪರಿಚ್ಛೇದ 4 (2)] "ಶಿಕ್ಷಣದ ಗುಣಮಟ್ಟ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಅದರ ಕೊಡುಗೆಯನ್ನು ನಿರ್ಧರಿಸುವ ಸಂಗತಿಗಳಲ್ಲಿಯೇ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾದುದು ಎನ್ನುವುದು ನಿಸ್ಸಂದೇಹ..ಅವರ ವೇತನಗಳು ಹಾಗೂ ಇತರ ಸೇವಾ ಸ್ಥಿತಿಗತಿಗಳು ಸಾಕಷ್ಟು ಪ್ರಮಾಣ ಹಾಗೂ ಸಮಾಧಾನಕರವಾಗಿದ್ದು ಅವರ ಶೈಕ್ಷಣಿಕ ಅರ್ಹತೆ ಮತ್ತು ಜವಾಬ್ದಾರಿಗಳನ್ನು ಪರಿಗಣನೆಗೆ ತೆಗೆದುಕೊಂಡಿರಬೇಕು." (NPE 1968, GOI).

[16] 1986 ರ ನೀತಿಯು ಹೇಳುವಂತೆ, "ಶಿಕ್ಷಕರ ಸ್ಥಾನಮಾನವು ಸಮಾಜದ ಸಾಮಾಜಿಕ- ಸಾಂಸ್ಕೃತಿಕ ಅಂತರಾತ್ಮವನ್ನು ಪ್ರತಿಬಿಂಬಿಸುತ್ತದೆ; ಶಿಕ್ಷಕರಿಗಿಂತ ಮೇಲೆ ಯಾರೂ ಏರಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತದೆ.. ಶಿಕ್ಷಕರ ವೇತನ ಹಾಗೂ ಸೇವಾ ಸ್ಥಿತಿಗತಿಗಳು ಅವರ ಸಾಮಾಜಿಕ ಹಾಗೂ ವೃತ್ತಿಗೆ ಸಂಬಂಧಿಸಿದ ಜವಾಬ್ದಾರಿಗಳಿಗೆ ತಕ್ಕದ್ದಾಗಿರಬೇಕು ಮತ್ತು ಆ ವೃತ್ತಿಗೆ ಇನ್ನಷ್ಟು ಪ್ರತಿಭೆಗಳನ್ನು ಆಕರ್ಷಿಸುವಂತದ್ದಾಗಿರಬೇಕು." [1992 ರಲ್ಲಿ ತಿದ್ದುಪಡಿಯಾದ NPE 1986 ರ ಅನುಚ್ಛೇದ 9.1 ಹಾಗೂ 9.2, MRHD, GOI]

[17] NEP 2020 : ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಭೂತ ಸುದಾರಣೆಗಳನ್ನು ತರುವಾಗ ಶಿಕ್ಷಕರು ಕೇಂದ್ರಸ್ಥಾನದಲ್ಲಿರಬೇಕು. ಹೊಸ ಶಿಕ್ಷಣ ನೀತಿಯು ನಮ್ಮ ಸಮಾಜದ ಅತ್ಯಂತ ಗೌರವಯುತ ಹಾಗೂ ಅತ್ಯಗತ್ಯ ಸದಸ್ಯರಾದ ಶಿಕ್ಷಕರನ್ನು ಎಲ್ಲಾ ಮಟ್ಟದಲ್ಲಿಯೂ ಮರುಸ್ಥಾಪಿಸಬೇಕು ಏಕೆಂದರೆ, ನಮ್ಮ ಪ್ರಜೆಗಳ ಮುಂದಿನ ತಲೆಮಾರನ್ನು ನಿಜಕ್ಕೂ ರೂಪಿಸುವವರು ಅವರೇ. (ಪು.3, NEP 2020) 2020 ರ ಹೊಸ ಶಿಕ್ಷಣ ನೀತಿಯ ಪ್ರಕಾರ, ಒಟ್ಟಾರೆ ಶಿಕ್ಷಣ ವ್ಯವಸ್ಥೆ ಹಾಗೂ ಅದರೊಳಗಿನ ಪ್ರತ್ಯೇಕ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವ ಮೂಲಭೂತ ತತ್ತ್ವಗಳಲ್ಲಿ ಒಂದೆಂದರೆ, ಶಿಕ್ಷಕರು ಹಾಗೂ ಬೋಧಕವರ್ಗ ಅಂದರೆ ಅವರ ನೇಮಕಾತಿ, ನಿರಂತರ ವೃತ್ತಿಪರ ಅಭಿವೃದ್ಧಿ, ಧನಾತ್ಮಕ ಕಾರ್ಯಪರಿಸರ ಹಾಗೂ ಸೇವಾ ಸ್ಥಿತಿಗತಿ ಇತ್ಯಾದಿಗಳು ಕಲಿಕಾ ಪ್ರಕ್ರಿಯೆಯ ಕೇಂದ್ರ ಭಾಗದಲ್ಲಿರುವುದು.(ಪು.5)

ಇದನ್ನು ಕಠಿಣ ರೀತಿಯಲ್ಲಿ ಮೇಲ್ವಿಚಾರಣೆ ಮಾಡಬೇಕಾದ ಸನ್ನಿವೇಶವು ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದಕ್ಕೆ ಕಾರಣವಾಯಿತು. ಏಕೆಂದರೆ, ಅವರನ್ನು ಯಾವುದೇ ದೀರ್ಘಕಾಲೀನ ಆರ್ಥಿಕ ಹೊರೆಯಿಲ್ಲದೇ ಸುಲಭವಾಗಿ ನಿಯೋಜಿಸಬಹುದಿತ್ತು. ಹಾಗಿದ್ದರೂ 2010 ರಲ್ಲಿ ಶಿಕ್ಷಕ ಶಿಕ್ಷಣ ಕುರಿತಾದ ರಾಷ್ಟ್ರೀಯ ಸಮಿತಿಯು (NCTE) ನಿಗದಿಪಡಿಸಿದ ಪ್ರವೇಶ ನಿಯಮಗಳು ಕೇವಲ ಮೂಲಭೂತ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವವರನ್ನು ಹಾಗೂ/ ಅಥವಾ ಶಿಕ್ಷಕ ಅರ್ಹತಾ ಪರೀಕ್ಷೆಯಲ್ಲಿ (TET) ತೇರ್ಗಡೆಯಾದವರನ್ನಷ್ಟೇ ನೇಮಿಸಿಕೊಳ್ಳುವ ಪ್ರಯತ್ನಗಳಾಗಿದ್ದವು ಎನ್ನುವುದನ್ನು ಹೇಳಲೇಬೇಕು.

ಶಾಲೆಗಳು ಅರೆಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳುತ್ತವೆ ಎನ್ನುವುದು UDISE ದತ್ತಾಂಶಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.  ಶಿಕ್ಷಕ ಕಾರ್ಯಪಡೆಯನ್ನು ಕುರಿತಾಗಿ ಒಂಬತ್ತು ರಾಜ್ಯಗಳಲ್ಲಿ ಒಂದು ಅಧ್ಯಯನವನ್ನು (ರಾಮಚಂದ್ರನ್ ಮತ್ತು ಇತರರು, 2018) ಕೈಗೊಳ್ಳಲಾಯಿತು.  ಅವುಗಳಲ್ಲಿನ ಬಹುತೇಕ ರಾಜ್ಯಗಳಲ್ಲಿ ದೈಹಿಕ ಶಿಕ್ಷಣ, ಕಲೆ ಮತ್ತು ಕುಶಲಕಲೆ, ಸಂಗೀತ ಹಾಗೂ ವೃತ್ತಿಶಿಕ್ಷಣದಂತಹ ವಿಷಯಗಳಿಗಾಗಿ ಅರೆಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತದೆ ಎನ್ನುವುದನ್ನು ಅಧ್ಯಯನವು ತೋರಿಸುತ್ತದೆ. ವಿಷಯ ಬೋಧಕರ, ವಿಶೇಷವಾಗಿ ಗಣಿತ, ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಕರ ಕೊರತೆಯಿರುವ ರಾಜ್ಯಗಳು/ ಜಿಲ್ಲೆಗಳು  ಪ್ರೌಢಶಾಲೆ ಮತ್ತು ಉನ್ನತ ಪ್ರೌಢ ಶಾಲೆಗಳಿಗಾಗಿ  ನಿವೃತ್ತ  ಶಿಕ್ಷಕರನ್ನು ಹಾಗೂ ಅರ್ಹ ವ್ಯಕ್ತಿಗಳನ್ನು ಅರೆಕಾಲಿಕ ಆಧಾರದ ಮೇಲೆ ನೇಮಿಸಿಕೊಳ್ಳುತ್ತವೆ. (ರಾಮಚಂದ್ರನ್ ಮತ್ತು ಇತರರು 2018)

2019-20 ರಲ್ಲಿ ಸಮಗ್ರ ಶಿಕ್ಷಣ ಕುರಿತಾದ ಕಾರ್ಯಯೋಜನೆ ಅನುಮೋದನಾ ಮಂಡಳಿಯು (MHRD, GOI) ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (KGBV), ವಸತಿ ಶಾಲೆಗಳು/ವಸತಿನಿಲಯಗಳು ಹಾಗೂ ವೃತ್ತಿಶಿಕ್ಷಣಗಳಿಗಾಗಿ 66,463 ಶಿಕ್ಷಕರ ನೇಮಕಾತಿಗೆ ಮಂಜೂರಾತಿ ನೀಡಿತು. ಜೊತೆಗೆ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT), ಡಿಜಿಟಲ್ ಉಪಕ್ರಮಗಳು, ಕ್ರೀಡೆ ಹಾಗೂ ದೈಹಿಕ ಶಿಕ್ಷಣ, ಸಮರ ಕಲೆಗಳು ಮತ್ತು ಸ್ವರಕ್ಷಣೆಯಲ್ಲಿ ತರಬೇತಿ ಹಾಗೂ ವಿಶೇಷ ತರಬೇತಿಗಳಿಗಾಗಿಯೂ ಮಂಜೂರಾತಿ ನೀಡಲಾಯಿತು. ಇವೆಲ್ಲವೂ ಗುತ್ತಿಗೆ ಆಧಾರಿತ ಶಿಕ್ಷಕರನ್ನು ತೊಡಗಿಸಿಕೊಳ್ಳುವುದಕ್ಕೆ ಉತ್ತೇಜನ ನೀಡುವಂತದ್ದೇ. ಏಕಮೊತ್ತದ ಹಣಕಾಸಿನ ಒಂದು ಭಾಗವನ್ನು (ಸಾಮಾನ್ಯವಾಗಿ ಪ್ರತಿ ಶಾಲೆಗೆ ನಿಗದಿ ಪಡಿಸಿದ ಪ್ರಮಾಣದಲ್ಲಿ ಹಂಚುವ) ಅರೆಕಾಲಿಕ ಶಿಕ್ಷಕರು/ಬೋಧಕರ ಸೇವೆಯನ್ನು ಪಡೆದುಕೊಳ್ಳಲು ಬಳಸಲಾಗಿದೆ.

ಈ ಪ್ರಬಂಧವು, ಶಿಕ್ಷಣದ ರೀತಿ ಮತ್ತು ಹಂತ, ಗ್ರಾಮೀಣ/ನಗರ ಪ್ರದೇಶಗಳು, ಲಿಂಗಾಧಾರಿತ ವಿಂಗಡಣೆ ಅವರ ವೃತ್ತಿಪರ ಅರ್ಹತೆ, ಅವರ ವೃತ್ತಿಪರ ಅಭಿವೃದ್ಧಿಗೆ ಇರುವ ಅವಕಾಶಗಳು/ಸೇವಾನಿರತ ತರಬೇತಿ ಹಾಗೂ ಶಾಲೆಗಳಲ್ಲಿ ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುವುದರಿಂದ ಉದ್ಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಚರ್ಚಿಸುವುದರ ಮೂಲಕ ಸಾರ್ವಜನಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಶಿಕ್ಷಕರ ಪ್ರಸ್ತುತ ಸ್ಥಾನಮಾನದ ಚಿತ್ರಣವನ್ನು ನೀಡಲು ಪ್ರಯತ್ನಿಸುತ್ತದೆ. ಇದು ಆನುಷಂಗಿಕ ಸಂಪನ್ಮೂಲಗಳನ್ನು, ಮುಖ್ಯವಾಗಿ UDISE ಮತ್ತು ಸಮಗ್ರ ಶಿಕ್ಷಣ ಕುರಿತಾದ ಕಾರ್ಯಯೋಜನೆ ಅನುಮೋದನಾ ಮಂಡಳಿಯ ನಡಾವಳಿ, ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳಂತಹ ಸರ್ಕಾರೀ ದತ್ತಾಂಶಗಳನ್ನು (ಅಂಕಿ-ಅಂಶಗಳನ್ನು) ಆಧರಿಸಿದೆ. ವಿಶ್ಲೇಷಣೆಯು 2019 ರ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಾಗಿ ರಚಿಸಲಾಗಿದ್ದ ಕಸ್ತೂರಿರಂಗನ್ ಕರಡು ಸಮಿತಿಯ ವರದಿ ಹಾಗೂ ಇತ್ತೀಚೆಗೆ ಘೋಷಿಸಲಾದ 2020 ರ ಹೊಸ ಶಿಕ್ಷಣ ನೀತಿಗಳೆರಡಲ್ಲಿಯೂ ಸ್ಪಷ್ಟಪಡಿಸಿದಂತೆ ಶಿಕ್ಷಕರ ನೇಮಕಾತಿ, ಸೇವಾ ನಿಯಮಗಳು, ಅರ್ಹ ಸವಲತ್ತುಗಳು ಹಾಗೂ ವೃತ್ತಿಪರ ಬೆಳವಣಿಗೆಯ ಅವಕಾಶಗಳನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಸರ್ಕಾರಗಳು ಯಾವ ಕ್ಷೇತ್ರದಲ್ಲಿ ಕ್ರಮ ಕೈಗೊಳ್ಳಬೇಕಿದೆ ಎನ್ನುವುದನ್ನು ಗಮನಕ್ಕೆ ತರುವುದೆಂದು ನಿರೀಕ್ಷಿಸಲಾಗಿದೆ.

2. ಖಾಲಿಯಿರುವ ಶಿಕ್ಷಕ ಹುದ್ದೆಗಳು ಹಾಗೂ ವಿಷಯಧಾರಿತಶಿಕ್ಷಕರು ಲಭ್ಯವಿಲ್ಲದಿರುವುದು

ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಅಗತ್ಯಕ್ಕೆ ಖಾಲಿಯಿರುವ ಶಿಕ್ಷಕ ಹುದ್ದೆಗಳು ಹಾಗೂ ಗಮನಾರ್ಹವಾಗಿ ಬದಲಾಗಿರುವ ವಿದ್ಯಾರ್ಥಿ-ಶಿಕ್ಷಕ ಅನುಪಾತದೊಡನೆ ಸಂಬಂಧವಿದೆ. 2018-19 ರಲ್ಲಿ ಒಟ್ಟು ಮಂಜೂರಾದ ಶಿಕ್ಷಕ ಹುದ್ದೆಗಳಲ್ಲಿ ಶೇ. 11.7 ಹುದ್ದೆಗಳು ಖಾಲಿಯಿದ್ದವು (ಕೋಷ್ಟಕ 1). ಸಮಗ್ರ ಶಿಕ್ಷಣದಡಿ ಇದ್ದ 1,764,956 ಶಿಕ್ಷಕ ಹುದ್ದೆಗಳಲ್ಲಿ ಶೇ.19.1 ಹುದ್ದೆಗಳು ಖಾಲಿಯಿದ್ದವು ಹಾಗೂ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಡಿಯಲ್ಲಿ ಇದ್ದ ಶಿಕ್ಷಕ ಹುದ್ದೆಗಳಲ್ಲಿ ಶೇ. 8.8 ಹುದ್ದೆಗಳು[18] ಖಾಲಿಯಿದ್ದವು. ಬಿಹಾರ (1,26,740 ಅಂದರೆ ಶೇ.31.5), ಛತ್ತೀಸ್‌ಗಡ್ (38,039 ಅಂದರೆ ಶೇ.71.8), ಜಾರ್ಖಂಡ್ (56,299 ಅಂದರೆ ಶೇ.45.9), ಮಧ್ಯಪ್ರದೇಶ (34,556 ಅಂದರೆ ಶೇ.19.3), ಪಂಜಾಬ್ (1,049 ಅಂದರೆ ಶೇ. 9.8), ರಾಜಸ್ತಾನ (13,334 ಅಂದರೆ ಶೇ. 10.9), ಉತ್ತರ ಪ್ರದೇಶ (1,33,911 ಅಂದರೆ ಶೇ. 53.5) ಹಾಗೂ ಪಶ್ಚಿಮ ಬಂಗಾಳ (32,861 ಅಂದರೆ ಶೇ.16.4) ದಂತಹ ರಾಜ್ಯಗಳಲ್ಲಿ ಸಮಗ್ರ ಶಿಕ್ಷಣದಡಿ ಮಂಜೂರಾದ ಶಿಕ್ಷಕ ಹುದ್ದೆಗಳಲ್ಲಿ ಬಹಳಷ್ಟು ಸಂಖ್ಯೆಯ ಹುದ್ದೆಗಳು ಖಾಲಿ ಬಿದ್ದಿದ್ದವು ಮತ್ತು ಹಾಗೆ ಖಾಲಿ ಬಿದ್ದ ಶಿಕ್ಷಕ ಹುದ್ದೆಯ ಪ್ರಮಾಣ/ಅನುಪಾತವೂ ಹೆಚ್ಚಿನದಾಗಿತ್ತು. ಇದಕ್ಕೆ ಕಾರಣಗಳು ರಾಜ್ಯದಿಂದ ರಾಜ್ಯಕ್ಕೆ ಬೇರೆ ಬೇರೆಯಾಗಿವೆ. ಆದರೆ ಸಮಗ್ರ ಶಿಕ್ಷಣದಡಿಯಲ್ಲಿ ಮಂಜೂರಾದ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡುವ ವಿಷಯದಲ್ಲಿ ಅವು ಹೊಂದಿರುವ ಸಾಮರ್ಥ್ಯವನ್ನು ನಿರ್ಧರಿಸುವ ಸಂಗತಿಯೆಂದರೆ ಅವುಗಳ ಹಣಕಾಸಿನ ಸ್ಥಿತಿಗತಿ. ಸಮಗ್ರ ಶಿಕ್ಷಣದ ಮುಚ್ಚುವಿಕೆಯು ಒಟ್ಟಾರೆ ಶಿಕ್ಷಕರ ವೇತನದ ಹೊರೆಯನ್ನು ರಾಜ್ಯದ ಬೊಕ್ಕಸಕ್ಕೆ ವರ್ಗಾಯಿಸುತ್ತದೆ ಎಂದು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ವಾದಿಸುತ್ತವೆ. ಇಂತಹದೊಂದು ಸಂದರ್ಭವನ್ನು ತಪ್ಪಿಸುವುದಕ್ಕಾಗಿ ಬಹುಶಃ ಅವು ಸಮಗ್ರ ಶಿಕ್ಷಣದಡಿ ದೊರಕುವ ಹಣಕಾಸಿನ ಸೌಲಭ್ಯವನ್ನು ಬಳಸಿಕೊಂಡು ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳಲು ಪ್ರೇರೇಪಿತವಾಗಿರಬಹುದು. ಜೊತೆಗೆ, ಸಮಗ್ರ ಶಿಕ್ಷಣದಡಿ ನೇಮಿಸಿಕೊಂಡ ಶಿಕ್ಷಕರನ್ನು ಕಾಲಾನಂತರದಲ್ಲಿ ಕ್ರಮಬದ್ಧಗೊಳಿಸಲು ಮನಸ್ಸು ಮಾಡದಿರಬಹುದು. ಶಿಕ್ಷಕರನ್ನು ಗುತ್ತಿಗೆ ಅಧಾರದ ಮೇಲೆ ನೇಮಿಸಿಕೊಳ್ಳುವುದಕ್ಕೆ ರಾಜ್ಯ-ನಿರ್ದಿಷ್ಟವಾದ ಹಲವಾರು ಕಾರಣಗಳಿವೆ ಎಂಬುದನ್ನು ಶಿಕ್ಷಕ ಕಾರ್ಯಪಡೆಯ ಅಧ್ಯಯನವು (ರಾಮಚಂದ್ರನ್ ಮತ್ತು ಇತರರು, 2018) ಗುರುತಿಸಿತು. ಉದಾಹರಣೆಗೆ, ನ್ಯಾಯಾಲಯದಲ್ಲಿ ಸಿಕ್ಕಿಹಾಕಿಕೊಂಡಿರುವ ನೇಮಕಾತಿ ಪ್ರಕ್ರಿಯೆಗಳು, ನೇಮಕಾತಿ ಪ್ರಕ್ರಿಯೆಗಳನ್ನು ಶೀಘ್ರಗತಿಯಲ್ಲಿ ಪೂರೈಸುವುದಕ್ಕಾಗಿ ರಾಜ್ಯ ಸರ್ಕಾರಗಳಲ್ಲಿರುವ ಕ್ರಿಯಾತ್ಮಕ ಪ್ರಯತ್ನಗಳ ಕೊರತೆ ಮತ್ತು ನಿರಾಸಕ್ತಿ ಇತ್ಯಾದಿ.

ಕೋಷ್ಟಕ 1. *ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ಪ್ರಾಥಮಿಕ ಶಿಕ್ಷಕರ ಸ್ಥಾನಮಾನ/ಸ್ಥಿತಿಗತಿ 2018-19*

| ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು | ಮಂಜೂರಾದ ಹುದ್ದೆಗಳು | | | ಕಾರ್ಯನಿರ್ವಹಿಸುತ್ತಿರುವವರು | | | ಖಾಲಿಹುದ್ದೆಗಳು | | |
|---|---|---|---|---|---|---|---|---|---|
| | ರಾಜ್ಯದಿಂದ | ಸಮಗ್ರ ಶಿಕ್ಷಣದಡಿ | ಒಟ್ಟು | ರಾಜ್ಯದಿಂದ | ಸಮಗ್ರ ಶಿಕ್ಷಣದಡಿ | ಒಟ್ಟು | ರಾಜ್ಯದಿಂದ | ಸಮಗ್ರ ಶಿಕ್ಷಣದಡಿ | ಒಟ್ಟು |
| ಅಂಡಮಾನ್ &ನಿಕೋಬಾರ್ ದ್ವೀಪಗಳು | 2,963 | 206 | 3,169 | 2,540 | 150 | 2,690 | 423 | 56 | 479 |

[18] ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಮತ್ತು ಸಮಗ್ರ ಶಿಕ್ಷಣದಡಿ ಬರುವ ಹುದ್ದೆಗಳ ಮಾದರಿಯು ಒಂದೇ ರೀತಿಯದು. ಆದರೆ ಹಣಕಾಸಿನ ಮೂಲಗಳು ಮಾತ್ರ ಬೇರೆ ಬೇರೆ. ಅಂದರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹಣಕಾಸಿನ ಹೊಣೆಯನ್ನು ಹೊತ್ತಿರುತ್ತವೆ ಅಥವಾ ಸಮಗ್ರ ಶಿಕ್ಷಣದಡಿ ಹಣಕಾಸಿನ ಸೌಲಭ್ಯವನ್ನು ನೀಡಲಾಗುತ್ತದೆ.

| | | | | | | | | | |
|---|---|---|---|---|---|---|---|---|---|
| ಆಂಧ್ರ ಪ್ರದೇಶ | 89,287 | 24,353 | 113640 | 78,672 | 24,353 | 103025 | 10,615 | 0 | 10,615 |
| ಅರುಣಾಚಲ ಪ್ರದೇಶ | 6,717 | 7,342 | 14,059 | 6,717 | 6,850 | 13,567 | 0 | 492 | 492 |
| ಅಸ್ಸಾಮ್ | 136,753 | 45,686 | 182439 | 1,27,118 | 32,469 | 159587 | 9,635 | 13,217 | 22,852 |
| ಬಿಹಾರ್ | 190,497 | 402,044 | 595541 | 1,04,431 | 275304 | 379735 | 86,064 | 126740 | 212806 |
| ಚಂಡೀಗಢ್ | 2,894 | 1,390 | 4,284 | 2,462 | 1,390 | 3,852 | 432 | 0 | 432 |
| ಛತ್ತೀಸ್‌ಗಢ್ | 110,782 | 52,946 | 163728 | 110229 | 14,907 | 125136 | 553 | 38,039 | 38,592 |
| ದಮನ್& ದಿಯು | 483 | 118 | 601 | 267 | 118 | 385 | 216 | 0 | 216 |
| ದಿಲ್ಲಿ** | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ |
| ದಾದ್ರ ಮತ್ತು ನಗರ ಹವೇಲಿ | 858 | 946 | 1,804 | 766 | 877 | 1,643 | 92 | 69 | 161 |
| ಗೋವಾ | 2,037 | 179 | 2,216 | 2,037 | 179 | 2,216 | 0 | 0 | 0 |
| ಗುಜರಾತ್ | 163,418 | 53,688 | 217106 | 163418 | 49,469 | 212887 | 0 | 4,219 | 4,219 |
| ಹರಿಯಾಣ | 52,696 | 13,435 | 66,131 | 50,493 | 13,435 | 63,928 | 2,203 | 0 | 2,203 |
| ಹಿಮಾಚಲ ಪ್ರದೇಶ | 40,441 | 5,556 | 45,997 | 38,446 | 5,556 | 44,002 | 1,995 | 0 | 1,995 |
| ಜಮ್ಮು ಮತ್ತು ಕಾಶ್ಮೀರ | 57,830 | 43,471 | 101,301 | 52,816 | 41,343 | 94,159 | 5,014 | 2,128 | 7,142 |
| ಜಾರ್ಖಂಡ್ | 64,187 | 122,678 | 186865 | 50,190 | 66,379 | 116569 | 13,997 | 56,299 | 70,296 |
| ಕರ್ನಾಟಕ | 153,726 | 29,057 | 182783 | 151290 | 19,719 | 171009 | 2,436 | 9,338 | 11,774 |
| ಕೇರಳ | 123,457 | 2,925 | 126382 | 123457 | 1,554 | 125011 | 0 | 1,371 | 1,371 |
| ಲಕ್ಷದ್ವೀಪ | 699 | 32 | 731 | 649 | 32 | 681 | 50 | 0 | 50 |
| ಮಧ್ಯಪ್ರದೇಶ | 184,171 | 178,928 | 363099 | 144372 | 144372 | 288744 | 39,799 | 34,556 | 74,355 |
| ಮಹಾರಾಷ್ಟ್ರ | 309,414 | 15,387 | 324801 | 285851 | 15,387 | 301238 | - | - | - |
| ಮಣಿಪುರ | 12,963 | 3,235 | 16,198 | 12,963 | 2,889 | 15,852 | 0 | 346 | 3,468 |
| ಮೇಘಾಲಯ | 9,215 | 12,541 | 21,756 | 9,215 | 12,541 | 21,756 | 0 | 0 | 0 |
| ಮಿಝೋರಾಮ್ | 0 | 2,228 | 2,228 | 0 | 2,193 | 2,193 | 0 | 35 | 35 |
| ನಾಗಾಲ್ಯಾಂಡ್ | 13,866 | 3,464 | 17,330 | 13,866 | 3,147 | 17,013 | 0 | 317 | 317 |

| | | | | | | | | | |
|---|---|---|---|---|---|---|---|---|---|
| ಒಡಿಶಾ | 136,669 | 92,337 | 229,006 | 136,669 | 92,337 | 229,006 | 0 | 0 | 0 |
| ಪುದುಚೇರಿ** | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ |
| ಪಂಜಾಬ್ | 62,375 | 10,661 | 73,036 | 61,326 | 9,612 | 70,938 | 1,049 | 1,049 | 2,098 |
| ರಾಜಸ್ತಾನ | 161,392 | 122,024 | 283416 | 138150 | 108677 | 246827 | 23242 | 13334 | 36576 |
| ಸಿಕ್ಕಿಂ | 8,010 | 405 | 8,415 | 8,010 | 405 | 8,415 | 0 | 0 | 0 |
| ತಮಿಳು ನಾಡು | 112,893 | 35,020 | 147913 | 110531 | 35,020 | 145551 | 2,362 | 0 | 2,362 |
| ತೆಲಂಗಾಣ | 92,453 | 14,277 | 106730 | 89,782 | 14,277 | 92,242 | 2,671 | 0 | 2,671 |
| ತ್ರಿಪುರ | 29,021 | 6,070 | 35,091 | 25,177 | 5,478 | 30,655 | 3,844 | 592 | 4,436 |
| ಉತ್ತರ ಪ್ರದೇಶ | 329,174 | 250,448 | 579622 | 282611 | 116537 | 350125 | 47,087 | 1,33,911 | 1,80,99 8 |
| ಉತ್ತರಾಖಂಡ್ | 35,144 | 10,909 | 46,053 | 30,589 | 8,459 | 39,048 | 4,555 | 2,450 | 7,005 |
| ಪಶ್ಚಿಮ ಬಂಗಾಳ | 253,890 | 200,970 | 454860 | 253890 | 168109 | 421999 | 0 | 32,861 | 32,861 |
| ಒಟ್ಟು | 2,950,375 | 1,764,956 | 4,718,331 | 2,437,451 | 1293524 | 3,901,684 | 258,334 | 337,50 8 | 551,879 |

ಮೂಲಗಳು : ಸಮಗ್ರ ಶಿಕ್ಷಣಕ್ಕಾಗಿ ಕಾರ್ಯಯೋಜನೆ ಅನುಮೋದನಾ ಮಂಡಳಿಯ ನಡಾವಳಿಗಳು, 2019-20, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ

* ಇಲ್ಲಿರುವ ಅಂಕಿಗಳು ಪ್ರಾಥಮಿಕ, ಪ್ರೌಢಶಾಲೆ ಹಾಗೂ ಉನ್ನತ ಪ್ರೌಢಶಿಕ್ಷಣದ ಶಿಕ್ಷಕರ ಒಟ್ಟು ಸಂಖ್ಯೆಯನ್ನು ಸೂಚಿಸುತ್ತವೆ.

** ದತ್ತಾಂಶಗಳು ಲಭ್ಯವಿಲ್ಲ.

ಟಿಪ್ಪಣಿ : ದತ್ತಾಂಶದಲ್ಲಿರುವ ಒಟ್ಟು ಮೊತ್ತಗಳನ್ನು ಕೂಡಿಸಲಾಗುವುದಿಲ್ಲ. ಏಕೆಂದರೆ, ಕಾರ್ಯಯೋಜನೆ ಅನುಮೋದನಾ ಮಂಡಳಿಯ ನಡಾವಳಿಗಳಲ್ಲಿನ ದತ್ತಾಂಶಗಳಲ್ಲಿ ವ್ಯತ್ಯಾಸಗಳಿವೆ. ಈ ವರದಿಯಲ್ಲಿನ ದತ್ತಾಂಶಗಳನ್ನು ಜಮ್ಮು ಮತ್ತು ಕಾಶ್ಮೀರದಿಂದ ತೆಗೆದುಕೊಳ್ಳಲಾಗಿದೆ.


ಹಲವಾರು ರಾಜ್ಯಗಳಲ್ಲಿ ಹಿರಿಯ ಪ್ರಾಥಮಿಕ ಮಟ್ಟದ ಐದನೇ ಒಂದು ಭಾಗಕ್ಕಿಂತಲೂ ಹೆಚ್ಚು ಶಾಲೆಗಳಲ್ಲಿ* (PAB ನಡಾವಳಿಗಳು, ಸಮಗ್ರ ಶಿಕ್ಷಣ 2019-20) ಮೂರು ವಿಷಯಗಳಿಗೆ ಶಿಕ್ಷಕರೇ ಇಲ್ಲ. ಅತ್ಯಂತ ಕೆಟ್ಟ ಪರಿಸ್ಥಿತಿಯಿರುವುದು ಉತ್ತರ ಪ್ರದೇಶದಲ್ಲಿ. ಅಲ್ಲಿನ ಶೇ. 90 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಷಯ ಬೋಧಕರೇ ಇಲ್ಲ. ನಂತರದಲ್ಲಿ ಮಹಾರಾಷ್ಟ್ರ (ಶೇ.80), ಜಮ್ಮು ಮತ್ತು ಕಾಶ್ಮೀರ (ಶೇ.70), ಮಧ್ಯಪ್ರದೇಶ (ಶೇ.69), ಜಾರ್ಖಂಡ್ (ಶೇ.57), ರಾಜಸ್ತಾನ (ಶೇ.53), ಉತ್ತರಾಖಂಡ್ (ಶೇ.42), ಬರುತ್ತವೆ. ಉತ್ತರ ಪ್ರದೇಶದಲ್ಲಿ ಶೇ. 41 ಪ್ರಾಥಮಿಕ ಹಾಗೂ ಶೇ. 42 ಹಿರಿಯ ಪ್ರಾಥಮಿಕ ಶಾಲೆಗಳು ಹೆಚ್ಚಿನ ವಿದ್ಯಾರ್ಥಿ-ಶಿಕ್ಷಕ ಅನುಪಾತವನ್ನು ಹೊಂದಿದ್ದರೆ, ಶೇ. 90 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೂರೂ ವಿಷಯಗಳಿಗೆ ಸಂಬಂಧಿಸಿದಂತೆ ವಿಷಯ ಬೋಧಕರೇ ಇಲ್ಲ. ಅದೇ ವೇಳೆಗೆ, ಉತ್ತರ ಪ್ರದೇಶದಲ್ಲಿ ಪ್ರಾಥಮಿಕ ಮಟ್ಟದಲ್ಲಿ 78,372 ಶಿಕ್ಷಕರು ಹೆಚ್ಚುವರಿ ಸಂಖ್ಯೆಯಲ್ಲಿದ್ದಾರೆ! *ಇದು, ಅಗತ್ಯಕ್ಕೆ ತಕ್ಕಂತೆ ಶಿಕ್ಷಕರನ್ನು ನೇಮಿಸಿಕೊಳ್ಳದಿರಲು ಬಾಹ್ಯ ಕಾರಣಗಳಿರಬಹುದಾದ ಸಾಧ್ಯತೆಯತ್ತ ಬೆರಳು ತೋರುತ್ತದೆ*. ಶಿಕ್ಷಕ ಕಾರ್ಯಪಡೆ ಅಧ್ಯಯನವು ಪ್ರತಿಪಾದಿಸುವ ಪ್ರಕಾರ, ಶಾಲೆಗಳ ಅಗತ್ಯಗಳಿಗನುಗುಣವಾಗಿ ಶಿಕ್ಷಕರ ನೇಮಕಾತಿಯು ನಡೆಯುತ್ತಿಲ್ಲ ಹಾಗೂ ಶಿಕ್ಷಕರನ್ನು ನಿಯೋಜಿಸುವಾಗ ಮುಖ್ಯೋಪಾಧ್ಯಾಯರುಗಳು (HM) ಮತ್ತು ಬ್ಲಾಕ್ ಮಟ್ಟದ ಅಧಿಕಾರಿಗಳೊಡನೆ ಸಮಾಲೋಚಿಸಿರುವುದಿಲ್ಲ. (ರಾಮಚಂದ್ರನ್ ಮತ್ತು ಇತರರು 2018).

ತಮ್ಮ ಪ್ರೌಢ ಶಾಲೆಗಳಲ್ಲಿ ನಾಲ್ವರು ವಿಷಯ ಬೋಧಕರನ್ನು ಹೊಂದಿರದ ಹದಿನಾಲ್ಕು ರಾಜ್ಯಗಳಲ್ಲಿ ಅಸ್ಸಾಮ್, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಮಧ್ಯಪ್ರದೇಶ, ಮಣಿಪುರ, ಪಂಜಾಬ್, ರಾಜಸ್ತಾನ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳಗಳ ಅರ್ಧಕ್ಕಿಂತಲೂ ಹೆಚ್ಚು ಶಾಲೆಗಳು ನಾಲ್ವರು ವಿಷಯ ಬೋಧಕರನ್ನು ಹೊಂದಿರುವುದಿಲ್ಲ. ಜಾರ್ಖಂಡ್‌ನ ಶೇ. 2, ಜಮ್ಮು ಮತ್ತು ಕಾಶ್ಮೀರದ ಶೇ. 10, ಮಧ್ಯಪ್ರದೇಶದ ಶೇ. 12, ಪಂಜಾಬಿನ ಶೇ. 6, ರಾಜಸ್ತಾನದ ಶೇ. 13, ಉತ್ತರ ಪ್ರದೇಶದ ಶೇ. 5 ಹಾಗೂ ಪಶ್ಚಿಮ ಬಂಗಾಳದ ಶೇ. 28 ಶಾಲೆಗಳು ಎಲ್ಲಾ ನಾಲ್ಕೂ ವಿಷಯಗಳಿಗೆ ಸಂಬಂಧಿಸಿದಂತೆ ವಿಷಯ ಬೋಧಕರನ್ನು ಹೊಂದಿವೆ. (ಕಾರ್ಯಯೋಜನೆ ಅನುಮೋದನಾ ಮಂಡಳಿಯ ನಡಾವಳಿಗಳು, ಸಮಗ್ರ ಶಿಕ್ಷಣ, 2019-20).

1. ಗುತ್ತಿಗೆ ಆಧಾರಿತ ಶಿಕ್ಷಕರು : ಕಾಲಾನಂತರದ ಪ್ರವೃತ್ತಿ


2014-15 ರಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು ಅತಿ ಹೆಚ್ಚು ಅಂದರೆ 663,074 ಕ್ಕೇರಿತು (ಚಿತ್ರ 1& 2). ಅಲ್ಲಿಂದೀಚೆಗೆ ಇಳಿಮುಖವಾಗುತ್ತಿದ್ದರೂ ಅವರ ಸಂಖ್ಯೆಯು 2017-18 ರವರೆಗೂ 6 ಲಕ್ಷಕ್ಕೂ ಮಿಗಿಲಾಗೇ ಇದೆ ಹಾಗೂ ಒಟ್ಟು ಶಿಕ್ಷಕರ ಸಂಖ್ಯೆಯ ಶೇ.12.7 ರಷ್ಟು ಶಿಕ್ಷಕರು ಗುತ್ತಿಗೆ ಆಧಾರಿತರಾಗಿದ್ದಾರೆ (ಚಿತ್ರ 1& 2).

*ಚಿತ್ರ 1. ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ, ಭಾರತ*




ಮೂಲ : UDISE, ವಿವಿಧ ವರ್ಷಗಳು * ಹೆಚ್ಚಿನ ವಿವರಗಳಿಗಾಗಿ ರಾಮಚಂದ್ರನ್ ಮತ್ತು ಇತರರು (2020) ಅನ್ನು ನೋಡಿ.


*ಚಿತ್ರ 2. ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಶೇಕಡಾ ಪ್ರಮಾಣ.*




ಮೂಲ ; UDISE, ವಿವಿಧ ವರ್ಷಗಳು

ಚಿತ್ರ 3 ಮತ್ತು 4 ರಲ್ಲಿ ಸ್ಪಷ್ಟವಾಗಿ ತೋರುವ ಹಾಗೆ, ಶಿಕ್ಷಣದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತಗಳುದ್ದಕ್ಕೂ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯಲ್ಲಿ ಬಹುದೊಡ್ಡ ಅಂತರವಿದೆ. ಪ್ರೌಢಶಾಲಾ ಹಂತಕ್ಕೆ ಹೋಲಿಸಿದರೆ, ಪ್ರಾಥಮಿಕ ಹಂತದಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ ಹೆಚ್ಚು. ಇದಕ್ಕೆ 1990 ರ ನಂತರ ಹೆಚ್ಚಾದ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಹಾಗೂ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿನ ಏರಿಕೆ ಕಾರಣವೆನ್ನಬಹುದು. 2009 ರಲ್ಲಿ ಆರಂಭವಾದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ (RMSA) ನಂತರವಷ್ಟೇ ಪ್ರೌಢ ಶಾಲೆಗಳ ವಿಸ್ತರಣಾ ಕಾರ್ಯ ಮತ್ತು ದಾಖಲಾತಿಯ ಹೆಚ್ಚಳ ಆರಂಭವಾದವು. ಈ ಏರಿಕೆಯ ನಂತರವೂ ಪ್ರಾಥಮಿಕ ಹಾಗೂ ಪ್ರೌಢ ಹಂತಗಳಲ್ಲಿನ ಶಾಲೆಗಳ ಸಂಖ್ಯೆಯಲ್ಲಿ ಗಮನಾರ್ಹವಾದ ಅಂತರವು ಇದ್ದೇ ಇದೆ. ಅದೇ ರೀತಿಯಾಗಿ, ಅನೇಕ ರಾಜ್ಯಗಳು ಶಿಕ್ಷಣದ ಪ್ರೌಢ ಹಂತದಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವನ್ನು ಅನುಸರಿಸುವುದಿಲ್ಲ. ಇವೆಲ್ಲ ಸಂಗತಿಗಳೂ ಸೇರಿ ಬಹುಶಃ ಪ್ರಾಥಮಿಕ ಹಾಗೂ ಪ್ರೌಢ ಹಂತಗಳಲ್ಲಿನ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯಲ್ಲಿನ ಅಂತರವನ್ನು ವಿವರಿಸಬಹುದು.

***ಚಿತ್ರ 3.*** *ಸರ್ಕಾರೀ ಶಾಲೆಗಳಲ್ಲಿ ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ.*





| | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|
| Total* | 3,16,091 | 5,62,504 | 5,96,005 | 6,63,074 | 6,41,627 | 6,16,149 | 6,32,316 |
| Elementary | 2,76,725 | 4,25,781 | 5,48,582 | 5,94,349 | 5,66,818 | 5,39,736 | 5,63,856 |
| Secondary | 19,548 | 1,08,645 | 57,146 | 77,185 | 79,986 | 81,864 | 82,922 |

ಮೂಲ : UDISE, ವಿವಿಧ ವರ್ಷಗಳು,

ಒಟ್ಟು

ಚಿತ್ರ 4. ಸರ್ಕಾರೀ ಶಾಲೆಗಳಲ್ಲಿ ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ವರ್ಷವಾರು ಶೇಕಡಾ ಸಂಖ್ಯೆ.




| | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|
| Total* | 7.3 | 11.8 | 12.9 | 13.4 | 13.0 | 12.3 | 12.7 |
| Elementary | 7.3 | 11.7 | 13.4 | 14.5 | 14.0 | 13.2 | 13.8 |
| Secondary | 5.4 | 11.8 | 8.7 | 8.6 | 8.6 | 8.7 | 8.4 |

ಮೂಲ : UDISE, ವಿವಿಧ ವರ್ಷಗಳು

ಒಟ್ಟುಚಿತ್ರ 2 ಮತ್ತು 3 ರಲ್ಲಿ ಪ್ರಸ್ತುತ ಪಡಿಸಲಾದ ಗುತ್ತಿಗೆ ಅಧಾರಿತ ಶಿಕ್ಷಕರ ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ಸಂಖ್ಯೆ ಹಾಗೂ ಪ್ರಮಾಣ/ಅನುಪಾತವು ಗಮನಾರ್ಹ ವ್ಯತ್ಯಾಸವನ್ನು ಪ್ರತಿಬಿಂಬಿಸುತ್ತದೆ. ಪ್ರಮಾಣಕ್ಕನುಗುಣವಾಗಿ ನೋಡಿದರೆ, ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರು ಕಡಿಮೆ ಇರುವಂತೆ ಕಾಣಬಹುದು. ಆದರೆ 1,08,000 ರಷ್ಟಿರುವ ಅವರ ಸಂಖ್ಯೆಯು ಸಾಕಷ್ಟು ಹೆಚ್ಚಿನದೇ ಆಗಿದೆ.

*ಕೋಷ್ಟಕ 2. 2017-18 ರಲ್ಲಿ ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ರಾಜ್ಯವಾರು ಶೇಕಡಾ ಪ್ರಮಾಣ.*

| ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು | ಪ್ರಾ. | ಹಿ. ಪ್ರಾ. | ಪ್ರಾ. + ಹಿ. ಪ್ರಾ. | ಪ್ರೌ. | ಹಿ. ಪ್ರೌ | ಹಿ.ಪ್ರಾ.+ ಪ್ರೌ. | ಪ್ರೌ+ಹಿ. ಪ್ರೌ. | ಲಭ್ಯವಿಲ್ಲ | ಒಟ್ಟು |
|---|---|---|---|---|---|---|---|---|---|
| ಛತ್ತೀಸ್‌ಗಢ್ | 0.01 | 0.01 | 4.26 | 0.43 | 0.07 | 4.92 | 0.21 | - | 0.06 |
| ಮಧ್ಯಪ್ರದೇಶ | 0.14 | 0.14 | | 0.14 | 0.12 | 59.09 | 11.01 | | 0.14 |
| ಕರ್ನಾಟಕ | 0.18 | 0.35 | - | 0.74 | 0.48 | - | - | 25.00 | 0.36 |
| ಗುಜರಾತ್ | 0.08 | 0.93 | - | 5.47 | 5.67 | 36.36 | 39.13 | | 0.59 |
| ರಾಜಸ್ತಾನ | 1.71 | 0.30 | 0.26 | 0.08 | 0.06 | - | 0.67 | | 0.82 |
| ಮಹಾರಾಷ್ಟ್ರ | 0.42 | 1.35 | 4.75 | 5.38 | 7.71 | 7.41 | 13.64 | | 0.88 |
| ಪುದುಚೇರಿ | 1.52 | 2.67 | 2.13 | 1.44 | 5.48 | 2.83 | 8.77 | | 2.70 |
| ಮಣಿಪುರ | 1.86 | 4.97 | 9.45 | 3.00 | 3.99 | 7.76 | 23.53 | - | 2.90 |
| ಆಂಧ್ರ ಪ್ರದೇಶ | 0.37 | 3.14 | 12.45 | 4.35 | 35.73 | 6.50 | 5.95 | | 3.18 |
| ಉತ್ತರಾಖಂಡ್ | 2.41 | 0.58 | 2.52 | 4.54 | 8.92 | 5.13 | 14.15 | 4.35 | 3.73 |
| ತಮಿಳು ನಾಡು | 0.90 | 10.44 | 1.67 | 0.96 | 0.74 | 0.67 | 5.26 | | 3.84 |
| ಕೇರಳ | 5.80 | 4.58 | 4.88 | 4.40 | 7.15 | 2.63 | 3.51 | - | 5.49 |
| ಜಮ್ಮು& ಕಾಶ್ಮೀರ | 8.41 | 5.64 | | 0.69 | 4.38 | | | | 5.65 |
| ಅಂಡಮಾನ್ &ನಿಕೋಬಾರ್ ದ್ವೀಪಗಳು | 1.50 | 9.81 | 50.00 | 7.75 | 4.04 | 36.11 | 38.46 | - | 6.40 |
| ನಾಗಾಲ್ಯಾಂಡ್ | 6.24 | 7.53 | 9.85 | 24.07 | 8.87 | 35.63 | 15.79 | 10.00 | 9.11 |
| ಗೋವಾ | 7.16 | 7.34 | | 10.92 | 39.01 | - | | | 10.18 |
| ಬಿಹಾರ್ | 12.68 | 11.46 | 12.35 | 12.38 | 6.61 | 3.32 | 11.80 | | 11.78 |
| ಹರಿಯಾಣ | 12.56 | 14.93 | 6.67 | 14.17 | 12.45 | 26.38 | 11.51 | | 14.36 |
| ತ್ರಿಪುರ | 14.65 | 24.50 | 47.06 | 7.30 | 0.53 | 4.00 | 2.94 | | 14.57 |
| ತೆಲಂಗಾಣ | 11.60 | 25.38 | 55.24 | 27.12 | 40.95 | 13.78 | 25.52 | | 15.56 |
| ಅಸ್ಸಾಮ್ | 22.42 | 9.02 | 26.46 | 13.64 | 3.68 | 12.32 | 4.76 | | 16.36 |

| | | | | | | | | | |
|---|---|---|---|---|---|---|---|---|---|
| ಪಂಜಾಬ್ | 17.51 | 26.77 | | 16.36 | 9.94 | | | | 18.50 |
| ಉತ್ತರ ಪ್ರದೇಶ | 24.75 | 5.62 | - | 1.78 | 2.56 | 4.94 | 8.11 | - | 18.69 |
| ಪಶ್ಚಿಮ ಬಂಗಾಳ | 25.46 | 28.12 | 21.43 | 0.58 | 1.91 | 1.03 | 1.57 | 3.83 | 21.48 |
| ಲಕ್ಷದ್ವೀಪ | 17.41 | 14.88 | 28.93 | 14.11 | 46.84 | 11.00 | 43.37 | | 23.38 |
| ದಿಲ್ಲಿ | 17.30 | 38.81 | | 21.83 | 24.08 | | | | 25.28 |
| ಚಂಡೀಗಢ್ | 28.64 | 33.57 | 32.48 | 23.13 | 15.68 | 30.82 | 27.90 | 13.53 | 27.87 |
| ಹಿಮಾಚಲ ಪ್ರದೇಶ | 18.29 | 38.87 | - | 35.63 | 25.81 | 38.01 | 51.23 | | 28.16 |
| ಮಿಝೋರಾಮ್ | 23.97 | 31.19 | | 36.93 | 26.39 | | | | 29.30 |
| ಸಿಕ್ಕಿಂ | 21.29 | 41.92 | | 44.08 | 54.34 | | | | 35.19 |
| ದಮನ್ & ದಿಯು | 35.88 | 36.45 | - | 33.82 | 38.27 | 27.78 | 46.15 | | 35.86 |
| ಒಡಿಶಾ | 38.82 | 40.66 | 41.69 | 36.08 | 10.99 | 31.45 | 20.18 | | 38.63 |
| ಅರುಣಾಚಲ ಪ್ರದೇಶ | 56.25 | 55.67 | 49.42 | 31.39 | 11.36 | 42.39 | 43.30 | | 50.46 |
| ದಾದ್ರ & ನಗರ ಹವೇಲಿ | 44.96 | 67.43 | | 54.08 | 69.52 | | | | 54.99 |
| ಜಾರ್ಖಂಡ್ | 64.46 | 55.95 | 49.54 | 6.14 | 7.76 | 29.66 | 6.45 | | 57.05 |
| ಮೇಘಾಲಯ | 51.74 | 88.41 | 15.38 | 43.56 | 11.84 | 22.22 | 8.51 | | 65.29 |
| ಒಟ್ಟು | 14.48 | 12.09 | 32.60 | 7.85 | 7.27 | 13.60 | 9.98 | 4.25 | 12.69 |

ಆಧಾರ: UDISE, 2017-18

ಸಂಖ್ಯೆಗಳು ಕೇವಲ ಕಥೆಯ ಒಂದು ಭಾಗವನ್ನಷ್ಟೇ ಹೇಳುತ್ತವೆ. ಮೇಘಾಲಯ, ಜಾರ್ಖಂಡ್ ಮತ್ತು ಅರುಣಾಚಲ ಪ್ರದೇಶಗಳಲ್ಲಿ ಶೇ.50ಕ್ಕೂ ಹೆಚ್ಚು ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡವರು ಎಂದು ಕೋಷ್ಟಕ 2 ಸ್ಪಷ್ಟವಾಗಿ ಹೇಳುತ್ತದೆ. ಒಡಿಶಾ ಮತ್ತು ಸಿಕ್ಕಿಮ್‌ನಲ್ಲಿ ಅವರ ಸಂಖ್ಯೆ ಶೇ. 35 ಕ್ಕೂ ಹೆಚ್ಚಿದ್ದು ಮೀಝೋರಾಮ್, ಹಿಮಾಚಲ ಪ್ರದೇಶ, ದಿಲ್ಲಿ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಈ ಸಂಖ್ಯೆಯು ಶೇ. 20ಕ್ಕೂ ಹೆಚ್ಚಿನದಾಗಿದೆ. ಇನ್ನಿತರ ಬಹಳಷ್ಟು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ವರ್ಷದುದ್ದಕ್ಕೂ ಗುತ್ತಿಗೆ ಅಧಾರಿತ ಶಿಕ್ಷಕರ ಸಂಖ್ಯೆ ಹಾಗೂ ಶೇಕಡಾ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

*ಕೋಷ್ಟಕ 3. ಸರ್ಕಾರೀ ನಿರ್ವಹಣೆಯಲ್ಲಿರುವ ಶಾಲೆಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ, 2011-12 ರಿಂದ 2017-18*

| | ಗುತ್ತಿಗೆ ಆಧಾರಿತ ಶಿಕ್ಷಕರ ಒಟ್ಟು ಸಂಖ್ಯೆ | | | | | | |
|---|---|---|---|---|---|---|---|
| ರಾಜ್ಯ/ಕೇಂ.ಪ್ರ. ಹೆಸರು | 2011-12 ** | 2012-13 | 2013-14 | 2014-15 | 2015-16 | 2016-17 | 2017-18 |
| ಛತ್ತೀಸ್‌ಗಢ್ | 1,712 | 846 | 513 | 387 | - | 76 | 111 |
| ಪುದುಚೇರಿ | 315 | 286 | 89 | 102 | 139 | 176 | 137 |
| ಲಕ್ಷದ್ವೀಪ | 90 | 126 | 107 | 112 | 193 | 271 | 263 |
| ಅಂಡಮಾನ್ &ನಿಕೋಬಾರ್ ದ್ವೀಪಗಳು | 293 | 339 | 337 | 298 | 265 | 315 | 279 |
| ಗೋವಾ | 8 | 139 | 154 | 167 | 250 | 220 | 332 |
| ದಮನ್& ದಿಯು | 5 | 69 | 100 | 283 | 330 | 333 | 364 |
| ಮಧ್ಯಪ್ರದೇಶ | 43,097 | 56,286 | 51,628 | 4,853 | 561 | 1,106 | 488 |
| ಮಣಿಪುರ | 91 | 653 | 708 | 936 | 1,207 | 1,075 | 554 |
| ಕರ್ನಾಟಕ | 2,458 | 2,628 | 607 | 1,782 | 791 | 787 | 784 |
| ದಾದ್ರ & ನಗರ ಹವೇಲಿ | 303 | 609 | 445 | 698 | 1,011 | 1,192 | 1,185 |
| ಗುಜರಾತ್ | 1,329 | 5,153 | 2,526 | 3,188 | 1,531 | 1,249 | 1,254 |
| ಚಂಡೀಗಢ್ | - | 1,056 | 1,768 | 1,768 | 1,753 | 1,787 | 1,468 |
| ನಾಗಾಲ್ಯಾಂಡ್ | - | 904 | 1,022 | 1,040 | 1,029 | 1,397 | 1,834 |
| ಮಹಾರಾಷ್ಟ್ರ | - | 8,937 | 8,206 | 3,842 | 2,718 | 2,301 | 2,325 |
| ಉತ್ತರಾಖಂಡ್ | 326 | 1,140 | 1,408 | 1,403 | 3,599 | 3,029 | 2,337 |
| ರಾಜಸ್ತಾನ | - | 4,531 | 7,330 | 3,801 | 2,512 | 2,807 | 2,824 |
| ಸಿಕ್ಕಿಂ | 94 | 918 | 1,334 | 2,553 | 3,361 | 3,361 | 3,763 |
| ಮಿಝೋರಾಮ್ | - | 8,624 | 4,097 | 5,261 | 5,151 | 5,099 | 3,843 |
| ಕೇರಳ | 106 | 829 | 2,439 | 2,279 | 2,020 | 2,545 | 3,916 |
| ತ್ರಿಪುರ | - | 5,968 | 6,028 | 5,981 | 5,894 | 5,931 | 5,969 |
| ಆಂಧ್ರ ಪ್ರದೇಶ | 52,316 | 13,073 | 11,576 | 6,068 | 5,354 | 3,816 | 6,056 |
| ಜಮ್ಮು& ಕಾಶ್ಮೀರ | 9,019 | 13,513 | 14,959 | 17,104 | 14,230 | 10,400 | 6,216 |

| | | | | | | | |
|---|---|---|---|---|---|---|---|
| ಅರುಣಾಚಲ ಪ್ರದೇಶ | 3,180 | 7,167 | 7,387 | 7,606 | 7,930 | 7,975 | 8,639 |
| ತಮಿಳು ನಾಡು | 2,077 | 1,874 | 1,403 | 10,599 | 14,927 | 24,554 | 9,170 |
| ಹರಿಯಾಣ | 4,681 | 10,344 | 14,681 | 15,462 | 11,710 | 13,861 | 14,014 |
| ಮೇಘಾಲಯ | 8,809 | 12,683 | 12,984 | 13,102 | 13,377 | 13,551 | 15,332 |
| ದಿಲ್ಲಿ | 5,981 | 11,714 | 19,481 | 17,450 | 20,071 | 20,332 | 18,848 |
| ಹಿಮಾಚಲ ಪ್ರದೇಶ | - | 14,837 | 17,344 | 19,625 | 19,917 | 20,511 | 19,124 |
| ಪಂಜಾಬ್ | - | 16,044 | 29,864 | 28,792 | 36,159 | 35,342 | 21,784 |
| ತೆಲಂಗಾಣ | - | - | - | 6,819 | 7,052 | 9,509 | 22,592 |
| ಅಸ್ಸಾಮ್ | 2,893 | 39,777 | 33,269 | 43,423 | 40,412 | 36,220 | 39,322 |
| ಬಿಹಾರ್ | 26,044 | 42,493 | 66,014 | 1,05,063 | 76,418 | 68,909 | 50,926 |
| ಜಾರ್ಖಂಡ್ | 61,033 | 72,529 | 77,007 | 80,316 | 72,461 | 69,454 | 68,446 |
| ಒಡಿಶಾ | 37,955 | 67,283 | 37,444 | 61,655 | 90,568 | 91,181 | 86,590 |
| ಪಶ್ಚಿಮ ಬಂಗಾಳ | 4,127 | 32,586 | 43,695 | 52,260 | 1,05,714 | 1,01,879 | 1,02,854 |
| ಉತ್ತರ ಪ್ರದೇಶ | 47,749 | 1,06,546 | 1,18,051 | 1,36,996 | 71,012 | 53,598 | 1,08,373 |
| ಒಟ್ಟು | 3,16,091 | 5,62,504 | 5,96,005 | 6,63,074 | 6,41,627 | 6,16,149 | 6,32,316 |

ಮೂಲ : UDISE, ವಿವಿಧ ವರ್ಷಗಳು ** 2011-12 ಕ್ಕೆ ಸಂಬಂಧಿಸಿದ ದತ್ತಾಂಶವು ಕೇವಲ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಿದೆ.

2019-20 ರ ಸಮಗ್ರ ಶಿಕ್ಷಣಕ್ಕಾಗಿ ಕಾರ್ಯಯೋಜನೆ ಅನುಮೋದನಾ ಮಂಡಳಿಯ ವಿಶ್ಲೇಷಣೆಯ ಪ್ರಕಾರ, ಅತ್ಯಂತ ಹೆಚ್ಚಿನ ಸಂಖ್ಯೆಯ (3,45,884) ಗುತ್ತಿಗೆ ಆಧಾರಿತ ಶಿಕ್ಷಕರು ಪ್ರಾಥಮಿಕ ಶಾಲಾ ಹಂತದಲ್ಲಿದ್ದಾರೆ. ಇದು ಮಂಜೂರಾದ ಒಟ್ಟು ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ 530,737 ರ ಶೇ. 65.2 ಆಗಿದೆ.[19] ಉತ್ತರ ಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಜಾರ್ಖಂಡ್ ಮತ್ತು ಮಧ್ಯ ಪ್ರದೇಶಗಳೆಲ್ಲವೂ ಸೇರಿ ಒಟ್ಟು ಮಂಜೂರಾದ ಗುತ್ತಿಗೆ ಆಧಾರಿತ ಶಿಕ್ಷಕರ ಶೇ. 78.6 ರಷ್ಟು ಭಾಗಕ್ಕೆ ಬೆಂಬಲವನ್ನು ಪಡೆದಿವೆ. ಅತ್ಯಂತ ಹೆಚ್ಚಿನ ಸಂಖ್ಯೆಯ ಹಾಗೂ ಶೇಕಡಾ (ಪ್ರತಿಶತ) ಗುತ್ತಿಗೆ ಆಧಾರಿತ ಶಿಕ್ಷಕರ ಹುದ್ದೆಗಳು ಮಂಜೂರಾಗಿರುವ ರಾಜ್ಯಗಳೆಂದರೆ, ಉತ್ತರ ಪ್ರದೇಶ (141,927 ಮತ್ತು ಶೇ.26.7), ಒಡಿಶಾ (101,203 ಮತ್ತು ಸೇ. 19.1), ಪಶ್ಚಿಮ ಬಂಗಾಳ (94,648 ಮತ್ತು ಶೇ.17.8), ಜಾರ್ಖಂಡ್ (41,655 ಮತ್ತು ಶೇ.7.8) ಹಾಗೂ ಮಧ್ಯ ಪ್ರದೇಶ (37,697 ಮತ್ತು ಶೇ. 7.1).

ವಿವಿಧ ತರಹದ ವಸತಿ ಶಾಲೆಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ನಿರ್ದಿಷ್ಟ ಮಕ್ಕಳ ಅಥವಾ ಬಾಲಕಿಯರ ಗುಂಪುಗಳಿಗಾಗಿ ಸರ್ಕಾರವು ತೆರೆದ ವಸತಿ ಶಾಲೆಗಳಲ್ಲಿ - ಉದಾಹರಣೆಗೆ, ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ನವೋದಯ ವಿದ್ಯಾಲಯ, , ಸಮಾಜ ಕಲ್ಯಾಣ ಅಥವಾ ಬುಡಕಟ್ಟು ಕಲ್ಯಾಣ ಸಚಿವಾಲಯ/ಇಲಾಖೆಗಳಡಿ ಬರುವ ಶಿಕ್ಷಣ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರಿಂದಾಗಿ ಅಸ್ವಾಭಾವಿಕ ಒಳನೋಟವೊಂದು ಈ ಅಧ್ಯಯನದಿಂದ ಹೊರಹೊಮ್ಮುತ್ತದೆ. ಅತ್ಯಂತ ವಂಚಿತರಿಗಾಗಿ ಕಾರ್ಮಿಕ

[19] ಹೆಚ್ಚಿನ ವಿವರಗಳಿಗಾಗಿ ರಾಮಚಂದ್ರನ್ ಮತ್ತು ಇತರರು (2020) ಅನ್ನು ನೋಡಿ.

ಸಚಿವಾಲಯ (ಬಾಲ ಕಾರ್ಮಿಕರು) ಹಾಗೂ ಸಮಾಜ ಕಲ್ಯಾಣ ಇಲಾಖೆಗಳು ನಡೆಸುವ ಶಾಲೆಗಳಲ್ಲಿ ಅನುಕ್ರಮವಾಗಿ ಶೇ.41.6 ಹಾಗೂ ಶೇ. 22.5 ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡವರಾಗಿದ್ದಾರೆ. ಸೈನಿಕ ಶಾಲೆಗಳಲ್ಲಿಯೂ ಕೂಡ ಶೇ. 32.4 ಶಿಕ್ಷಕರು ಗುತ್ತಿಗೆ ಆಧಾರಿತರಾಗಿದ್ದಾರೆ (ಕೋಷ್ಟಕ 4).

ಕೋಷ್ಟಕ 4 : *ನಿರ್ವಹಣೆಯ ಆಧಾರದ ಮೇಲೆ ನಿರ್ದಿಷ್ಟ ರೀತಿಯ ಸರ್ಕಾರೀ ಶಾಲೆಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ ಮತ್ತು ಶೇಕಡಾ ಪ್ರಮಾಣ..*

| ಶಾಲೆಗಳ ಮಾದರಿ | ಒಟ್ಟು ಶಿಕ್ಷಕರ ಸಂಖ್ಯೆ | | | ಗುತ್ತಿಗೆ ಆಧಾರಿತ ಶಿಕ್ಷಕರ ಒಟ್ಟು ಸಂಖ್ಯೆ | | | ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಶೇಕಡಾವಾರು ಪ್ರಮಾಣ | | |
|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಶಿಕ್ಷಣ ಇಲಾಖೆ | 22,44,970 | 15,98,717 | 38,43,687 | 2,85,660 | 3,00,760 | 5,86,420 | 12.7 | 18.8 | 15.3 |
| ಬುಡಕಟ್ಟು ಜನಾಂಗ ಇಲಾಖೆ | 88,536 | 45,061 | 1,33,597 | 5,951 | 4,876 | 10,827 | 6.7 | 10.8 | 8.1 |
| ಸ್ಥಳೀಯ ಸಂಸ್ಥೆ | 5,06,195 | 4,18,043 | 9,24,238 | 7,869 | 9,599 | 17,468 | 1.6 | 2.3 | 1.9 |
| ಇತರ | 7,389 | 15,608 | 22,997 | 2,909 | 8,987 | 11,896 | 39.4 | 57.6 | 51.7 |
| ಸಮಾಜ ಕಲ್ಯಾಣ | 5,411 | 4,076 | 9,487 | 885 | 1,250 | 2,135 | 16.4 | 30.7 | 22.5 |
| ಕಾರ್ಮಿಕ ಸಚಿವಾಲಯ | 103 | 356 | 459 | 35 | 156 | 191 | 34.0 | 43.8 | 41.6 |
| ಕೇಂದ್ರೀಯ ವಿದ್ಯಾಲಯ | 18,124 | 16,642 | 34,766 | 927 | 1,165 | 2,092 | 5.1 | 7.0 | 6.0 |
| ನವೋದಯ ವಿದ್ಯಾಲಯ | 6,180 | 2,463 | 8,643 | 393 | 219 | 612 | 6.4 | 8.9 | 7.1 |
| ಸೈನಿಕ ಶಾಲೆ | 845 | 1,188 | 2,033 | 122 | 537 | 659 | 14.4 | 45.2 | 32.4 |
| ರೈಲ್ವೇ ಶಾಲೆ | 810 | 516 | 1,326 | 1 | 1 | 2 | 0.1 | 0.2 | 0.2 |
| ಕೇಂದ್ರೀಯ ಟಿಬೆಟಿಯನ್ ಶಾಲೆ | 115 | 62 | 177 | 6 | 8 | 14 | 5.2 | 12.9 | 7.9 |
| ಒಟ್ಟು | 28,78,678 | 21,02,732 | 49,81,410 | 3,04,758 | 3,27,558 | 6,32,316 | 10.6 | 15.6 | 12.7 |

ಮೂಲ : UDISE, 2017-18

ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು 2004 ರಲ್ಲಿ ಆರಂಭವಾದಾಗಿನಿಂದಲೂ ಯೋಜನಾ ನಿಬಂಧನೆಗಳ ಪ್ರಕಾರ ಮುಖ್ಯವಾಗಿ ಗುತ್ತಿಗೆ ಆಧಾರಿತ ಶಿಕ್ಷಕರ ಮೇಲೆಯೇ ಅವಲಂಬಿಸಿವೆ (ಕೋಷ್ಟಕ 5). 2007 ಮತ್ತು 2013 ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಕೈಗೊಂಡಿದ್ದ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳ ರಾಷ್ಟ್ರೀಯ ಮೌಲ್ಯಮಾಪನವು ಇದನ್ನು ದೃಢಪಡಿಸಿದೆ. ಆರಂಭವಾಗಿ ಹತ್ತು ವರುಷಗಳಿಗೂ ಹೆಚ್ಚು ಸಮಯವಾದ ನಂತರವೂ ಕೆಜಿಬಿವಿಗಳಲ್ಲಿ ಶೇ.57.6 ಶಿಕ್ಷಕರು ಗುತ್ತಿಗೆ ಆಧಾರಿತರಾಗಿದ್ದಾರೆ. ಏಕೆಂದರೆ, ಖಾಯಂ ಶಿಕ್ಷಕರನ್ನು  ನೇಮಿಸಿ ಕಳುಹಿಸುವುದರಲ್ಲಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳದು

ನಿಧಾನಗತಿಯಾಗಿದೆ. ಮೌಲ್ಯಮಾಪನಗಳ ಪ್ರಕಾರ ಕೆಜಿಬಿವಿಗಳಲ್ಲಿನ ಹಲವಾರು ಶಿಕ್ಷಕರು ಅಗತ್ಯ ವೃತ್ತಿಪರ ಶೈಕ್ಷಣಿಕ ಅರ್ಹತೆಗಳನ್ನೂಹೊಂದಿಲ್ಲ.

ಕೋಷ್ಟಕ 5. ನಿರ್ದಿಷ್ಟ ರೀತಿಯ ಸರ್ಕಾರಿ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ

| ಶಾಲೆಗಳ ಮಾದರಿ | ಒಟ್ಟು ಶಿಕ್ಷಕರ ಸಂಖ್ಯೆ | | | ಗುತ್ತಿಗೆ ಆಧಾರಿತ ಶಿಕ್ಷಕರ ಒಟ್ಟು ಸಂಖ್ಯೆ | | | ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಶೇಕಡಾ ಪ್ರಮಾಣ | | |
|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಆಶ್ರಮ | 29,062 | 16,676 | 45,738 | 5,042 | 4,256 | 9,298 | 17.3 | 25.5 | 20.3 |
| ಆಶ್ರಮವಲ್ಲದ (ಸರ್ಕಾರೀ) | 3,23,509 | 2,22,230 | 5,45,739 | 32,134 | 37,635 | 69,769 | 9.9 | 16.9 | 12.8 |
| ಖಾಸಗಿ | 1,733 | 1,638 | 3,371 | 186 | 233 | 419 | 10.7 | 14.2 | 12.4 |
| ಇತರ | 21,240 | 12,456 | 33,696 | 2,708 | 2,382 | 5,090 | 12.7 | 19.1 | 15.1 |
| **ಕೆಜಿಬಿವಿ** | **4,173** | **18,869** | **23,042** | **1,269** | **12,011** | **13,280** | **30.4** | **63.7** | **57.6** |
| ಮಾದರಿ ಶಾಲೆ | 4,777 | 3,525 | 8,302 | 510 | 415 | 925 | 10.7 | 11.8 | 11.1 |
| ಏಕಲವ್ಯ ಮಾದರಿ ಶಾಲೆ | 489 | 216 | 705 | 138 | 112 | 250 | 28.2 | 51.9 | 35.5 |

ಮೂಲ: UDISE, 2017-18

## 4. ಲಿಂಗಾಧಾರಿತ ವ್ಯತ್ಯಾಸಗಳು

ಕೋಷ್ಟಕ 6 ರ ಪ್ರಕಾರ, ಸಾಮಾನ್ಯ ಹಾಗೂ ಗುತ್ತಿಗೆ ಆಧಾರಿತ ಶಿಕ್ಷಕರಲ್ಲಿ ರಾಜ್ಯವಾರು ಲಿಂಗಾಧಾರಿತ ವ್ಯತ್ಯಾಸಗಳು ಕಣ್ಣಿಗೆ ಕಾಣುವಂತಿವೆ. ಕೆಲವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಕಿಯರ ಪ್ರಮಾಣವು ಎಲ್ಲಾ ಶ್ರೇಣಿಗಳಲ್ಲಿಯೂ ಹೆಚ್ಚಿದ್ದರೆ, ಇನ್ನು ಕೆಲವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಕಿಯರ ಪ್ರಮಾಣವು ಎಲ್ಲಾ ಶ್ರೇಣಿಗಳಲ್ಲಿಯೂ ಶೇ. 50 ಕ್ಕಿಂತಲೂ ಕಡಿಮೆಯಿದೆ. ಕೆಲವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕಿಯರ ಪ್ರಮಾಣವು ಹೆಚ್ಚಿದೆ. ಈ ವ್ಯತ್ಯಾಸಕ್ಕೆ ಕೆಲವು ತರಹದ ಶಾಲೆಗಳಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯು ಹೆಚ್ಚಿರುವುದೇ ಕಾರಣ. ಉದಾಹರಣೆಗೆ, ಪಶ್ಚಿಮ ಬಂಗಾಳದಲ್ಲಿ 1999 ರಿಂದಲೂ ಪ್ರಾಥಮಿಕ ಶಾಲೆಗಳನ್ನು (ಶಿಶು ಶಿಕ್ಷಾ ಕರ್ಮಸೂಚಿ ಎಂದು ಕರೆಯಲ್ಪಡುವ) ನಿರ್ವಹಿಸಲು ನಲವತ್ತಕ್ಕಿಂತ ಹೆಚ್ಚು ವರ್ಷ ವಯಸ್ಸಾದ ಮಹಿಳೆಯರನ್ನು ನೇಮಿಸಿಕೊಳ್ಳುತ್ತಿದ್ದರು. ಅಲ್ಲಿರುವವರಲ್ಲಿ ಬಹುತೇಕ ಎಲ್ಲರೂ ಮಹಿಳೆಯರೇ.

*ಕೋಷ್ಟಕ 6. ಸರ್ಕಾರದ ನಿರ್ವಹಣೆಯಲ್ಲಿರುವ ಶಾಲೆಗಳಲ್ಲಿ ಲಿಂಗಾಧಾರದ ಮೇಲೆ ಪ್ರತ್ಯೇಕಿಸಲಾದ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ,*

| ರಾಜ್ಯ/ಕೇಂದ್ರಾಡಳಿತ ಪ್ರದೇಶ | ಗುತ್ತಿಗೆ ಅಧಾರಿತ ಶಿಕ್ಷಕರ ಒಟ್ಟು ಸಂಖ್ಯೆ | | | ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಶಿಕ್ಷಕಿಯರ ಶೇಕಡಾ ಪ್ರಮಾಣ | |
|---|---|---|---|---|---|
| | **ಗಂಡು** | **ಹೆಣ್ಣು** | **ಒಟ್ಟು** | **ಗುತ್ತಿಗೆ ಆಧಾರಿತ** | **ಸಾಮಾನ್ಯ** |
| ಕೇರಳ | 687 | 3,229 | 3,916 | 82.46 | 69.6 |
| ಗೋವಾ | 59 | 273 | 332 | 82.23 | 77.3 |
| ಪುದುಚೇರಿ | 31 | 106 | 137 | 77.37 | 61.3 |
| ಚಂಡೀಗಢ್ | 348 | 1,120 | 1,468 | 76.29 | 71.0 |
| ಅಂಡಮಾನ್ & ನಿಕೋಬಾರ್ ದ್ವೀಪಗಳು | 71 | 208 | 279 | 74.55 | 57.3 |
| ಪಂಜಾಬ್ | 5,755 | 16,029 | 21,784 | 73.58 | 58.6 |
| ಆಂಧ್ರ ಪ್ರದೇಶ | 1,745 | 4,311 | 6,056 | 71.19 | 42.5 |
| ದಿಲ್ಲಿ ರಾಷ್ಟ್ರ ರಾಜಧಾನಿ ಪ್ರದೇಶ | 5,976 | 12,872 | 18,848 | 68.29 | 58.3 |
| ಪಶ್ಚಿಮ ಬಂಗಾಳ | 33,969 | 68,885 | 1,02,854 | 66.97 | 32.7 |
| ದಮನ್ & ದಿಯು | 125 | 239 | 364 | 65.66 | 50.8 |
| ಗುಜರಾತ್ | 485 | 769 | 1,254 | 61.32 | 47.0 |
| ತಮಿಳು ನಾಡು | 3,583 | 5,587 | 9,170 | 60.93 | 65.5 |
| ಸಿಕ್ಕಿಂ | 1,484 | 2,279 | 3,763 | 60.56 | 47.9 |
| ತೆಲಂಗಾಣ | 9,060 | 13,532 | 22,592 | 59.90 | 40.5 |
| ಉತ್ತರ ಪ್ರದೇಶ | 43,677 | 64,696 | 1,08,373 | 59.70 | 44.9 |
| ದಾದ್ರ & ನಗರ ಹವೇಲಿ | 479 | 706 | 1,185 | 59.58 | 48.5 |
| ಲಕ್ಷದ್ವೀಪ | 109 | 154 | 263 | 58.56 | 44.7 |
| ನಾಗಾಲ್ಯಾಂಡ್ | 865 | 969 | 1,834 | 52.84 | 46.4 |
| ಮೇಘಾಲಯ | 7,407 | 7,925 | 15,332 | 51.69 | 50.6 |
| ಹರಿಯಾಣ | 7,232 | 6,782 | 14,014 | 48.39 | 40.9 |
| ಮಣಿಪುರ | 288 | 266 | 554 | 48.01 | 50.8 |
| ಕರ್ನಾಟಕ | 410 | 374 | 784 | 47.70 | 47.8 |

| | | | | | |
|---|---|---|---|---|---|
| ಉತ್ತರಾಖಂಡ್ | 1,245 | 1,092 | 2,337 | 46.73 | 39.7 |
| ಒಡಿಶಾ | 47,129 | 39,461 | 86,590 | 45.57 | 39.7 |
| ಅರುಣಾಚಲ ಪ್ರದೇಶ | 4,719 | 3,920 | 8,639 | 45.38 | 34.6 |
| ಅಸ್ಸಾಮ್ | 21,513 | 17,809 | 39,322 | 45.29 | 33.2 |
| ಮಹಾರಾಷ್ಟ್ರ | 1,299 | 1,026 | 2,325 | 44.13 | 36.3 |
| ಬಿಹಾರ್ | 29,717 | 21,209 | 50,926 | 41.65 | 38.3 |
| ಜಮ್ಮು& ಕಾಶ್ಮೀರ | 3,693 | 2,523 | 6,216 | 40.59 | 37.2 |
| ಮಿಝೋರಾಮ್ | 2,314 | 1,529 | 3,843 | 39.79 | 39.0 |
| ಛತ್ತೀಸ್‌ಗಢ್ | 67 | 44 | 111 | 39.64 | 35.5 |
| ಹಿಮಾಚಲ ಪ್ರದೇಶ | 11,557 | 7,567 | 19,124 | 39.57 | 37.3 |
| ಮಧ್ಯಪ್ರದೇಶ | 311 | 177 | 488 | 36.27 | 32.1 |
| ರಾಜಸ್ತಾನ | 1,842 | 982 | 2,824 | 34.77 | 29.9 |
| ತ್ರಿಪುರ | 4,363 | 1,606 | 5,969 | 26.91 | 27.8 |
| ಜಾರ್ಖಂಡ್ | 51,144 | 17,302 | 68,446 | 25.28 | 30.7 |
| ಒಟ್ಟು | **3,04,758** | **3,27,558** | **6,32,316** | **51.80** | **40.8** |

ಮೂಲ: UDISE, 2017-18

## 1. 5. ಗುತ್ತಿಗೆ ಆಧಾರಿತ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುವ ಶಾಲೆಗಳು

ಭಾರತದಲ್ಲಿ ಗ್ರಾಮೀಣ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಅಲ್ಲಿರುವ ಶಿಕ್ಷಕರ ಸಂಖ್ಯೆಯು ನಿರೀಕ್ಷೆಯಂತೆ ಹೆಚ್ಚೇ ಇದೆ. ಕೋಷ್ಟಕ 7 ರ ಪ್ರಕಾರ, ಗ್ರಾಮೀಣ ಭಾಗಗಳಲ್ಲಿ ಗುತ್ತಿಗೆ ಅಧಾರಿತ ಶಿಕ್ಷಕರು ಸಹಜವಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಸ್ಪಷ್ಟವಾಗಿ ಕಾಣಬಹುದು

*ಕೋಷ್ಟಕ 7. ಸ್ಥಳ ಹಾಗೂ ಶೈಕ್ಷಣಿಕ ಹಂತದ ಅಧಾರದ ಮೇಲೆ ರಾಜ್ಯವಾರು/ಕೇಂದ್ರಾಡಳಿತ ಪ್ರದೇಶವಾರು ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ.*

| | ಗ್ರಾಮೀಣ | ನಗರ |
|---|---|---|

| ರಾಜ್ಯ/ಕೇಂದ್ರಾಡಳಿತ ಪ್ರದೇಶ | ಪ್ರಾ. | ಹಿ. ಪ್ರಾ. | ಪ್ರೌ. | ಹಿ. ಪ್ರೌ. | ಒಟ್ಟು | ಪ್ರಾ. | ಹಿ. ಪ್ರಾ. | ಪ್ರೌ. | ಹಿ. ಪ್ರೌ. | ಒಟ್ಟು |
|---|---|---|---|---|---|---|---|---|---|---|
| ಅಂಡಮಾನ್ & ನಿಕೋಬಾರ್ ದ್ವೀಪಗಳು | 7 | 43 | 62 | 139 | 251 | 0 | 1 | 4 | 23 | 28 |
| ಆಂಧ್ರ ಪ್ರದೇಶ | 103 | 68 | 3,085 | 1,579 | 4,835 | 33 | 17 | 523 | 648 | 1,221 |
| ಅರುಣಾಚಲ ಪ್ರದೇಶ | 2,523 | 3,625 | 1,074 | 409 | 7,631 | 142 | 438 | 230 | 198 | 1,008 |
| ಅಸ್ಸಾಮ್ | 26,000 | 3,939 | 5,229 | 1,555 | 36,723 | 831 | 316 | 797 | 655 | 2,599 |
| ಬಿಹಾರ್ | 16,747 | 23,606 | 2,838 | 5,083 | 48,274 | 621 | 997 | 98 | 936 | 2,652 |
| ಚಂಡೀಗಢ್ | 0 | 16 | 66 | 169 | 251 | 16 | 99 | 557 | 545 | 1,217 |
| ಛತ್ತೀಸ್‌ಗಢ್ | 1 | 5 | 1 | 62 | 69 | 0 | 0 | 16 | 26 | 42 |
| ದಾದ್ರ & ನಗರ ಹವೇಲಿ | 182 | 595 | 62 | 170 | 1,009 | 4 | 63 | 22 | 87 | 176 |
| ದಮನ್ & ದಿಯು | 80 | 76 | 32 | 68 | 256 | 28 | 29 | 24 | 27 | 108 |
| ಗೋವಾ | 95 | 6 | 73 | 22 | 196 | 21 | 3 | 9 | 103 | 136 |
| ಗುಜರಾತ್ | 11 | 516 | 233 | 352 | 1,112 | 14 | 72 | 4 | 52 | 142 |
| ಹರಿಯಾಣ | 3,980 | 1,674 | 2,249 | 4,107 | 12,010 | 769 | 94 | 84 | 1,057 | 2,004 |
| ಹಿಮಾಚಲ ಪ್ರದೇಶ | 4,335 | 2,706 | 2,328 | 9,249 | 18,618 | 62 | 25 | 30 | 389 | 506 |
| ಜಮ್ಮು& ಕಾಶ್ಮೀರ | 2,426 | 2,793 | 328 | 378 | 5,925 | 92 | 124 | 14 | 61 | 291 |
| ಜಾರ್ಖಂಡ್ | 33,422 | 27,717 | 3,526 | 1,346 | 66,011 | 1,039 | 1,154 | 104 | 138 | 2,435 |
| ಕರ್ನಾಟಕ | 98 | 151 | 303 | 32 | 584 | 4 | 24 | 149 | 23 | 200 |
| ಕೇರಳ | 653 | 556 | 350 | 1,768 | 3,327 | 106 | 94 | 11 | 378 | 589 |
| ಲಕ್ಷದ್ವೀಪ | 30 | 42 | 2 | 141 | 215 | 7 | 24 | 0 | 17 | 48 |
| ಮಧ್ಯಪ್ರದೇಶ | 246 | 92 | 27 | 4 | 369 | 13 | 4 | 19 | 83 | 119 |
| ಮಹಾರಾಷ್ಟ್ರ | 186 | 445 | 449 | 270 | 1,350 | 91 | 326 | 357 | 201 | 975 |
| ಮಣಿಪುರ | 152 | 127 | 63 | 160 | 502 | 3 | 39 | 0 | 10 | 52 |
| ಮೇಘಾಲಯ | 6,493 | 7,684 | 412 | 79 | 14,668 | 181 | 446 | 17 | 20 | 664 |
| ಮಿಝೋರಾಮ್ | 771 | 1,385 | 558 | 10 | 2,724 | 339 | 492 | 165 | 123 | 1,119 |

| | | | | | | | | | | |
|---|---|---|---|---|---|---|---|---|---|---|
| ನಾಗಾಲ್ಯಾಂಡ್ | 390 | 401 | 685 | 85 | 1,561 | 35 | 67 | 102 | 69 | 273 |
| ದಿಲ್ಲಿ ರಾಷ್ಟ್ರ ರಾಜಧಾನಿ ಪ್ರದೇಶ | 84 | 5 | 71 | 692 | 852 | 2,669 | 94 | 1,069 | 14,164 | 17,996 |
| ಒಡಿಶಾ | 28,710 | 36,250 | 17,924 | 449 | 83,333 | 676 | 1,103 | 1,389 | 89 | 3,257 |
| ಪುದುಚೇರಿ | 0 | 0 | 6 | 44 | 50 | 13 | 0 | 22 | 52 | 87 |
| ಪಂಜಾಬ್ | 5,934 | 3,171 | 3,522 | 5,282 | 17,909 | 1,260 | 225 | 295 | 2,095 | 3,875 |
| ರಾಜಸ್ತಾನ | 2,025 | 601 | 27 | 80 | 2,733 | 16 | 35 | 2 | 38 | 91 |
| ಸಿಕ್ಕಿಂ | 516 | 918 | 1,008 | 1,096 | 3,538 | 8 | 7 | 40 | 170 | 225 |
| ತಮಿಳು ನಾಡು | 28 | 1,323 | 1,947 | 2,945 | 6,243 | 16 | 522 | 496 | 1,893 | 2,927 |
| ತೆಲಂಗಾಣ | 4,237 | 2,293 | 8,749 | 3,443 | 18,722 | 629 | 245 | 2,157 | 839 | 3,870 |
| ತ್ರಿಪುರ | 2,386 | 2,428 | 765 | 75 | 5,654 | 115 | 110 | 26 | 64 | 315 |
| ಉತ್ತರ ಪ್ರದೇಶ | 96,199 | 8,850 | 41 | 324 | 1,05,414 | 2,376 | 512 | 2 | 69 | 2,959 |
| ಉತ್ತರಾಖಂಡ್ | 615 | 13 | 258 | 1,206 | 2,092 | 7 | 9 | 6 | 223 | 245 |
| ಪಶ್ಚಿಮ ಬಂಗಾಳ | 65,337 | 9,329 | 3,685 | 18,001 | 96,352 | 2,177 | 94 | 560 | 3,671 | 6,502 |
| ಒಟ್ಟು | **3,05,002** | **1,43,449** | **62,038** | **60,874** | **5,71,363** | **14,413** | **7,904** | **9,400** | **29,236** | **60,953** |

ಮೂಲ: UDISE 2017-18

ಕೋಷ್ಟಕ 8 ರಲ್ಲಿ ಸ್ಪಷ್ಟವಾಗಿ ಕಾಣುವ ಹಾಗೆ ಭಾರತದುದ್ದಗಲಕ್ಕೂ ಇರುವ ಶಾಲೆಗಳಲ್ಲಿ ಕಾಲುಭಾಗದಷ್ಟು (1/4) ಶಾಲೆಗಳಲ್ಲಿ ಕನಿಷ್ಠ ಒಬ್ಬರು ಗುತ್ತಿಗೆ ಆಧಾರಿತ ಶಿಕ್ಷಕರಿದ್ದಾರೆ. ಇಂತಹ ಶಾಲೆಗಳ ಪ್ರಮಾಣದಲ್ಲಿ ರಾಜ್ಯವಾರು ಭಿನ್ನತೆಗಳಿವೆ. ಕೋಷ್ಟಕವು ಶೇ. 40 ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಇಂತಹ ಶಾಲೆಗಳನ್ನು ಹೊಂದಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳನ್ನು ಕೂಡ ಎತ್ತಿ ತೋರಿಸುತ್ತದೆ. ಭಾರತದಲ್ಲಿ ಶೇ. 6.25 ಶಾಲೆಗಳು ಕೇವಲ ಗುತ್ತಿಗೆ ಆಧಾರಿತ ಶಿಕ್ಷಕರ ಮೂಲಕ ಕಾರ್ಯನಿರ್ವಹಿಸುತ್ತಿದ್ದರೂ ಅರುಣಾಚಲ ಪ್ರದೇಶ, ಜಾರ್ಖಂಡ್, ಮೇಘಾಲಯ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಪರಿಸ್ಥಿತಿಯು ಸಾಕಷ್ಟು ಗಂಭೀರವಾಗಿದೆ.

ಭಾರತದಲ್ಲಿ ಎಲ್ಲಾ ಶಿಕ್ಷಕರೂ ಗುತ್ತಿಗೆ ಅಧಾರದ ಮೇಲೆ ನೇಮಕಗೊಂಡಿರುವಂತಹ 57,361 ಪ್ರಾಥಮಿಕ ಶಾಲೆಗಳಿದ್ದು, ಇವು ಒಟ್ಟು ಪ್ರಾಥಮಿಕ ಶಾಲೆಗಳ ಶೇ. 8.21 ಆಗಿದೆ. ನಂತರದಲ್ಲಿ 9,021 (ಶೇ.3.1) ಹಿರಿಯ ಪ್ರಾಥಮಿಕ, 1,460 (ಶೇ.2.4) ಪ್ರೌಢಶಾಲೆ ಹಾಗೂ 603 (ಶೇ.1.2) ಉನ್ನತ ಪ್ರೌಢಶಾಲೆಗಳು ಕೇವಲ ಗುತ್ತಿಗೆ ಆಧಾರಿತ ಶಿಕ್ಷಕರಿಂದಾಗಿ ಕಾರ್ಯ ನಿರ್ವಹಿಸುತ್ತಿವೆ (UDISE 2017-18).

ರಾಜ್ಯ ಶಿಕ್ಷಣ ಇಲಾಖೆಗಳು ವಿಶೇಷವಾಗಿ ಅಸ್ಸಾಮ್, ಅರುಣಾಚಲ ಪ್ರದೇಶ, ಬಿಹಾರ, ಜಾರ್ಖಂಡ್, ಮೇಘಾಲಯ, ಒಡಿಶಾ ಹಾಗೂ ಪಶ್ಚಿಮ ಬಂಗಾಳಗಳಲ್ಲಿ 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ಉದ್ದೇಶಿಸಿದಂತೆ ಸಮತೆಯ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಕಡ್ಡಾಯವಾಗಿ ಮಧ್ಯಪ್ರವೇಶಿಸಲೇಬೇಕಿದೆ.

**ಕೋಷ್ಟಕ 8. ಎಲ್ಲಾ ಶಿಕ್ಷಕರು ಅಥವಾ ಕೆಲವು ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಶಾಲೆಗಳ ಸಂಖ್ಯೆ ಮತ್ತು ಶೇಕಡಾ ಪ್ರಮಾಣ, 2017-18**

| | ಎಲ್ಲಾ ಶಾಲೆಗಳು | | | | |
|---|---|---|---|---|---|
| 2017-18 | ಒಟ್ಟು ಶಾಲೆಗಳು | ಗುತ್ತಿಗೆ ಆಧಾರದ ಮೇಲೆ ಯಾವುದೇ ಶಿಕ್ಷಕರು ನೇಮಕಗೊಂಡಿರುವ ಶಾಲೆಗಳ ಸಂಖ್ಯೆ | ಗುತ್ತಿಗೆ ಆಧಾರದ ಮೇಲೆ ಯಾವುದೇ ಶಿಕ್ಷಕರು ನೇಮಕಗೊಂಡಿರುವ ಶಾಲೆಗಳ ಶೇಕಡಾ ಪ್ರಮಾಣ | ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಶಾಲೆಗಳ ಸಂಖ್ಯೆ | ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಶಾಲೆಗಳ ಶೇಕಡಾ ಪ್ರಮಾಣ |
| ಅರುಣಾಚಲ ಪ್ರದೇಶ | 3,447 | 2,931 | 85.03 | 1,345 | 39.02 |
| ಅಸ್ಸಾಮ್ | 50,965 | 22,316 | 43.79 | 3,206 | 6.29 |
| ಚಂಡೀಘಢ್ | 121 | 116 | 95.87 | - | - |

| | | | | | |
|---|---|---|---|---|---|
| ದಾದ್ರ ಮತ್ತು ನಗರ ಹವೇಲಿ | 300 | 271 | 90.33 | 37 | 12.33 |
| ದಮನ್ ಮತ್ತು ದಿಯು | 115 | 94 | 81.74 | 1 | 0.87 |
| ಹರಿಯಾಣ | 14,450 | 6,350 | 43.94 | 246 | 1.70 |
| ಹಿಮಾಚಲ ಪ್ರದೇಶ | 15,465 | 7,504 | 48.52 | 1,267 | 8.19 |
| ಜಾರ್ಖಂಡ್ | 39,703 | 32,717 | 82.40 | 19,763 | 49.78 |
| ಕರ್ನಾಟಕ | 50,066 | 263 | 0.53 | 51 | 0.10 |
| ಲಕ್ಷದ್ವೀಪ | 45 | 34 | 75.56 | - | - |
| ಮೇಘಾಲಯ | 7,805 | 5,894 | 75.52 | 4,558 | 58.40 |
| ಮಿಝೋರಾಮ್ | 2,582 | 1,615 | 62.55 | 414 | 16.03 |
| ದಿಲ್ಲಿ ರಾಷ್ಟ್ರ ರಾಜಧಾನಿ ಪ್ರದೇಶ | 2,787 | 1,840 | 66.02 | - | - |
| ಒಡಿಶಾ | 56,313 | 41,859 | 74.33 | 5,188 | 9.21 |
| ಪಂಜಾಬ | 19,515 | 10,053 | 51.51 | 915 | 4.69 |
| ಸಿಕ್ಕಿಮ್ | 853 | 650 | 76.20 | 7 | 0.82 |
| ತ್ರಿಪುರಾ | 4,314 | 2,526 | 58.55 | 212 | 4.91 |
| ಉತ್ತರ ಪ್ರದೇಶ | 1,63,114 | 64,995 | 39.85 | 3,486 | 2.14 |
| ಪಶ್ಚಿಮ ಬಂಗಾಳ | 83,292 | 42,304 | 50.79 | 17,831 | 21.41 |
| **ಒಟ್ಟು** | 10,94,543 | 2,80,410 | 25.62 | 68,445 | 6.25 |

ಮೂಲ : UDISE 2017-18

ದೇಶದಾದ್ಯಂತ ಶೇ. 79.2 ಶಾಲೆಗಳು 'ಚಿಕ್ಕ ಶಾಲೆ' ಗಳಾಗಿದ್ದು ಅಲ್ಲಿ ದಾಖಲಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು 90 ವರೆಗೆ ಇರುತ್ತದೆ ಹಾಗೂ ಈ ಶಾಲೆಗಳಲ್ಲಿ ಕೆಲಸ ಮಾಡುವ ಎಲ್ಲಾ ಶಿಕ್ಷಕರೂ ಗುತ್ತಿಗೆ ಅಧಾರದ ಮೇಲೇ ನೇಮಕಗೊಂಡವರಾಗಿರುತ್ತಾರೆ. ಇದರಿಂದಾಗಿ ಅವು ಅತ್ಯಂತ ವಂಚಿತ ಶಾಲೆಗಳಾಗಿವೆ (ಕೋಷ್ಟಕ 9). 2017-18 ರ UDISE ದತ್ತಾಂಶಗಳನ್ನು ವಿಶ್ಲೇಷಿಸಿದಾಗ ಅತ್ಯಂತ ಗಂಭೀರವಾದ ಈ ಸಂಗತಿಯು ಕಂಡುಬರುತ್ತದೆ. ಗುತ್ತಿಗೆ ಆಧಾರಿತ ಶಿಕ್ಷಕರ ವ್ಯವಸ್ಥೆ/ಪದ್ಧತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಮಾಡುವ ಯಾವುದೇ ಪ್ರಯತ್ನವು ಆರಂಭದ/ತಳಹದಿ ಕಲಿಕೆಯು ನಡೆಯುವ ಪ್ರಾಥಮಿಕ ಶಾಲೆಗಳಿಂದಲೇ ಆರಂಭವಾಗಬೇಕು.

ಅದರಲ್ಲಿಯೂ ವಿಶೇಷವಾಗಿ, ಎಲ್ಲಾ ಶಿಕ್ಷಕರೂ ಗುತ್ತಿಗೆ ಅಧಾರದ ಮೇಲೇ ನೇಮಕಗೊಂಡಿರುವ ಹಾಗೂ ೬೦ ಅಥವಾ ಅದಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳ ದಾಖಲಾತಿಯಿರುವ ಶಾಲೆಗಳಿಂದಲೇ ಆರಂಭವಾಗಬೇಕು. ಆಡಳಿತಗಾರರು ಹಾಗೂ ನೀತಿನಿರೂಪಕರು ಈ ಕುರಿತು ತುರ್ತಾಗಿ ಗಮನವನ್ನು ಹರಿಸಬೇಕಿದೆ.

**ಕೋಷ್ಟಕ 9. ದಾಖಲಾತಿಯ ವ್ಯಾಪ್ತಿ ಹಾಗೂ ಶೈಕ್ಷಣಿಕ ಹಂತದ ಆಧಾರದಲ್ಲಿ ಎಲ್ಲಾ ಶಿಕ್ಷಕರೂ ಗುತ್ತಿಗೆ ಅಧಾರಿತರಾಗಿರುವ ಶಾಲೆಗಳ ಸಂಖ್ಯೆ**

| ಅಖಿಲ ಭಾರತ | **30 ಅಥವಾ ಅದಕ್ಕಿಂತಲೂ ಕಡಿಮೆ** | **31-60** | **61-90** | **91-120** | **120 ಕ್ಕಿಂತಲೂ ಹೆಚ್ಚು** | **ಒಟ್ಟು** |
|---|---|---|---|---|---|---|
| ಪ್ರಾಥಮಿಕ 1-5 ನೇ ತರಗತಿ | 18,002 | 21,427 | 9,250 | 4,323 | 4,359 | 57,361 |
| ಹಿರಿಯ ಪ್ರಾಥಮಿಕ 1-8 ಅಥವಾ 6-8 ನೇ ತರಗತಿ | 1,845 | 1,960 | 1,397 | 1,274 | 2,545 | 9,021 |
| ಪ್ರೌಢಶಾಲೆ 1-10, 6-10 ಹಾಗೂ 9-10 ನೇ ತರಗತಿ | 93 | 111 | 107 | 92 | 1,057 | 1,460 |
| ಉನ್ನತ ಪ್ರೌಢಶಾಲೆ 1-12, 6-12, 9-12 ಮತ್ತು 11-12 ನೇ ತರಗತಿ | 9 | 23 | 23 | 27 | 521 | 603 |
| ಎಲ್ಲಾ ಶಾಲೆಗಳು | 19,949 | 23,521 | 10,777 | 5,716 | 8,482 | 68,445 |

ಮೂಲ : UDISE 2017-18

ಕೋಷ್ಟಕ ೧೦ ರಲ್ಲಿ ಸ್ಪಷ್ಟವಾಗಿ ತೋರುವ ಹಾಗೆ, ಕೇವಲ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿರುವ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳು ದಾಖಲಾತಿ ಪಡೆದಿರುವುದು ಗ್ರಾಮೀಣ ಭಾಗದಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ. ಶೇ. ೯೫.೮೩ ಮಕ್ಕಳು ಅಧ್ಯಯನ ಮಾಡುವುದು ಗ್ರಾಮೀಣ ಪ್ರದೇಶಗಳಲ್ಲಿಯೇ. ಸಾಮಾನ್ಯ ಶಿಕ್ಷಕರು ಉತ್ತಮ ಸಂಪರ್ಕ ವ್ಯವಸ್ಥೆ ಹಾಗೂ ಉತ್ತಮ ಸಂಪನ್ಮೂಲಗಳನ್ನು ಹೊಂದಿರುವ ನಗರ ಪ್ರದೇಶದಲ್ಲಿನ ಶಾಲೆಗಳಲ್ಲಿಯೇ ಇರಲು ತಮ್ಮೆಲ್ಲ ಪ್ರಭಾವವನ್ನು ಬಳಸಿಕೊಳ್ಳುತ್ತಾರೆ ಎನ್ನುವುದನ್ನು ಗ್ರಾಮೀಣ/ನಗರ ವಿಭಜನೆಯು ಸ್ಪಷ್ಟವಾಗಿ ತೋರಿಸುತ್ತದೆ.

*ಕೋಷ್ಟಕ 10. ಗ್ರಾಮೀಣ/ನಗರ ಪ್ರದೇಶಗಳ ಆಧಾರದ ಮೇಲೆ ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರಿತರಾಗಿರುವ ಶಾಲೆಗಳಲ್ಲಿ ದಾಖಲಾತಿ*

| | ಹುಡುಗರು | ಹುಡುಗಿಯರು | ಒಟ್ಟು | ಶೇಕಡಾ ಪ್ರಮಾಣ |
|---|---|---|---|---|
| ಗ್ರಾಮೀಣ ಭಾರತ | 21,18,709 | 23,30,937 | 44,49,646 | 95.83 |
| ನಗರ ಭಾರತ | 84,026 | 1,09,456 | 1,93,482 | 4.17 |
| ಒಟ್ಟು | 22,02,735 | 24,40,393 | 46,43,128 | |

ಮೂಲ: UDISE, 2017-18

ಕೋಷ್ಟಕ 11, ಕೇವಲ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿರುವ ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಇರುವ ರಾಜ್ಯ ಹಾಗೂ ಹಂತ ನಿರ್ದಿಷ್ಟವಾದ ವ್ಯತ್ಯಾಸಗಳನ್ನು ತೋರಿಸುತ್ತದೆ. ಪ್ರಾಥಮಿಕ ಹಂತವನ್ನು ತೆಗೆದುಕೊಂಡರೆ, ಅರುಣಾಚಲ ಪ್ರದೇಶದಲ್ಲಿ ಶೇ.25.7, ಜಾರ್ಖಂಡ್‌ನಲ್ಲಿ ಶೇ.37, ಮೇಘಾಲಯದಲ್ಲಿ ಶೇ.45, ಮೀಝೋರಾಮ್‌ನಲ್ಲಿ ಶೇ.14.1, ಪಶ್ಚಿಮ ಬಂಗಾಳದಲ್ಲಿ ಶೇ. 14.5 ವಿದ್ಯಾರ್ಥಿಗಳು ಹಾಗೂ ಹಿರಿಯ ಪ್ರಾಥಮಿಕ ಹಂತವನ್ನು ತೆಗೆದುಕೊಂಡರೆ, ಮೇಘಾಲಯದಲ್ಲಿ ಶೇ. 68.4 ವಿದ್ಯಾರ್ಥಿಗಳು ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಶಾಲೆಗಳಲ್ಲಿ ದಾಖಲಾತಿ ಪಡೆದಿದ್ದಾರೆ.

ಕೋಷ್ಟಕ 11. *ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರಿತರೇ ಆಗಿರುವ ಸರ್ಕಾರೀ ಶಾಲೆಗಳಲ್ಲಿ ಹೆಚ್ಚಿನ ಶೇಕಡಾ ಪ್ರಮಾಣದಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿರುವ ರಾಜ್ಯಗಳು*

| **UDISE 2017-18** | **ಪ್ರಾಥಮಿಕ (ತರಗತಿ 1-5)** | | | **ಹಿರಿಯ ಪ್ರಾಥಮಿಕ (ತರಗತಿ 6-8)** | | | **ಪ್ರೌಢಶಾಲೆ(ತರಗತಿ 9-10)** | | | **ಉನ್ನತ ಪ್ರೌಢಶಾಲೆ (ತರಗತಿ 11-12)** | | |
|---|---|---|---|---|---|---|---|---|---|---|---|---|
| | ಹುಡುಗ | ಹುಡುಗಿ | ಒಟ್ಟು | ಹುಡುಗ | ಹುಡುಗಿ | ಒಟ್ಟು | ಹುಡುಗ | ಹುಡುಗಿ | ಒಟ್ಟು | ಹುಡುಗ | ಹುಡುಗಿ | ಒಟ್ಟು |
| ಮೇಘಾಲಯ | 45.1 | 45.0 | 45.0 | 68.4 | 68.5 | 68.4 | 7.7 | 7.5 | 7.6 | 0.0 | 0.0 | 0.0 |

| | | | | | | | | | | | | |
|---|---|---|---|---|---|---|---|---|---|---|---|---|
| ಜಾರ್ಖಂಡ್ | 37.2 | 36.8 | 37.0 | 6.4 | 8.7 | 7.6 | 0.6 | 4.8 | 2.8 | 4.0 | 8.6 | 6.4 |
| ಅರುಣಾಚಲ ಪ್ರದೇಶ | 26.8 | 24.6 | 25.7 | 5.8 | 19.0 | 13.0 | 0.9 | 2.5 | 1.7 | 1.1 | 1.0 | 1.0 |
| ಪಶ್ಚಿಮ ಬಂಗಾಳ | 14.5 | 14.5 | 14.5 | 5.5 | 5.5 | 5.5 | 0.0 | 0.0 | 0.0 | 0.0 | 0.0 | 0.0 |
| ಮಿಝೋರಾಮ್ | 14.1 | 13.8 | 13.9 | 7.1 | 5.8 | 6.5 | 16.3 | 14.8 | 15.5 | 0.4 | 0.5 | 0.4 |
| ಒಡಿಶಾ | 6.6 | 6.4 | 6.5 | 2.0 | 1.9 | 1.9 | 0.6 | 0.8 | 0.7 | 1.2 | 1.2 | 1.2 |
| ತೆಲಂಗಾಣ | 6.0 | 7.0 | 6.5 | 4.9 | 13.7 | 9.4 | 0.6 | 9.4 | 5.3 | 6.6 | 7.2 | 6.9 |
| ಅಖಿಲ ಭಾರತ | **5.3** | **5.2** | **5.2** | **1.8** | **2.5** | **2.2** | **0.7** | **1.3** | **1.0** | **0.6** | **0.9** | **0.7** |

ಮೂಲ : UDISE 2017-18

ಕೇವಲ ಒಬ್ಬರೇ ಗುತ್ತಿಗೆ ಆಧಾರಿತ ಶಿಕ್ಷಕರಿರುವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ 5,33,882 ಮಕ್ಕಳು, ಇಬ್ಬರು ಗುತ್ತಿಗೆ ಆಧಾರಿತ ಶಿಕ್ಷಕರಿರುವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ 5,33,882 ಮಕ್ಕಳು ಪ್ರವೇಶ ಪಡೆದಿರುವುದು ಬಹಳ ಗಂಭೀರವಾದ ಮತ್ತು ತುರ್ತಾಗಿ ಗಮನ ಹರಿಸಬೇಕಾದ ವಿಷಯವಾಗಿದೆ. (UDISE 2017-18)

### 6. ಗುತ್ತಿಗೆ ಆಧಾರಿತ ಶಿಕ್ಷಕರು ಖಾಯಂ ಶಿಕ್ಷಕರಂತೆ ಅರ್ಹತೆ ಹೊಂದಿದ್ದಾರೆಯೇ?

ಗುತ್ತಿಗೆ ಆಧಾರಿತ ಶಿಕ್ಷಕರ ವೃತ್ತಿಪರ ಅರ್ಹತೆಯು ನಿಧಾನವಾಗಿ ಸುಧಾರಿಸುತ್ತಿದೆ. 2011-12 ರಲ್ಲಿ ಶೇ. 41.8 ರಷ್ಟಿದ್ದ ವೃತ್ತಿಪರ ತರಬೇತಿ ಪಡೆದಿರದ ಗುತ್ತಿಗೆ ಆಧಾರಿತ ಶಿಕ್ಷಕರ ಪ್ರಮಾಣವು 2017-18 ರಲ್ಲಿ ಶೇ.29.5 ಕ್ಕೆ ಇಳಿದಿದೆ (ಕೋಷ್ಟಕ 12).

**ಕೋಷ್ಟಕ 12.** ***ಗುತ್ತಿಗೆ ಆಧಾರಿತ ಶಿಕ್ಷಕರ ವೃತ್ತಿಪರ ಅರ್ಹತೆಯ ಮೇಲ್ನೋಟ/ಸ್ಥೂಲನೋಟ***

| ಶೈಕ್ಷಣಿಕ ವರ್ಷ | ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ | ವೃತ್ತಿಪರ ಅರ್ಹತೆಯನ್ನು ಪಡೆದಿರದ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆ | ವೃತ್ತಿಪರ ಅರ್ಹತೆಯನ್ನು ಪಡೆದಿರದ ಗುತ್ತಿಗೆ ಆಧಾರಿತ ಶಿಕ್ಷಕರ ಶೇಕಡಾ ಪ್ರಮಾಣ |
|---|---|---|---|
| 2011-12 | 3,16,091 | 1,32,037 | 41.8 |
| 2012-13 | 5,62,504 | 2,53,022 | 45.0 |
| 2013-14 | 5,96,005 | 2,46,427 | 41.3 |
| 2014-15 | 6,63,074 | 2,76,075 | 41.6 |
| 2015-16 | 6,41,627 | 2,55,409 | 39.8 |
| 2016-17 | 6,16,149 | 2,09,529 | 34.0 |
| 2017-18 | 6,32,316 | 1,86,777 | 29.5 |

UDISE, ವಿವಿಧ ವರ್ಷಗಳು

ವೃತ್ತಿಪರ ಅರ್ಹತೆಗಳಿಲ್ಲದ ಗುತ್ತಿಗೆ ಆಧಾರಿತ ಶಿಕ್ಷಕರ ಪ್ರಮಾಣವು ಬೇರೆ ಬೇರೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದೆ. ಅದರ ವ್ಯಾಪ್ತಿಯು ಶೂನ್ಯದಿಂದ ಶೇ.81.2 ವರೆಗೂ ಇದೆ. ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪ್ರಮಾಣವು ಶೇ.34.6 ರಿಂದ ಶೇ.81.2 ವರೆಗಿನದಾಗಿದೆ.

ದೇಶದಲ್ಲಿ ಶೇ.68.9 ಗ್ರಾಮೀಣ ಹಾಗೂ ಶೇ. 85.5 ನಗರ ಪ್ರದೇಶದ ಗುತ್ತಿಗೆ ಆಧಾರಿತ ಶಿಕ್ಷಕರು ಅಗತ್ಯ ವೃತ್ತಿಪರ ಅರ್ಹತೆಯನ್ನು ಹೊಂದಿದ್ದಾರೆ. 2017-18 ರಲ್ಲಿ ವೃತ್ತಿಪರ ಅರ್ಹತೆಗಳಿಲ್ಲದ ಗುತ್ತಿಗೆ ಆಧಾರಿತ ಶಿಕ್ಷಕರ ಸಂಖ್ಯೆಯೇ 1,86,777 ರಷ್ಟು ಅಗಾಧವಾಗಿತ್ತು. ಪಶ್ಚಿಮ ಬಂಗಾಳವು ವೃತ್ತಿಪರ ಅರ್ಹತೆಗಳಿಲ್ಲದ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ (83,551) ಹೊಂದಿದ್ದು ಆನಂತರದಲ್ಲಿ ಉತ್ತರ ಪ್ರದೇಶ (31,264), ಬಿಹಾರ (17,765), ಮೇಘಾಲಯ (11,434) ಹಾಗೂ ಒಡಿಶಾ (10,204) ಗಳಿವೆ. ಈಶಾನ್ಯ ರಾಜ್ಯಗಳು (ಮೀಝೋರಾಮ್‌ನ್ನು ಹೊರತುಪಡಿಸಿ), ಬಿಹಾರ, ಜಮ್ಮು ಮತ್ತು ಕಾಶ್ಮೀರ, ರಾಜಸ್ತಾನ, ತ್ರಿಪುರಾ ಹಾಗೂ ಉತ್ತರಾಖಂಡ್ ರಾಜ್ಯಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ವೃತ್ತಿಪರ ತರಬೇತಿಯನ್ನು ಹೊಂದಿರದ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿವೆ.

ದೇಶದಲ್ಲಿನ ಕೇವಲ ಶೇ.22.9 ಗುತ್ತಿಗೆ ಆಧಾರಿತ ಶಿಕ್ಷಕರು ಮಾತ್ರ ಸೇವಾನಿರತ ತರಬೇತಿಯ ಮೂಲಕ ವೃತ್ತಿಪರ ಅಭಿವೃದ್ಧಿಯ ಅವಕಾಶವನ್ನು ಪಡೆದಿದ್ದಾರೆ. ನಾಲ್ಕು ರಾಜ್ಯಗಳು -ತೆಲಂಗಾಣ, ತಮಿಳು ನಾಡು, ಪಂಜಾಬ ಮತ್ತು ಜಾರ್ಖಂಡ್- ಕನಿಷ್ಠ ಅರ್ಧದಷ್ಟು ಗುತ್ತಿಗೆ ಆಧಾರಿತ ಶಿಕ್ಷಕರಿಗೆ ಸೇವಾನಿರತ ತರಬೇತಿಯನ್ನು ನೀಡಿವೆ. ಗುತ್ತಿಗೆ ಆಧಾರಿತ ಶಿಕ್ಷಕರೆಲ್ಲರೂ ಸೇವಾನಿರತ ತರಬೇತಿಯನ್ನು ಪಡೆದುಕೊಂಡಿರುವ ಏಕೈಕ ರಾಜ್ಯವೆಂದರೆ ತೆಲಂಗಾಣ ಹಾಗೂ ಬಹುತೇಕ ಅವರೆಲ್ಲರೂ ಅಗತ್ಯ ವೃತ್ತಿಪರ ಅರ್ಹತೆಯನ್ನು ಹೊಂದಿದ್ದಾರೆ.

ಉಪಸಂಹಾರ :

ಶಿಕ್ಷಕರ ಕುರಿತಾಗಿ ನವೀಕೃತ ದೃಷ್ಟಿಕೋನವನ್ನು ಹೊಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ವಿವಿಧ ರೀತಿಯ ಗುತ್ತಿಗೆ ಆಧಾರಿತ ಶಿಕ್ಷಕರ ಭವಿಷ್ಯವು ಅಸ್ಪಷ್ಟ ಹಾಗೂ ಡೋಲಾಯಮಾನ ಸ್ಥಿತಿಯಲ್ಲಿದೆ. ಗುತ್ತಿಗೆ ಆಧಾರಿತ ಶಿಕ್ಷಕರ ಬಗ್ಗೆ ಏನನ್ನೂ ಹೇಳದೇ ಇದ್ದರೂ (ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019 ಕುರಿತಾದ ಕಸ್ತೂರಿರಂಗನ್ ಸಮಿತಿಯಂತಲ್ಲದೇ) ಇದು ಮಾನವೀಯ ಕಾಳಜಿಗಳನ್ನುಳ್ಳ ಸೇವಾ ಪರಿಸರವನ್ನುಹೊಂದುವ ಹಾಗೂ ಶಾಲಾ ಶಿಕ್ಷಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸುವ ಅಗತ್ಯವನ್ನು ಅನುಮೋದಿಸುತ್ತದೆ. ಇದರಲ್ಲಿ ವೃತ್ತಿಪರ ಅಭಿವೃದ್ಧಿಯನ್ನು ಹೊಂದುವ ನಿಟ್ಟಿನಲ್ಲಿ ಸತತವಾಗಿ ತೊಡಗಿಕೊಳ್ಳುವುದೂ ಸೇರಿದೆ. ವೇತನ ಹಾಗೂ ಸೇವಾ ನಿಬಂಧನೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಭಿನ್ನತೆಯನ್ನು ಹೊಂದಿರುವ ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದು ಅಂತಹ ಶಿಕ್ಷಕರಿಗಷ್ಟೇ ಅಲ್ಲ, ಇತರ ಶಿಕ್ಷಕರ ಉತ್ಸಾಹವನ್ನೂ ಕೂಡ ಕುಗ್ಗಿಸಿಬಿಡುತ್ತದೆ. ಇದರಿಂದ ಶಿಕ್ಷಕರ ಸ್ಥಾನಮಾನವೂ ಕಡಿಮೆಯಾಗುತ್ತದೆ. ಜೊತೆಗೆ ಶಾಲೆಯಲ್ಲಿ ಮತ್ತು ವ್ಯವಸ್ಥೆಯ ಒಳಗೇ ಅನಪೇಕ್ಷಿತ ವಾತಾವರಣ ಹುಟ್ಟಿಕೊಳ್ಳಲು ಕಾರಣವಾಗುತ್ತದೆ. ಇದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಬೀರುವ ಪರಿಣಾಮವು ಅತ್ಯಂತ ಹಾನಿಕಾರಕವಾದುದು.

ಭಾರತವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲೆಂದರೆ, ಎಲ್ಲ ಮಕ್ಕಳೂ ಕಲಿಯುವಂತೆ ಮಾಡುವುದು. ಗ್ರಾಮೀಣ ಪ್ರದೇಶಗಳಲ್ಲಿ ಅನುಕೂಲ ವಂಚಿತ ಹಿನ್ನೆಲೆಯ ಮಕ್ಕಳು ಕಲಿಯುವ ಶಾಲೆಗಳಿಂದ ಮೊದಲ್ಗೊಂಡು ಅಸಮ ಪ್ರಮಾಣದಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಹೊಂದಿರುವ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಮೊಟ್ಟ ಮೊದಲು ತುರ್ತಾಗಿ ಕ್ರಮಬದ್ಧಗೊಳಿಸುವ ಅಗತ್ಯವಿದೆ. ಅದೇ ವೇಳೆಗೆ, ಅಗತ್ಯ ಅರ್ಹತೆಗಳನ್ನು ಹೊಂದಿರದ ಗುತ್ತಿಗೆ ಆಧಾರಿತ ಶಿಕ್ಷಕರು, ಇತರ ಶಿಕ್ಷಕರಿಗೆ ಲಭ್ಯವಿರುವ ನಿರಂತರ ವೃತ್ತಿಪರ ಅಭಿವೃದ್ಧಿ ಹಾಗೂ ಇನ್ನಿತರ ಅವಕಾಶಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಅವರ ವೃತ್ತಿಪರ ಹಾಗೂ ಶೈಕ್ಷಣಿಕ ಸಾಮರ್ಥ್ಯಗಳನ್ನು ನಿರ್ಮಿಸಲು ಅಗತ್ಯವಿರುವ ಕಾರ್ಯತಂತ್ರ ಮತ್ತು ಯೋಜನೆಗಳನ್ನು ವಿನ್ಯಾಸಗೊಳಿಸಬೇಕಿದೆ. ವಿಶೇಷವಾಗಿ, ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರಿತರೇ ಆಗಿರುವ ಶಾಲೆಗಳತ್ತ ತುರ್ತು ಗಮನವನ್ನು ಹರಿಸುವ ಅಗತ್ಯವಿದೆ. ಏಕೆಂದರೆ, ಕೋವಿಡ್-19 ಪಿಡುಗಿನ ಅವಧಿಯಲ್ಲಿ ಅವರ ಗುತ್ತಿಗೆ ಒಪ್ಪಂದಗಳನ್ನು ನವೀಕರಿಸಿರುವುದಿಲ್ಲ.

ಹೀಗೆ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲೆಲ್ಲೆಡೆ ಗುತ್ತಿಗೆ ಆಧಾರಿತ ಶಿಕ್ಷಕರ ಪ್ರಮಾಣವು ಹೆಚ್ಚೇ ಇರುವಾಗ, ಅವರನ್ನು ಕ್ರಮಬದ್ಧಗೊಳಿಸುವ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ, ವಿವಿಧ ಶಾಲಾಹಂತಗಳಲ್ಲಿ ಅವರ ಸಂಖ್ಯೆ ಎಷ್ಟಿದೆ

ಮತ್ತು ಅವರು ಯಾವ ರೀತಿಯಲ್ಲಿ ಹರಡಿಕೊಂಡಿದ್ದಾರೆ, ಅವರನ್ನು ಏತಕ್ಕಾಗಿ ತೊಡಗಿಸಿಕೊಳ್ಳಲಾಗಿದೆ, ಅವರನ್ನು ಅರೆಕಾಲಿಕ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆಯೇ, ಅವರ ವೃತ್ತಿಪರ ಅರ್ಹತೆಗಳೇನು ಎನ್ನುವುದರ ಜೊತೆಗೆ ಎಲ್ಲಾ ಶಿಕ್ಷಕರೂ ಗುತ್ತಿಗೆ ಆಧಾರಿತರೇ ಆಗಿರುವ ಶಾಲೆಗಳು ಇದ್ದಂತೆ ಕೆಲವೇ ಗುತ್ತಿಗೆ ಅಧಾರಿತ ಶಿಕ್ಷಕರಿರುವ ಶಾಲೆಗಳೂ ಇವೆ, ಸಮಗ್ರ ಶಿಕ್ಷಣವು 2019-20 ರ ಶೈಕ್ಷಣಿಕ ವರ್ಷಕ್ಕಾಗಿ ಸಾಕಷ್ಟು ಸಂಖ್ಯೆಯ ಗುತ್ತಿಗೆ ಆಧಾರಿತ ಶಿಕ್ಷಕರ ನೇಮಕಾತಿಗೆ ಮಂಜೂರಾತಿಯನ್ನು ನೀಡಿದೆ ಎನ್ನುವ ಸಂಗತಿಗಳೂ ಸೇರಿ ತಳಮಟ್ಟದಲ್ಲಿನ ವಾಸ್ತವತೆಯಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕಿದೆ.

ಇದಕ್ಕೆ ಸಂಬಂಧಿಸಿದ ಇನ್ನೊಂದು ಸವಾಲೆಂದರೆ, ದೈಹಿಕ ಶಿಕ್ಷಣ, ಕಲೆ ಮತ್ತು ಕುಶಲಕಲೆ, ಸಂಗೀತ ಮತ್ತು ವೃತ್ತಿಶಿಕ್ಷಣ, ಅಂಗವೈಕಲ್ಯಗಳನ್ನು ಹೊಂದಿರುವ ಮಕ್ಕಳಿಗೆ ವಿಶೇಷ ಶಿಕ್ಷಣ ಮುಂತಾದ ವಿಷಯಗಳನ್ನು ಬೋಧಿಸಲು ಶಿಕ್ಷಕರ ಅಗತ್ಯವಿದ್ದು ಅದಕ್ಕಾಗಿ ಸ್ಥಳೀಯವಾಗಿ ನೇಮಿಸಿಕೊಂಡ ಅರೆಕಾಲಿಕ ಶಿಕ್ಷಕರದ್ದು. ಈ ವಿಷಯಗಳನ್ನು ಬೋಧಿಸಲು ಅರೆಕಾಲಿಕ ಶಿಕ್ಷಕರು, ಅತಿಥಿ ಶಿಕ್ಷಕರು ಮುಂತಾದವರ ಜಾಗದಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿ 2020 ರಲ್ಲಿ ಸ್ಪಷ್ಟವಾಗಿ ಉಲ್ಲೆಖಿಸಿದ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಇತರ ಶಿಕ್ಷಕರನ್ನು ನೇಮಿಸಲು ಸಮಯ ನಿರ್ಬಂಧಿತ ಯೋಜನೆಯು ಅತ್ಯಗತ್ಯ. ಅಂತಹ ವಿಧಾನಗಳೆಂದರೆ, ಶಾಲಾ ಕ್ಲಸ್ಟರ್ ಮಟ್ಟದ ಶಿಕ್ಷಕರನ್ನು ತೊಡಗಿಸಿಕೊಳ್ಳುವುದು ಹಾಗೂ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅಥವಾ ಸ್ವಯಂಸೇವೆ ಸಲ್ಲಿಸಲು ಸಿದ್ಧರಾಗಿರುವ ಸ್ಥಳೀಯ ವ್ಯಕ್ತಿಗಳನ್ನು (ಸಂಪನ್ಮೂಲ) ಪಟ್ಟಿ ಮಾಡುವುದರ ಮೂಲಕ ಕಾರ್ಯಸಾಧ್ಯ ರೂಪುರೇಷೆಯೊಂದನ್ನು ತಯಾರಿಸುವುದು.

ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವನ್ನು ತೆಗೆದುಹಾಕುವ ನಿಟ್ಟಿನಲ್ಲಿ, ಮುಂದಿನ ಎರಡು ದಶಕಗಳ ಅವಧಿಯಲ್ಲಿ ವಿಷಯವಾರು ಶಿಕ್ಷಕರ ಎಷ್ಟು ಹುದ್ದೆಗಳು ಖಾಲಿ ಬೀಳಬಹುದು ಎಂಬುದನ್ನು ಅಂದಾಜಿಸಲು, ತಂತ್ರಜ್ಞಾನ ಆಧಾರಿತವಾದ, ಅಗತ್ಯ ಶಿಕ್ಷಕರ ಅಂದಾಜು ಕಾರ್ಯವನ್ನೊಳಗೊಂಡ ಸಮಗ್ರ ಯೋಜನೆಯೊಂದನ್ನು ಹಾಕಿಕೊಳ್ಳಬಹುದು. ಅದಾಗಲೇ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರು ಮತ್ತು ಸ್ಥಳೀಯ ಶಿಕ್ಷಕರೂ ಸೇರಿದಂತೆ, ಎಲ್ಲಾ ಖಾಲಿ ಹುದ್ದೆಗಳಿಗೂ ಅರ್ಹ ಶಿಕ್ಷಕರನ್ನು ನೇಮಿಸಲು ಈ ಪ್ರಕ್ರಿಯೆಯು ನೆರವಾಗುತ್ತದೆ. ಅವರಿಗೆ ವೃತ್ತಿ ನಿರ್ವಹಣೆ ಮತ್ತು ಪ್ರಗತಿಗೆ ಸೂಕ್ತವಾದ ಪ್ರೋತ್ಸಾಹವೂ ಲಭ್ಯವಿರುತ್ತದೆ.

ಶಿಕ್ಷಣ ಹಕ್ಕು ಕಾಯಿದೆಯನ್ನು 2020 ರ ರಾಷ್ಟ್ರೀಯ ಶಿಕ್ಷಣ ನೀತಿಯ ಜೊತೆಗೆ ಮರುಹೊಂದಿಸುವ ಕಾರ್ಯವು ಕಾನೂನಾತ್ಮಕ ಹಾಗೂ ಯೋಜನಾತ್ಮಕ ನಿಬಂಧನೆಗಳ ನಡುವಿನ ಯಾವುದೇ ಭಿನ್ನತೆಗಳನ್ನು ಹೋಗಲಾಡಿಸುವ ಹಾಗೂ ನೀತಿನಿರೂಪಣೆಗಳ ಪ್ರಕಾರ

ಯಾವುದೇ ಅನುಮತಿಯಿಲ್ಲದ ಪರಿಪಾಠಗಳನ್ನು ತೆಗೆದುಹಾಕುವ ದಿಸೆಯಲ್ಲಿ ಇಡುವ ಮೊಟ್ಟ ಮೊದಲ ಮುಖ್ಯ ಹೆಜ್ಜೆಯಾಗಿರುತ್ತದೆ. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ದೂರಗಾಮೀ ಉದ್ದೇಶಗಳನ್ನು ಹೊಂದಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕಿದೆ ಹಾಗೂ ಸಮಾನತೆಯ ಹಕ್ಕು ಎಂಬ ಸಂವಿಧಾನದ ಭರವಸೆಗೆ ಬದ್ಧರಾಗಬೇಕಿದೆ. ಈ ಕುರಿತು ರಾಜಕೀಯ ನೇತಾರರಂತೆಯೇ ಆಡಳಿಗಾರರೂ ಗಂಭೀರವಾಗಿ ಗಮನವನ್ನು ಹರಿಸಬೇಕಿದೆ.

ಪರಾಮರ್ಶನೆಗಳು::


1. Department of School Education and Literacy, MHRD, GOI. Various Years. UDISE and DISE. New Delhi (http://udise.in/)
2. MHRD, GOI. 1968. National Policy on Education 1968. New Delhi
3. MHRD, GOI. 1986. National Policy on Education 1986. New Delhi
4. MHRD, GOI. 2019. Draft National Education Policy. New Delhi
5. MHRD, GOI. 2019-20. PAB Minutes of Samagra Shiksha Abhiyan
6. Ministry of Education, GOI. 2020. National Education Policy 2020; New Delhi
7. Ramachandran, Vimala, Deepa Das, Ganesh Nigam and Anjali Shandilya. 2020. Contract Teachers in India: Recent Trends and Current Status. Azim Premji University, Bangalore.
8. Ramachandran, Vimala, Tara Beteille, Toby Linden, Sangeeta Dey, Sangeeta Goyal and Prerna Goel Chatterjee. 2018. Getting the Right Teachers in the Right Schools: Managing India's Teacher Workforce. The World Bank. (https://openknowledge.worldbank.org/handle/10986/28618)